ಶಿಕ್ಷಕರ ಅರ್ಹತಾ ಪರೀಕ್ಷೆ (TET) ವಿಶೇಷ

1ರಿಂದ 5ನೇ ತರಗತಿ ಶಿಕ್ಷಕರಿಗೆ :

ಪತ್ರಿಕೆ–1

ಭಾಗ 1 :

ಬಾಲ ವಿಕಾಸ ಮತ್ತು ಬೋಧನಾ ಶಾಸ್ತ್ರ – 30 ಪ್ರಶ್ನೆಗಳು

(ಚೈಲ್ಡ್ ಡೆವಲಪ್‌ಮೆಂಟ್ ಮತ್ತು ಪೆಡಾಗಾಜಿ) :

ಎ) ಬಾಲವಿಕಾಸ (ಪ್ರಾಥಮಿಕ ಶಾಲೆ ಮಕ್ಕಳು) 15 ಪ್ರಶ್ನೆಗಳು

1) ವಿಕಾಸದ ಪರಿಕಲ್ಪನೆ, ಕಲಿಕೆ ಮತ್ತು ಅದರ ಸಂಬಂಧ

2) ಮಕ್ಕಳ ವಿಕಾಸದ ತತ್ವಗಳು

3) ಅನುವಂಶಿಕತೆ ಮತ್ತು ಪರಿಸರದ ಪ್ರಭಾವ

4) ಸಾಮಾಜೀಕರಣ ಪ್ರಕ್ರಿಯೆಗಳು : ಸಾಮಾಜಿಕ ವಿಶ್ವ ಮತ್ತು ಮಕ್ಕಳು (ಶಿಕ್ಷಕರು, ಪಾಲಕರು, ಸಹಪಾಠಿಗಳು)

5) **ಪಿಯಾಗೆ, ಕೊಹ್ಲ್‌ಬರ್ಗ್ ಮತ್ತು ವಿಗೊಟ್‌ಸ್ಕಿ :**
ಸಾಮಾಜಿಕ ರಚನೆಗಳು ಮತ್ತು ವಿಮರ್ಶಾತ್ಮಕ ದೃಷ್ಟಿಕೋನಗಳು

6) ಶಿಶು ಕೇಂದ್ರಿತ ಮತ್ತು ಪ್ರಗತಿದಾಯಕ ಶಿಕ್ಷಣ

7) ವಿಮರ್ಶಾತ್ಮಕ ದೃಷ್ಟಿಕೋನದಿಂದ ಬುದ್ಧಿಶಕ್ತಿ

8) ಬಹುಮುಖ ಬುದ್ಧಿಶಕ್ತಿ (ಮಲ್ಟಿಡೈಮೆನ್ಷನಲ್ ಇಂಟೆಲಿಜೆನ್ಸ್)

9) ಭಾಷೆ ಮತ್ತು ಆಲೋಚನೆ

10) ಒಂದು ಸಾಮಾಜಿಕ ಸಂರಚನೆಯಾಗಿ ಲಿಂಗ, ಲಿಂಗಪಾತ್ರಗಳು, ಲಿಂಗ ಪಕ್ಷಪಾತ ಮತ್ತು ಶೈಕ್ಷಣಿಕ ಅಭ್ಯಾಸ

11) ಕಲಿಯುವವರಲ್ಲಿ ವ್ಯಕ್ತಿ ಭಿನ್ನತೆ. ಭಾಷೆ, ಜಾತಿ, ಲಿಂಗ, ಸಮುದಾಯ, ಧರ್ಮ ಇತ್ಯಾದಿ ಭಿನ್ನತೆಗಳನ್ನು ಆಧರಿಸಿ ತಿಳಿವಳಿಕೆ.

12) ಕಲಿಕೆ ಮತ್ತು ಕಲಿಕೆ ಅಂದಾಜಿನಲ್ಲಿ ಅಸೆಸ್ಮೆಂಟ್ ನಡುವಿನ ವ್ಯತ್ಯಾಸ; ಶಾಲಾ ಆಧಾರಿತ ಅಸೆಸ್ಮೆಂಟ್, ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ, ದೃಷ್ಟಿಕೋನ ಮತ್ತು ಅಭ್ಯಾಸ.

13) ಕಲಿಯುವವರಿಗೆ ಸಿದ್ಧತೆಯ ಮಟ್ಟವನ್ನು ನಿರ್ಣಯಿಸಲು ಸೂಕ್ತ ಪ್ರಶ್ನೆಗಳನ್ನು ನಿರೂಪಿಸುವುದು. ತರಗತಿಯ ಕಲಿಕೆಯ ಮತ್ತು ನಿರ್ಣಾಯಕ ಚಿಂತನೆಯ ಹೆಚ್ಚಿಸುವಮತ್ತು ಕಲಿಯುವವರ ಸಾಧನೆ ಅಂದಾಜಿಸುವುದು.

ಬಿ) ಅಂತರ್ಗತ ಶಿಕ್ಷಣ ಮತ್ತು ತಿಳಿವಳಿಕೆ, ಮಕ್ಕಳ ಪರಿಕಲ್ಪನೆಯೊಂದಿಗೆ ವಿಶೇಷ ಅಗತ್ಯಗಳು : 5 ಪ್ರಶ್ನೆಗಳು

1) ವಿಭಿನ್ನ ಹಿನ್ನೆಲೆ ಹೊಂದಿರುವ ವಿದ್ಯಾರ್ಥಿಗಳು, ವಿಕಲ ಚೇತನ ವಿದ್ಯಾರ್ಥಿಗಳು, ವಂಚಿತ ವಿದ್ಯಾರ್ಥಿಗಳು

2) ಕಲಿಕಾ ನ್ಯೂನ್ಯತೆ ಹೊಂದಿರುವ, ಪ್ರತಿಭಾವಂತ, ಸೃಜನಶೀಲ, ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು – ಇವರುಗಳಿಗೆ ಅರಿವು ನೀಡುವುದು.

ಬಿ) ಕಲಿಕೆ ಮತ್ತು ಬೋಧನಾಶಾಸ್ತ್ರ (ಲರ್ನಿಂಗ್ ಆ್ಯಂಡ್ ಪೆಡಾಗಾಜಿ) : 10 ಪ್ರಶ್ನೆಗಳು

1) ಮಕ್ಕಳ ಕಲಿಕೆ ಮತ್ತು ಆಲೋಚನೆ, ಶಾಲೆಗಳಲ್ಲಿ ಶೈಕ್ಷಣಿಕ ಸಾಧನೆಗಳಲ್ಲಿ ಅನುತ್ತೀರ್ಣರಾಗಲು ಕಾರಣಗಳು.

2) ಬೋಧನೆ ಮತ್ತು ಕಲಿಕೆಯ ಮೂಲ ಪ್ರಕ್ರಿಯೆಗಳು, ಕಲಿಕೆಯ ಮಕ್ಕಳ ಯೋಜನೆಗಳು; ಕಲಿಕೆ ಒಂದು ಸಾಮಾಜಿಕ ಚಟುವಟಿಕೆ; ಕಲಿಕೆ – ಸಾಮಾಜಿಕ ಸಂದರ್ಭದಲ್ಲಿ.

3) ವಿದ್ಯಾರ್ಥಿ ಸಮಸ್ಯೆ ಪರಿಹಾರಕ ಮತ್ತು 'ವೈಜ್ಞಾನಿಕ ಸಂಶೋಧಕ'.

4) ಮಕ್ಕಳ ಕಲಿಕೆಯಲ್ಲಿ ಪರ್ಯಾಯ ಭಾವನೆ ನಿರೂಪಣೆ, ಕಲಿಕಾ ವಿಧಾನದಲ್ಲಿ ಮಕ್ಕಳ ತಪ್ಪುಗಳನ್ನು ಅರ್ಥೈಸಿಕೊಳ್ಳುವುದು.

5) ಅರಿವು ಮತ್ತು ಸಂವೇಗಗಳು (ಕಾಗ್ನಿಷನ್ ಮತ್ತು ಎಮೋಷನ್ಸ್)

6) ಪ್ರೇರಣೆ ಮತ್ತು ಕಲಿಕೆ

7) ಕಲಿಕೆಗೆ ಪೂರಕವಾದ ಅಂಶಗಳು – ವೈಯಕ್ತಿಕ ಮತ್ತು ಪರಿಸರ

ಭಾಗ 2 :

ಭಾಷೆ –1 (ಕನ್ನಡ ಅಥವಾ ಇಂಗ್ಲಿಷ್ ಅಥವಾ...) 30 ಪ್ರಶ್ನೆಗಳು

(ಎ) ತಿಳಿದುಕೊಳ್ಳುವಿಕೆ, ಗ್ರಹಿಕೆ (ಕಾಂಪ್ರಿಹೆನ್‌ಷನ್) – 15 ಪ್ರಶ್ನೆಗಳು

• ಗೊತ್ತಿರದ ಗದ್ಯವನ್ನು ಓದುವುದು – ಒಂದು ಗದ್ಯ ಅಥವಾ ನಾಟಕ ಮತ್ತು ಒಂದು ಕವಿತೆ

ಇದರ ಮೇಲೆ ಗ್ರಹಿಕೆಯು ನಿರ್ಣಯ, ವ್ಯಾಕರಣ ಮತ್ತು ಮೌಖಿಕ ಸಾಮರ್ಥ್ಯ (ಗದ್ಯ ಅಂಗೀಕಾರದ ಸಾಹಿತ್ಯ, ವೈಜ್ಞಾನಿಕ, ನಿರೂಪಣೆ ಅಥವಾ ಅರ್ಥವಾಗುವ) ಮೇಲೆ ಪ್ರಶ್ನೆಗಳು

(ಬಿ) ಭಾಷಾ ಅಭಿವೃದ್ಧಿ ಯ ಬೋಧನಾಶಾಸ್ತ್ರ (ಪೆಡಗಾಜಿ) – 15 ಪ್ರಶ್ನೆಗಳು

• ಕಲಿಕೆ ಮತ್ತು ಸ್ವಾಧೀನ

• ಭಾಷೆ ಬೋಧನೆ ತತ್ವಗಳು

• ಕೇಳುವ ಮತ್ತು ಮಾತನಾಡುವ ಪಾತ್ರ; ಭಾಷೆಯ ಕಾರ್ಯ ಮತ್ತು ಇದನ್ನು ಹೇಗೆ ಮಕ್ಕಳು ಒಂದು ಸಾಧನವಾಗಿ ಬಳಸುವರು, ವ್ಯಾಕರಣದ ಪಾತ್ರ – ಭಾಷೆ ಕಲಿಕೆ ಅಭಿವ್ಯಕ್ತಿ ಮತ್ತು ಲಿಖಿತ ರೂಪಗಳಲ್ಲಿ

• ವೈವಿಧ್ಯಮಯ ತರಗತಿಯ ಭಾಷಾ ಬೋಧನೆಯ ಸವಾಲುಗಳು; ಭಾಷೆಯ ತೊಂದರೆಗಳು, ದೋಷಗಳು ಮತ್ತು ಅಸ್ವಸ್ಥತೆಗಳು

• ಭಾಷಾ ನೈಪುಣ್ಯತೆ

• ಭಾಷೆಯ ಗ್ರಹಿಕೆ ಮತ್ತು ಕುಶಲತೆಯ ಮೌಲ್ಯಮಾಪನ: ಮಾತನಾಡುವ, ಕೇಳುವ, ಓದುವ ಮತ್ತು ಬರೆಯುವ .

• ಪಾಠೋಪಕರಣ ಸಾಮಗ್ರಿಗಳು : ಪಠ್ಯಪುಸ್ತಕ, ಬಹು ಮಾಧ್ಯಮ ವಸ್ತುಗಳು, ತರಗತಿಯ ಬಹುಭಾಷಾ ಸಂಪನ್ಮೂಲಗಳು

• ಪರಿಹಾರ ಬೋಧನೆ

ಭಾಗ 3 :

ಭಾಷೆ –2 (ಕನ್ನಡ ಅಥವಾ ಇಂಗ್ಲಿಷ್ ಅಥವಾ...) 30 ಪ್ರಶ್ನೆಗಳು

(ಎ) ತಿಳಿದುಕೊಳ್ಳುವಿಕೆ, ಗ್ರಹಿಕೆ (ಕಾಂಪ್ರಿಯೆನ್‌ಷನ್) – 15 ಪ್ರಶ್ನೆಗಳು

• ಎರಡು ಗೊತ್ತಿರದ ಗದ್ಯವನ್ನು ಓದುವುದು –ಇದರ ಮೇಲೆ ಗ್ರಹಿಕೆಯ ನಿರ್ಣಯ, ವ್ಯಾಕರಣ ಮತ್ತು ಮೌಖಿಕ ಸಾಮರ್ಥ್ಯ (ಗದ್ಯ ಅಂಗೀಕಾರದ ಸಾಹಿತ್ಯ, ವೈಜ್ಞಾನಿಕ, ನಿರೂಪಣೆ ಅಥವಾ ಅರ್ಥವಾಗುವ) ಮೇಲೆ ಪ್ರಶ್ನೆಗಳು

(ಬಿ) ಭಾಷಾ ಅಭಿವೃದ್ಧಿಯ ಬೋಧನಾಶಾಸ್ತ್ರ (ಪೆಡಗಾಜಿ) – 15 ಪ್ರಶ್ನೆಗಳು

• ಕಲಿಕೆ ಮತ್ತು ಸ್ವಾಧೀನ

• ಭಾಷೆ ಬೋಧನೆ ತತ್ವಗಳು

• ಕೇಳುವ ಮತ್ತು ಮಾತನಾಡುವ ಪಾತ್ರ; ಭಾಷೆಯ ಕಾರ್ಯ ಮತ್ತು ಇದನ್ನು ಹೇಗೆ ಮಕ್ಕಳು ಒಂದು ಸಾಧನವಾಗಿ ಬಳಸುವರು;

ವ್ಯಾಕರಣದ ಪಾತ್ರ – ಭಾಷೆ ಕಲಿಕೆ ಅಭಿವ್ಯಕ್ತಿ ಮತ್ತು ಲಿಖಿತ ರೂಪಗಳಲ್ಲಿ

• ವೈವಿಧ್ಯಮಯ ತರಗತಿಯ ಭಾಷಾ ಬೋಧನೆಯ ಸವಾಲುಗಳು; ಭಾಷೆಯ ತೊಂದರೆಗಳು, ದೋಷಗಳು ಮತ್ತು ಅಸ್ವಸ್ಥತೆಗಳು

• ಭಾಷಾ ನೈಪುಣ್ಯತೆ

• ಭಾಷೆಯ ಗ್ರಹಿಕೆ ಮತ್ತು ಕುಶಲತೆಯ ಮೌಲ್ಯಮಾಪನ: ಮಾತನಾಡುವ, ಕೇಳುವ, ಓದುವ ಮತ್ತು ಬರೆಯುವ .

• ಪಾಠೋಪಕರಣ ಸಾಮಗ್ರಿಗಳು : ಪಠ್ಯಪುಸ್ತಕ, ಬಹು ಮಾಧ್ಯಮ ವಸ್ತುಗಳು, ತರಗತಿಯ ಬಹುಭಾಷಾ ಸಂಪನ್ಮೂಲಗಳು

• ಪರಿಹಾರ ಬೋಧನೆ

ಭಾಗ 4 :

ಗಣಿತ – 30 ಪ್ರಶ್ನೆಗಳು

ಎ) ವಿಷಯ – 15 ಪ್ರಶ್ನೆಗಳು

• ರೇಖಾಗಣಿತ

• ಆಕೃತಿಗಳು ಹಾಗೂ ರೂಪಾಂತರ ಅರ್ಥೈಸುವಿಕೆ

• ನಮ್ಮ ಸುತ್ತ ಘನ ವಸ್ತುಗಳು

• ಸಂಖ್ಯೆಗಳು • ವ್ಯವಕಲನ ಮತ್ತು ಸಂಕಲನ

• ಗುಣಾಕಾರ • ಭಾಗಾಕಾರ

• ಮಾಪನ • ತೂಕ

• ಟೈಮ್ • ಗಾತ್ರ

• ದತ್ತಾಂಶ ನಿರ್ವಹಣೆ • ಪ್ಯಾಟರ್ನ್ಸ್

• ಹಣ

ಬಿ) ಪೆಡಗಾಗಿಕಲ್ ಇಷ್ಯೂಸ್ (ಉಪಾಧ್ಯಾಯನ) – 15 ಪ್ರಶ್ನೆಗಳು

• ಮ್ಯಾಥ್‌ಮ್ಯಾಟಿಕ್ಸ್ / ತಾರ್ಕಿಕ ಚಿಂತನೆಯ ಪ್ರಕೃತಿ ; ಮಕ್ಕಳ ಚಿಂತನೆ ಮತ್ತು ತಾರ್ಕಿಕ ಮಾದರಿಗಳನ್ನು ಅರ್ಥೈಸುವಿಕೆ ಮತ್ತು ಮಾಡುವ ತಂತ್ರಗಳು

• ಪಠ್ಯಕ್ರಮದಲ್ಲಿ ಗಣಿತ ಶಾಸ್ತ್ರದ ಸ್ಥಾನ

• ಗಣಿತದ ಭಾಷೆ

• ಸಮುದಾಯ ಗಣಿತ

• ಔಪಚಾರಿಕ ಮತ್ತು ಅನೌಪಚಾರಿಕ ವಿಧಾನಗಳ ಮೂಲಕ ಮೌಲ್ಯಮಾಪನ

• ಬೋಧನೆ ಸಮಸ್ಯೆಗಳು

• ದೋಷ ವಿಶ್ಲೇಷಣೆ ಮತ್ತು ಕಲಿಕೆ ಮತ್ತು ಬೋಧನೆ ಸಂಬಂಧಿತ ಅಂಶಗಳು

• ವಿಶ್ಲೇಷಣಾತ್ಮಕ ಮತ್ತು ಪರಿಹಾರ ಬೋಧನೆ

ಭಾಗ 5 :

ಪರಿಸರ ಅಧ್ಯಯನ (ವಿಜ್ಞಾನ, ಸಮಾಜಶಾಸ್ತ್ರ) 30 ಪ್ರಶ್ನೆಗಳು

ಎ) ವಿಷಯ – 15 ಪ್ರಶ್ನೆಗಳು

1) ಕುಟುಂಬ ಮತ್ತು ಸ್ನೇಹಿತರು:

1.1. ಸಂಬಂಧಗಳು

1.2. ಕೆಲಸ ಮತ್ತು ಆಟ

1.3. ಪ್ರಾಣಿಗಳು

1.4. ಸಸ್ಯಗಳು

2 ಆಹಾರ,

3 ಆಶ್ರಯ,

4 ನೀರು,

5. ಪ್ರಯಾಣ,

6. ನಾವು ಮಾಡುವ ಮತ್ತು ರಚಿಸುವ ವಸ್ತುಗಳು

ಬಿ) ಪೆಡಗಾಗಿಕಲ್ ಇಷ್ಯೂಸ್ (ಉಪಾಧ್ಯಾಯನ) – 15 ಪ್ರಶ್ನೆಗಳು

• ಪರಿಸರ ಅಧ್ಯಯನದ ಪರಿಕಲ್ಪನೆ ಮತ್ತು ವ್ಯಾಪ್ತಿ

• ಪರಿಸರದ ಮಹತ್ವ, ಸಮಗ್ರ ಪರಿಸರದ ಅಧ್ಯಯನ

• ಪರಿಸರದ ಅಧ್ಯಯನ ಹಾಗೂ ಪರಿಸರ ಶಿಕ್ಷಣ

• ಕಲಿಕೆಯ ತತ್ವಗಳು

• ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳ ಸಂಬಂಧ ಹಾಗೂ ವ್ಯಾಪ್ತಿ

• ಪರಿಕಲ್ಪನೆಗಳ ಪ್ರಸ್ತಾಪ

• ಚಟುವಟಿಕೆಗಳು

• ಪ್ರಯೋಗಶೀಲತೆ / ಪ್ರಾಯೋಗಿಕ ಕೆಲಸ

• ಚರ್ಚೆ

• ಸಿಸಿಇ

• ಬೋಧನೆ ವಸ್ತು / ಸಾಧನೆಗಳು

• ಸಮಸ್ಯೆಗಳು

6 ರಿಂದ 8ನೇ ತರಗತಿಗಳ ಶಿಕ್ಷಕರಿಗೆ

ಪತ್ರಿಕೆ –2

1. ಬಾಲವಿಕಾಸ ಮತ್ತು ಪೆಡಾಗಾಜಿ (ಬೋಧನಾ ಶಾಸ್ತ್ರ) (ಈ ಭಾಗ ಕಡ್ಡಾಯ) –30 ಪ್ರಶ್ನೆಗಳು

(ಎ) ಬಾಲವಿಕಾಸ (ಪ್ರಾಥಮಿಕ ಶಾಲೆ ಮಕ್ಕಳು) – 15 ಪ್ರಶ್ನೆಗಳು

• ವಿಕಾಸದ ಪರಿಕಲ್ಪನೆ ಮತ್ತು ಕಲಿಕೆ ಮತ್ತು ಅದರ ನಡುವಿನ ಸಂಬಂಧ

• ಮಕ್ಕಳ ವಿಕಾಸದ ತತ್ವಗಳು

• ಅನುವಂಶಿಕತೆ ಮತ್ತು ಪರಿಸರದ ಪ್ರಭಾವ

• ಸಮಾಜೀಕರಣ ಪ್ರಕ್ರಿಯೆಗಳು : ಸಾಮಾಜಿಕ ವಿಶ್ವ ಮತ್ತು ಮಕ್ಕಳು (ಶಿಕ್ಷಕರು, ಪಾಲಕರು, ಸಹಪಾಠಿಗಳು)

• **ಪಿಯಾಗೆ, ಕೊಹ್ಲ್‌ಬರ್ಗ್ ಮತ್ತು ವಿಗೊಟ್‌ಸ್ಕಿ :**

ಸಾಮಾಜಿಕ ರಚನೆಗಳು ಮತ್ತು ವಿಮರ್ಶಾತ್ಮಕ ದೃಷ್ಟಿಕೋನಗಳು

• ಶಿಶು ಕೇಂದ್ರಿತ ಮತ್ತು ಪ್ರಗತಿದಾಯಕ ಶಿಕ್ಷಣ

• ವಿಮರ್ಶಾತ್ಮಕ ದೃಷ್ಟಿಕೋನದಿಂದ ಬುದ್ಧಿಶಕ್ತಿ

• ಮಲ್ಟಿ ಡೈಮೆನ್ಷನಲ್ ಇಂಟೆಲಿಜೆನ್ಸ್ (ಬಹುಮುಖ ಬುದ್ಧಿಶಕ್ತಿ)

• ಭಾಷೆ ಮತ್ತು ಆಲೋಚನೆ

• ಒಂದು ಸಾಮಾಜಿಕ ಸಂರಚನೆಯಾಗಿ ಲಿಂಗ, ಲಿಂಗ ಪಾತ್ರಗಳನ್ನು, ಲಿಂಗ ಪಕ್ಷಪಾತ ಮತ್ತು ಶೈಕ್ಷಣಿಕ ಅಭ್ಯಾಸ

• ಕಲಿಯುವವರಲ್ಲಿ ವ್ಯಕ್ತಿ ಭಿನ್ನತೆ, ಭಾಷೆ, ಜಾತಿ, ಲಿಂಗ, ಸಮುದಾಯ, ಧರ್ಮ ಇತ್ಯಾದಿ ಭಿನ್ನತೆಯನ್ನು ಆಧರಿಸಿ ತಿಳುವಳಿಕೆ

• ಕಲಿಕೆ ಮತ್ತು ಕಲಿಕೆ ಅಂದಾಜಿನಲ್ಲಿ ಅಸೆಸ್ಮೆಂಟ್ ನಡುವಿನ ವ್ಯತ್ಯಾಸ ; ಶಾಲಾ ಆಧಾರಿತ ಅಸೆಸ್ಮೆಂಟ್, ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ, ದೃಷ್ಟಿಕೋನ ಮತ್ತು ಅಭ್ಯಾಸ.

• ಕಲಿಯುವವರಿಗೆ ಸಿದ್ಧತೆ ಮಟ್ಟವನ್ನು ನಿರ್ಣಯಿಸಲು ಸೂಕ್ತ ಪ್ರಶ್ನೆಗಳನ್ನು ನಿರೂಪಿಸುವುದು; ತರಗತಿಯ ಕಲಿಕೆಯ ಮತ್ತು ನಿರ್ಣಾಯಕ ಚಿಂತನೆಯ ಹೆಚ್ಚಿಸುವ ಮತ್ತು ಕಲಿಯುವವರ ಸಾಧನೆ ಅಂದಾಜಿಸುವುದು.

(ಬಿ) ಅಂತರ್ಗತ ಶಿಕ್ಷಣ ಮತ್ತು ತಿಳುವಳಿಕೆ ಮಕ್ಕಳ ಪರಿಕಲ್ಪನೆಯೊಂದಿಗೆ ವಿಶೇಷ ಅಗತ್ಯಗಳು – 5 ಪ್ರಶ್ನೆಗಳು

• ವಿಭಿನ್ನ ಹಿನ್ನೆಲೆ ಹೊಂದಿರುವ ವಿದ್ಯಾರ್ಥಿಗಳು ವಿಕಲಚೇತನ ವಿದ್ಯಾರ್ಥಿಗಳು ವಂಚಿತ ವಿದ್ಯಾರ್ಥಿಗಳು

• ಕಲಿಕಾ ನ್ಯೂನತೆ ಹೊಂದಿರುವ, ಪ್ರತಿಭಾವಂತ, ಸೃಜನಶೀಲ, ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಇವರುಗಳಿಗೆ ಅರಿವು ನೀಡುವುದು.

(ಸಿ) ಕಲಿಕೆ ಮತ್ತು ಪೆಡಾಗಾಜಿ – 10 ಪ್ರಶ್ನೆಗಳು

• ಮಕ್ಕಳ ಕಲಿಕೆ ಮತ್ತು ಆಲೋಚನೆ, ಶಾಲೆಗಳಲ್ಲಿ ಶೈಕ್ಷಣಿಕ ಸಾಧನೆಯಲ್ಲಿ ಅನುತ್ತೀರ್ಣರಾಗಲು ಕಾರಣಗಳು.

• ಬೋಧನೆ ಮತ್ತು ಕಲಿಕೆಯ ಮೂಲ ಪ್ರಕ್ರಿಯೆಗಳು ಕಲಿಕೆಯ ಮಕ್ಕಳ ಯೋಜನೆಗಳು; ಕಲಿಕೆ ಒಂದು ಸಾಮಾಜಿಕ ಚಟುವಟಿಕೆ, ಕಲಿಕೆ ಸಾಮಾಜಿಕ ಸಂದರ್ಭದಲ್ಲಿ.

• ವಿದ್ಯಾರ್ಥಿ ಸಮಸ್ಯೆ ಪರಿಹಾರಕ ಮತ್ತು 'ವೈಜ್ಞಾನಿಕ ಸಂಶೋಧಕ'

• ಮಕ್ಕಳ ಕಲಿಕೆಯಲ್ಲಿ ಪರ್ಯಾಯ ಭಾವನೆ ನಿರೂಪಣೆ, ಕಲಿಕಾ ವಿಧಾನದಲ್ಲಿ ಮಕ್ಕಳ ತಪ್ಪುಗಳನ್ನು ಅರ್ಥೈಸಿಕೊಳ್ಳುವುದು.

• ಕಾಗ್ನಿಶನ್ ಮತ್ತು ಎಮೋಷನ್ಸ್ (ಅರಿವು ಮತ್ತು ಸಂವೇಗಗಳು)

• ಪ್ರೇರಣೆ ಮತ್ತು ಕಲಿಕೆ

• ಕಲಿಕೆಗೆ ಪೂರಕವಾದ ಅಂಶಗಳು – ವೈಯುಕ್ತಿಕ ಮತ್ತು ಪರಿಸರ

2. ಭಾಷೆ –1 – 30 ಪ್ರಶ್ನೆಗಳು

(ಈ ಭಾಗ ಕಡ್ಡಾಯ)

(ಎ) ತಿಳಿದುಕೊಳ್ಳುವಿಕೆ, ಗ್ರಹಿಕೆ (ಕಾಂಪ್ರಿಹೆನ್‌ಷನ್) – 15 ಪ್ರಶ್ನೆಗಳು

• ಗೊತ್ತಿರದ ಗದ್ಯವನ್ನು ಓದುವುದು – ಒಂದು ಗದ್ಯ ಅಥವಾ ನಾಟಕ ಮತ್ತು ಒಂದು ಕವಿತೆ ಇದರ ಮೇಲೆ ಗ್ರಹಿಕೆಯು ನಿರ್ಣಯ, ವ್ಯಾಕರಣ ಮತ್ತು ಮೌಖಿಕ ಸಾಮರ್ಥ್ಯ (ಗದ್ಯ ಅಂಗೀಕಾರದ ಸಾಹಿತ್ಯ, ವೈಜ್ಞಾನಿಕ, ನಿರೂಪಣೆ ಅಥವಾ ಅರ್ಥವಾಗುವ) ಮೇಲೆ ಪ್ರಶ್ನೆಗಳು

(ಬಿ) ಭಾಷಾ ಅಭಿವೃದ್ಧಿಯ ಬೋಧನಾಶಾಸ್ತ್ರ (ಪೆಡಗಾಜಿ) – 15 ಪ್ರಶ್ನೆಗಳು

• ಕಲಿಕೆ ಮತ್ತು ಸ್ವಾಧೀನ

• ಭಾಷೆ ಬೋಧನೆ ತತ್ವಗಳು

• ಕೇಳುವ ಮತ್ತು ಮಾತನಾಡುವ ಪಾತ್ರ; ಭಾಷೆಯ ಕಾರ್ಯ ಮತ್ತು ಇದನ್ನು ಹೇಗೆ ಮಕ್ಕಳು ಒಂದು ಸಾಧನವಾಗಿ ಬಳಸುವರು; ವ್ಯಾಕರಣದ ಪಾತ್ರ – ಭಾಷೆ ಕಲಿಕೆ ಅಭಿವ್ಯಕ್ತಿ ಮತ್ತು ಲಿಖಿತ ರೂಪಗಳಲ್ಲಿ

• ವೈವಿಧ್ಯಮಯ ತರಗತಿಯ ಭಾಷಾ ಬೋಧನೆಯ ಸವಾಲುಗಳು; ಭಾಷೆಯ ತೊಂದರೆಗಳು, ದೋಷಗಳು ಮತ್ತು ಅಸ್ವಸ್ಥತೆಗಳು

• ಭಾಷಾ ನೈಪುಣ್ಯತೆ

• ಭಾಷೆಯ ಗ್ರಹಿಕೆ ಮತ್ತು ಕುಶಲತೆಯ ಮೌಲ್ಯಮಾಪನ: ಮಾತನಾಡುವ, ಕೇಳುವ, ಓದುವ ಮತ್ತು ಬರೆಯುವ .

• ಪಾಠೋಪಕರಣ ಸಾಮಗ್ರಿಗಳು : ಪಠ್ಯಪುಸ್ತಕ, ಬಹು ಮಾಧ್ಯಮ ವಸ್ತುಗಳು, ತರಗತಿಯ ಬಹುಭಾಷಾ ಸಂಪನ್ಮೂಲಗಳು

• ಪರಿಹಾರ ಬೋಧನೆ

3. ಭಾಷೆ – 2 – 30 ಪ್ರಶ್ನೆಗಳು

(ಈ ಭಾಗ ಕಡ್ಡಾಯ)

(ಎ) ತಿಳಿದುಕೊಳ್ಳುವಿಕೆ, ಗ್ರಹಿಕೆ (ಕಾಂಪ್ರಿಹೆನ್‌ಷನ್) – 15 ಪ್ರಶ್ನೆಗಳು

• ಎರಡು ಗೊತ್ತಿರದ ಗದ್ಯವನ್ನು ಓದುವುದು –ಇದರ ಮೇಲೆ ಗ್ರಹಿಕೆಯು ನಿರ್ಣಯ, ವ್ಯಾಕರಣ ಮತ್ತು ಮೌಖಿಕ ಸಾಮರ್ಥ್ಯ (ಗದ್ಯ ಅಂಗೀಕಾರದ ಸಾಹಿತ್ಯ, ವೈಜ್ಞಾನಿಕ, ನಿರೂಪಣೆ ಅಥವಾ ಅರ್ಥವಾಗುವ) ಮೇಲೆ ಪ್ರಶ್ನೆಗಳು

(ಬಿ) ಭಾಷಾ ಅಭಿವೃದ್ಧಿಯ ಬೋಧನಾಶಾಸ್ತ್ರ (ಪೆಡಗಾಜಿ) – 15 ಪ್ರಶ್ನೆಗಳು

• ಕಲಿಕೆ ಮತ್ತು ಸ್ವಾಧೀನ

• ಭಾಷೆ ಬೋಧನೆ ತತ್ವಗಳು

• ಕೇಳುವ ಮತ್ತು ಮಾತನಾಡುವ ಪಾತ್ರ; ಭಾಷೆಯ ಕಾರ್ಯ ಮತ್ತು ಇದನ್ನು ಹೇಗೆ ಮಕ್ಕಳು ಒಂದು ಸಾಧನವಾಗಿ ಬಳಸುವರು; ವ್ಯಾಕರಣದ ಪಾತ್ರ – ಭಾಷೆ ಕಲಿಕೆ ಅಭಿವ್ಯಕ್ತಿ ಮತ್ತು ಲಿಖಿತ ರೂಪಗಳಲ್ಲಿ

• ವೈವಿಧ್ಯಮಯ ತರಗತಿಯ ಭಾಷಾ ಬೋಧನೆಯ ಸವಾಲುಗಳು; ಭಾಷೆಯ ತೊಂದರೆಗಳು, ದೋಷಗಳು ಮತ್ತು ಅಸ್ವಸ್ಥತೆಗಳು

• ಭಾಷಾ ನೈಪುಣ್ಯತೆ

• ಭಾಷೆಯ ಗ್ರಹಿಕೆ ಮತ್ತು ಕುಶಲತೆಯ ಮೌಲ್ಯಮಾಪನ: ಮಾತನಾಡುವ, ಕೇಳುವ, ಓದುವ ಮತ್ತು ಬರೆಯುವ .

• ಪಾಠೋಪಕರಣ ಸಾಮಗ್ರಿಗಳು: ಪಠ್ಯಪುಸ್ತಕ, ಬಹು ಮಾಧ್ಯಮ ವಸ್ತುಗಳು, ತರಗತಿಯ ಬಹುಭಾಷಾ ಸಂಪನ್ಮೂಲಗಳು

• ಪರಿಹಾರ ಬೋಧನೆ

ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗೆ :

4. ಎ) ಗಣಿತ ಮತ್ತು ವಿಜ್ಞಾನ – 60 ಪ್ರಶ್ನೆಗಳು

1) ಗಣಿತ – 30 ಪ್ರಶ್ನೆಗಳು

ಎ) ವಿಷಯ – 20 ಪ್ರಶ್ನೆಗಳು

• ಸಂಖ್ಯಾ ಪದ್ಧತಿ

• ಸಂಖ್ಯೆಗಳ ಅರಿವು

• ಸಂಖ್ಯೆಗಳೊಂದಿಗೆ ಆಟ

• ಪೂರ್ಣಾಂಕಗಳು

• ಋಣಾತ್ಮಕ ಸಂಖ್ಯೆಗಳು ಮತ್ತು ಪೂರ್ಣಾಂಕಗಳು (ಇಂಟೀಜರ್ಸ್)

• ಭಿನ್ನರಾಶಿಗಳು

• ಬೀಜಗಣಿತ

• ಬೀಜಗಣಿತ ಪರಿಚಯ

• ಅನುಪಾತ ಮತ್ತು ಸಮಾನುಪಾತ

• ರೇಖಾಗಣಿತ

• ರೇಖಾಗಣಿತದ ಮೂಲಭೂತ ಕಲ್ಪನೆಗಳು (2–ಡಿ)
• (ಅಂಡರ್‌ಸ್ಟಾಂಡಿಂಗ್ ಎಲಿಮೆಂಟರಿ ಷೇಪ್ಸ್) ಪ್ರಾಥಮಿಕ ಆಕೃತಿಗಳ ಬಗ್ಗೆ ಅರಿವು (2–ಡಿ ಮತ್ತು 3–ಡಿ)
• ಸಿಮೆಟ್ರಿ : (ಪ್ರತಿಬಿಂಬ)
• ರಚನೆ (ನೇರ ತುದಿಯ ಸ್ಕೇಲ್, ಕೋನಮಾಪಕ, ಕೈವಾರ ಬಳಸಿ)
• ಅಳತೆ (ಮೆನ್ಸುರೇಶನ್)
• ದತ್ತಾಂಶ ನಿರ್ವಹಣೆ

ಬಿ) ಪೆಡಗಾಗಿಕಲ್ ಇಷ್ಯೂಸ್ (ಬೋಧನಾಶಾಸ್ತ್ರ) – 10 ಪ್ರಶ್ನೆಗಳು

• ಗಣಿತದ ಸ್ವಭಾವ / ತಾರ್ಕಿಕ ಚಿಂತನೆ
• ಪಠ್ಯಕ್ರಮದಲ್ಲಿ ಗಣಿತ ಶಾಸ್ತ್ರದ ಸ್ಥಾನ
• ಗಣಿತಶಾಸ್ತ್ರದ ಭಾಷೆ
• ಸಮುದಾಯ ಗಣಿತ
• ಮೌಲ್ಯಮಾಪನ
• ಪರಿಹಾರ ಬೋಧನೆ
• ಬೋಧನೆಯ ಸಮಸ್ಯೆಗಳು

2. ವಿಜ್ಞಾನ – 30 ಪ್ರಶ್ನೆಗಳು

ಎ) ವಿಷಯ ಸೂಚಿ – 20 ಪ್ರಶ್ನೆಗಳು

ಆಹಾರ :

• ಆಹಾರದ ಮೂಲಗಳು
• ಆಹಾರದ ಘಟಕಗಳು
• ಆಹಾರವನ್ನು ಸ್ವಚ್ಛಗೊಳಿಸುವುದು

ವಸ್ತುಗಳು :

• ದೈನಂದಿನ ಬಳಕೆಯ ವಸ್ತುಗಳು
• ಜೈವಿಕ ಪ್ರಪಂಚ
• ಚಲಿಸುವ ವಸ್ತುಗಳು, ಮನುಷ್ಯರು ಮತ್ತು ಆಲೋಚನೆಗಳು
• ವಸ್ತುಗಳು ಹೇಗೆ ಕೆಲಸ ಮಾಡುತ್ತವೆ
• ವಿದ್ಯುತ್ ಪ್ರವಾಹ ಮತ್ತು ವಿದ್ಯುತ್ ಮಂಡಲಗಳು
• ಆಯಾಸ್ಕಾಂತಗಳು
• ನೈಸರ್ಗಿಕ ವಿದ್ಯಮಾನಗಳು
• ಸ್ವಾಭಾವಿಕ ಸಂಪನ್ಮೂಲಗಳು

ಬಿ) ಪೆಡಗಾಗಿಕಲ್ ಇಷ್ಯೂಸ್ (ಬೋಧನಾಶಾಸ್ತ್ರ) – 10 ಪ್ರಶ್ನೆಗಳು

• ವಿಜ್ಞಾನ ಪ್ರಕೃತಿ ಮತ್ತು ರಚನೆ
• ಸ್ವಾಭಾವಿಕ ವಿಜ್ಞಾನದ ಗುರಿ ಮತ್ತು ಉದ್ದೇಶಗಳು
• ವಿಜ್ಞಾನವನ್ನು ಅರ್ಥೈಸುವುದು ಮತ್ತು ಪ್ರಭಾವವನ್ನು ತಿಳಿಯುವುದು
• ಪ್ರಭಾವ /ಸಮಗ್ರ ಪ್ರಭಾವ (ಅಪ್ರೋಚಸ್/ಇಂಟಿಗ್ರೇಟೆಡ್ ಅಪ್ರೋಚ್)
• ವೀಕ್ಷಣೆ / ಪ್ರಯೋಗ / ಕಂಡುಹಿಡಿಯುವುದು (ವೈಜ್ಞಾನಿಕ ವಿಧಾನ)
• ನೂತನ ಪರಿಪಾಠ (ಇನ್ನೋವೆಷನ್)
• ಪಠ್ಯವಸ್ತು / ಕಲಿಕಾ ಸಾಮಗ್ರಿಗಳು
• ಮೌಲ್ಯಮಾಪನ – ಅರಿವಿನ / ಮಾನಸಿಕ / ಭಾವುಕ
• ಸಮಸ್ಯೆಗಳು
• ಪರಿಹಾರ ಬೋಧನೆ

ಸಮಾಜಶಾಸ್ತ್ರ/ಸಮಾಜವಿಜ್ಞಾನ ಶಿಕ್ಷಕರಿಗೆ :

5. ಸಮಾಜಶಾಸ್ತ್ರ /ಸಮಾಜ ವಿಜ್ಞಾನ – 60 ಪ್ರಶ್ನೆಗಳು

ಎ) ವಿಷಯ ಸೂಚಿ – 40 ಪ್ರಶ್ನೆಗಳು

ಇತಿಹಾಸ :

• ಯಾವಾಗ ಎಲ್ಲಿ ಮತ್ತು ಹೇಗೆ
• ಮುಂಚಿನ ಸಮಾಜ
• ಮೊದಲ ರೈತರು ಮತ್ತು ದನಗಾಹಿಗಳು ಅಥವಾ ಕುರಿಗಾಹಿಗಳು
• ಮೊದಲ ನಗರಗಳು
• ಮುಂಚಿನ ರಾಜ್ಯಗಳು
• ಹೊಸ ಮಾದರಿಗಳು
• ಮೊದಲ ಸಾಮ್ರಾಜ್ಯ
• ದೂರದ ಪ್ರದೇಶಗಳ ಸಂಪರ್ಕಗಳು
• ರಾಜಕೀಯ ಬೆಳವಣಿಗೆಗಳು
• ಸಂಸ್ಕೃತಿ ಮತ್ತು ವಿಜ್ಞಾನ
• ಹೊಸ ರಾಜರು ಮತ್ತು ರಾಜದಾನಿಗಳು
• ದೆಹಲಿಯ ಸುಲ್ತಾನರು
• ವಾಸ್ತುಶಿಲ್ಪ
• ಒಂದು ಸಾಮ್ರಾಜ್ಯದ ಸ್ಥಾಪನೆ
• ಸಾಮಾಜಿಕ ಬದಲಾವಣೆ
• ಪ್ರಾದೇಶಿಕ ಸಂಸ್ಕೃತಿಗಳು
• 'ಕಂಪನಿ ಪವರ್' ಸ್ಥಾಪನೆ
• ಗ್ರಾಮೀಣ ಜೀವನ ಮತ್ತು ಸಮಾಜ
• ವಸಾಹತು ಮತ್ತು ಬುಡಕಟ್ಟಿನ ಸಮಾಜಗಳು
• 1857–58 ರ ದಂಗೆ
• ಮಹಿಳೆ ಮತ್ತು ಸುಧಾರಣೆ
• ಜಾತಿ ವ್ಯವಸ್ಥೆಯ ಬಗ್ಗೆ ವಿರೋಧ

• ರಾಷ್ಟ್ರೀಯ ಚಳುವಳಿ

• ಸ್ವಾತಂತ್ರದ ನಂತರದ ಭಾರತ

ಭೂಗೋಳ ಶಾಸ್ತ್ರ

• ಭೂಗೋಳ – ಒಂದು ಸಾಮಾಜಿಕ ಅಧ್ಯಯನ ಮತ್ತು ಒಂದು ವಿಜ್ಞಾನವಾಗಿ

• ಗ್ರಹ : ಭೂಮಿ ಸೌರವ್ಯೂಹದಲ್ಲಿ

• ಗ್ಲೋಬ್

• ಪರಿಸರವು ಪರಿಪೂರ್ಣತೆಯಲ್ಲಿ : ನೈಸರ್ಗಿಕ ಮತ್ತು ಮಾನವ ಪರಿಸರ

• ಗಾಳಿ

• ನೀರು

• ಮಾನವ ಪರಿಸರ : ವಸಾಹತು, ಸಾರಿಗೆ ಮತ್ತು ಸಂವಹನ

• ಸಂಪನ್ಮೂಲಗಳು : ವಿಧಗಳು – ನೈಸರ್ಗಿಕ ಮತ್ತು ಮಾನವ

• ಕೃಷಿ

ಸಾಮಾಜಿಕ ಮತ್ತು ರಾಜಕೀಯ ಜೀವನ :

• ವಿವಿಧತೆ

• ಸರ್ಕಾರ

• ಸ್ಥಳೀಯ ಸರ್ಕಾರ

• ಜೀವನವನ್ನು ರೂಪಿಸುವುದು

• ಪ್ರಜಾಪ್ರಭುತ್ವ

• ರಾಜ್ಯ ಸರ್ಕಾರ

• ಮಾಧ್ಯಮವನ್ನು ತಿಳಿಯುವುದು

• ಲಿಂಗಬೇದವನ್ನು ಹೊಗಲಾಡಿಸುವುದು

• ಸಂವಿಧಾನ

• ಪಾರ್ಲಿಮೆಂಟರಿ ಸರ್ಕಾರ

• ನ್ಯಾಯಾಂಗ

• ಸಾಮಾಜಿಕ ನ್ಯಾಯ ಮತ್ತು ಹಿಂದುಳಿದವರ ಬಗ್ಗೆ

ಬಿ) ಪೆಡಗಾಗಿಕಲ್ ಇಷ್ಯೂಸ್ (ಬೋಧನಾಶಾಸ್ತ್ರ) – 20 ಪ್ರಶ್ನೆಗಳು

• ಸಮಾಜ ವಿಜ್ಞಾನ / ಸಾಮಾಜಿಕ ಅಧ್ಯಯನಗಳು – ಪರಿಕಲ್ಪನೆ ಹಾಗೂ ಸ್ವಭಾವ

• ತರಗತಿಯ ವಿಧಾನಗಳು, ಚಟುವಟಿಕೆಗಳು ಮತ್ತು ಪ್ರವಚನಗಳು

• ನಿರ್ಣಾಯಕ ಚಿಂತನೆಯನ್ನು ಬೆಳೆಸುವುದು

• ವಿಚಾರಣೆ / ಪ್ರಯೋಗ ಶೀಲತೆಯ ಪುರಾವೆ

• ಸಮಾಜ ವಿಜ್ಞಾನ / ಸಾಮಾಜಿಕ ಅಧ್ಯಯನಗಳ ಬೋಧನೆಯ ಸಮಸ್ಯೆಗಳು

• ಮೂಲ – ಪ್ರಾಥಮಿಕ ಮತ್ತು ಇತರೆ

• ಯೋಜನೆಗಳ ಕೆಲಸ

• ಮೌಲ್ಯಮಾಪನ

ಪರೀಕ್ಷೆಗಾಗಿ ಅತ್ಯುಪಯುಕ್ತವಾದ ಮಾದರಿ ಪ್ರಶ್ನೆಗಳು :

ಭಾಗ 1

ಬಾಲ ವಿಕಾಸ ಮತ್ತು ಬೋಧನಾ ವಿಧಾನ

ಸೂಚನೆಗಳು:

1. ಈ ಪ್ರಶ್ನೆ ಪತ್ರಿಕೆಯು 30 ಬಹು ಅಂಶ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.

1. ಪೂರ್ವ ಬಾಲ್ಯದ ಅವಧಿ

1. 1–6 ವರ್ಷ 2. 1–6 ವರ್ಷ

3. 3–6 ವರ್ಷ 4. 6–12 ವರ್ಷ

ಉತ್ತರ :

3. 3–6 ವರ್ಷ

ವಿವರಣೆ :

ವಿಕಾಸ ಪ್ರಕ್ರಿಯೆ ನಿರಂತರ; ಅದು ತಾಯಿಯ ಗರ್ಭದಿಂದಲೇ ಆರಂಭವಾಗುತ್ತದೆ. ಎಲಿಜಬೆತ್ ಹರ್ಲಾಕ್ ಮಾನವ ಜೀವ ಮಾನವನ್ನು ಕೆಳಗಿನ 11 ಹಂತಗಳಲ್ಲಿ ವಿಭಾಗಿಸಿದ್ದಾರೆ :

1. ಪ್ರಸವ ಪೂರ್ವ ಅವಧಿ : ಗರ್ಭಧಾರಣೆಯಿಂದ 280 ದಿನಗಳವರೆಗೆ (9 ತಿಂಗಳು)
2. ಶೈಶವ – ಜನನದಿಂದ ಎರಡನೇ ವಾರ
3. ಹಸುಳೆತನ – 3ನೇ ವಾರದಿಂದ 3 ವರ್ಷ
4. ಪೂರ್ವಬಾಲ್ಯ – 2/3ರಿಂದ 6 ವರ್ಷ
5. ಉತ್ತರ ಬಾಲ್ಯ – 6ರಿಂದ 10/12 ವರ್ಷ
6. ಹದಿ ಹರಯ ಪೂರ್ವ – 10/12ರಿಂದ 13/14 ವರ್ಷಗಳವರೆಗೆ
7. ಪೂರ್ವ ತಾರುಣ್ಯ ಅವಧಿ – 13/14ರಿಂದ 17 ವರ್ಷಗಳವರೆಗೆ
8. ಉತ್ತರ ತಾರುಣ್ಯ – 17ರಿಂದ 22 ವರ್ಷಗಳವರೆಗೆ
9. ಪ್ರಾಪ್ತ ವಯಸ್ಸು – 22ರಿಂದ 40 ವರ್ಷ
10. ಮಧ್ಯಮ ವಯಸ್ಸು – 40ರಿಂದ 58/60 ವರ್ಷಗಳವರೆಗೆ
11. ವೃದ್ಧಾಪ್ಯ – 59/60ರಿಂದ ಮರಣದವರೆಗೆ

2. ಸ್ಕೀಮಾ ಎಂದರೆ

1. ಜ್ಞಾನ ಸಂಸ್ಕರಿಸಲು ವ್ಯಕ್ತಿ ಹೊಂದಿರುವ ವಿಧಾನ
2. ಶಿಕ್ಷಕರೊಂದಿಗೆ ನಡೆದುಕೊಳ್ಳುವ ವಿದಾನ
3. ಮೂಲ ರಚನೆಯನ್ನು ತಿಳಿದುಕೊಳ್ಳುವ ವಿಧಾನ
4. ಸ್ನೇಹಿತರೊಂದಿಗೆ ಓದುವ ವಿಧಾನ

ಉತ್ತರ :

3. ಮೂಲ ರಚನೆಯನ್ನು ತಿಳಿದುಕೊಳ್ಳುವ ವಿಧಾನ

ವಿವರಣೆ : 'ಸ್ಕೀಮಾ' ಎಂದರೆ ಆಕೃತಿ ಕಲ್ಪ. ಸುತ್ತಲಿನ ಪರಿಸರದ ಪ್ರಭಾವ ದಿಂದ ಉಂಟಾಗುವ ಮಗುವಿನ ಮೆದುಳಿನಲ್ಲಿ ಉಂಟಾಗುವ ವಸ್ತುಗಳ 'ಮುದ್ರೆ'. ಇದರ ಮೂಲಕ ಅದು ಒಂದೊಂದೇ ವಸ್ತುಗಳನ್ನು ಗುರುತಿಸುತ್ತ ವಿಕಾಸ

ಹೊಂದುತ್ತದೆ ಎನ್ನುವುದು ಪಿಯಾಜೆಯವರು ಪ್ರತಿಪಾದಿಸಿದ ಸಿದ್ಧಾಂತದ ಒಂದು ಭಾಗ.

3. ಪಿಯಾಜೆ ರವರ ಜ್ಞಾನಾತ್ಮಕ ವಿಕಾಸದ ಮೊದಲನೆ ಹಂತ

1. ಔಪಚಾರಿಕ ಕಾರ್ಯಗಳ ಹಂತ
2. ಮೂರ್ತ ಕಾರ್ಯಗಳ ಹಂತ
3. ಸಂವೇದನಾ ಗತಿ ಹಂತ
4. ಕಾರ್ಯ ಪೂರ್ವದ ಹಂತ

ಉತ್ತರ :

3. ಸಂವೇದನಾಗತಿ ಹಂತ

ವಿವರಣೆ : ಪಿಯಾಜೆ ರವರ ಜ್ಞಾನಾತ್ಮಕ ವಿಕಾಸದ ನಾಲ್ಕು ಹಂತಳ ಕ್ರಮ :

1. ಸಂವೇದನಾ ಗತಿ ಹಂತ
2. ಕಾರ್ಯ ಪೂರ್ವದ ಹಂತ
3. ಮೂರ್ತ ಕ್ರಿಯೆಗಳ ಹಂತ
4. ಔಪಚಾರಿಕ ಕಾರ್ಯಗಳ ಹಂತ

4. ಉತ್ತರ ಬಾಲ್ಯವನ್ನು ಹೀಗೂ ಕರೆಯುತ್ತಾರೆ.

1. ಕೂಟ ಯುಗ
2. ಶಾಲಾ ಪೂರ್ವ ಹಂತ
3. ಆಧುನಿಕ ಯುಗ
4. ಕೂಟ ಪೂರ್ವ ಯುಗ

ಉತ್ತರ :

1. ಕೂಟ ಯುಗ

ವಿವರಣೆ :

ಉತ್ತರ ಬಾಲ್ಯ ಅಂದರೆ ಬಾಲ್ಯದ ನಂತರದ ಅವಧಿ. ಇದು 6–10/12 ವರ್ಷಗಳವರೆಗಿನ ಅವಧಿ. ಈ ಅವಧಿಯಲ್ಲಿ ಮಕ್ಕಳಲ್ಲಿ ಸಹಕಾರದ ಮನೋಭಾವ ಹೆಚ್ಚಾಗಿದ್ದು ತಮ್ಮ ಸಮವಯಸ್ಕರೊಂದಿಗೆ ಹೊಂದಿಕೊಳ್ಳಲು ಆ 'ಕೂಟ'ದ ಸದಸ್ಯರಾಗಲು ಬಯಸುತ್ತಾರೆ. ಈ ಕಾರಣಕ್ಕೆ ಇದು 'ಕೂಟ ಯುಗ'.

5. ಮಕ್ಕಳ ಬೌದ್ಧಿಕ ಅಗತ್ಯತೆಗಳಲ್ಲಿ ಒಂದು

1. ಉಸಿರಾಡಲು ಅವಕಾಶ
2. ನೀರು ಕುಡಿಯಲು ಅವಕಾಶ
3. ಸ್ವಯಂ ಅಭಿವ್ಯಕ್ತಿಗೆ ಅವಕಾಶ
4. ದೈಹಿಕ ಚಟುವಟಿಕೆಗೆ ಅವಕಾಶ

ಉತ್ತರ : 3. ಸ್ವಯಂ ಅಭಿವ್ಯಕ್ತಿಗೆ ಅವಕಾಶ

6. ತುಲನಾತ್ಮಕ ಉದ್ವೇಗಗಳು ಸುಲಭವಾಗಿ ಬದಲಾವಣೆ ಹೊಂದುವ ಹಂತ

1. ಬಾಲ್ಯಾವಸ್ಥೆ 2. ಶೈಶವಾವಸ್ಥೆ
3. ತಾರುಣ್ಯಾವಸ್ಥೆ 4. ವಯಸ್ಕತನ

ಉತ್ತರ :

1. ಬಾಲ್ಯಾವಸ್ಥೆ

7. ಒಬ್ಬ ತರಗತಿ ಶಿಕ್ಷಕರು ಕೆಲವು ವಿಷಯಗಳಿಗೆ ನಾಲ್ಕನೆಯ ತರಗತಿ ವಿದ್ಯಾರ್ಥಿಗಳಿಂದ ಅಭಿಪ್ರಾಯ ಸಂಗ್ರಹಿಸಲು ಬಳಸುವ ವಿಧಾನ

1. ವೀಕ್ಷಣಾ 2. ಸಂದರ್ಶನ
3. ಮನೋಭಾವ ಅಧ್ಯಯನ 4. ವ್ಯಕ್ತಿ ಅಧ್ಯಯನ

ಉತ್ತರ :

2. ಸಂದರ್ಶನ

8. ಒಂದು ನಿಯಂತ್ರಿತ ಸನ್ನಿವೇಶದಲ್ಲಿ ವ್ಯಕ್ತಿಯ ವರ್ತನೆಯನ್ನು ಅಧ್ಯಯನ ಮಾಡುವ ವಿಧಾನ

1. ಮನೋವಿಜ್ಞಾನ
2.ಅಂತರಾವಲೋಕನ
3. ಪ್ರಾಯೋಗಿಕ ವಿಧಾನ
4. ವೀಕ್ಷಣಾ ವಿಧಾನ

ಉತ್ತರ :

3. ಪ್ರಾಯೋಗಿಕ ವಿಧಾನ

ವಿವರಣೆ : ನಾಯಿಗಳ ಮೇಲೆ ಪಾವ್‌ಲೊವ್ ನಡೆಸಿದ ಪ್ರಯೋಗಗಳು, ಇಲಿಗಳ ಮೇಲೆ ಸ್ಕಿನ್ನರ್ ನಡೆಸಿದ ಪ್ರಯೋಗಗಳು ಇದಕ್ಕೆ ಉದಾಹರಣೆಗಳು.

9. ಜೆಸ್ಟಾಲ್ಟ್ ಸಿದ್ಧಾಂತದ ಗುಂಪಿಗೆ ಸೇರಿದ ಮನೋವಿಜ್ಞಾನಿ

1. ಥಾರನ್ ಡೈಕ್ 2. ವಾಟ್ಸನ್
3. ಕೊಫ್ಲೆರ್ 4. ಪಾವ್‌ಲೋವ್

ಉತ್ತರ : 3. ಕೊಫ್ಲೆರ್

ವಿವರಣೆ : ಜೆಸ್ಟಾಲ್ಟ್ ಸಿದ್ಧಾಂತ ಎಂದರೆ – ಪ್ರತಿಯೊಂದು ಅನುಭವ ಅಥವಾ ವರ್ತನೆ ಅನನ್ಯ ಸಮಗ್ರತೆಯ ಭಾಗವಾಗಿದ್ದು, ಸಮಗ್ರ ಆಕೃತಿಯು ಬಿಡಿ ಬಿಡಿ ಭಾಗಗಳ ಒಟ್ಟು ಮೊತ್ತವಲ್ಲ. ಬಿಡಿ ಭಾಗಗಳಿಗೆ ಅರ್ಥವಿಲ್ಲ. ಇಡಿ ಭಾಗವನ್ನು ಹಂತಹಂತವಾಗಿ ಅರ್ಥೈಸಿಕೊಳ್ಳಬೇಕು.

ಜೆಸ್ಟಾಲ್ಟ್ ಎನ್ನುವುದು ಜರ್ಮನ್ ಪದ. ಇದರ ಅರ್ಥ 'ಅರ್ಥಪೂರ್ಣ, ಸಮಗ್ರ ಆಕೃತಿ'. ಈ ಸಿದ್ಧಾಂತವನ್ನು 1912ರಲ್ಲಿ ಜರ್ಮನಿಯ ಮ್ಯಾಕ್ಸ್ ವರ್ದಿಮರ್ ಎಂಬಾತ ಪ್ರತಿಪಾದಿಸಿದ.

10. ವ್ಯಕ್ತಿತ್ವ ಪರೀಕ್ಷೆಗಳಲ್ಲಿನ ಪ್ರಕ್ಷೇಪಣಾ ತಂತ್ರಕ್ಕೆ ಒಂದು ಉದಾ :

1. ವಾಕ್ಯ ಪೂರ್ಣಗೊಳಿಸುವುದು
2. ದರ್ಜಾಮಾಪನ
3. ಸಂದರ್ಶನ 4. ತಪಶೀಲು ಪಟ್ಟಿಗಳು

ಉತ್ತರ : 1. ವಾಕ್ಯ ಪೂರ್ಣಗೊಳಿಸುವುದು

11. ಅಪೂರ್ಣ ಸಾಧಕರು ಎಂದರೆ

1. ಉತ್ತಮ ಸಾಧನೆ ಮಾಡುವವರು
2. ಶೈಕ್ಷಣಿಕ ಸಾಮರ್ಥ್ಯ ಮಾನಸಿಕ ಸಾಮರ್ಥ್ಯಕ್ಕಿಂತ ಕಡಿಮೆ ಇರುವವರು
3. ಉತ್ತಮ ಸಾಮಾನ್ಯ ಪ್ರಜ್ಞೆ ಮತ್ತು ಸಾಮಾನ್ಯ ಜ್ಞಾನ ಇರುವವರು
4. ವೈವಿಧ್ಯಮಯ ಆಸಕ್ತಿಗಳನ್ನು ಹೊಂದಿರುವವರು

ಉತ್ತರ :

2. ಶೈಕ್ಷಣಿಕ ಸಾಮರ್ಥ್ಯ ಮಾನಸಿಕ ಸಾಮರ್ಥ್ಯಕ್ಕಿಂತ ಕಡಿಮೆ ಇರುವವರು

12. ಕ್ರಿಯಾಜನ್ಯ ಅನುಬಂಧನ ಕಲಿಕೆ ಪ್ರತಿಪಾದಕರು

1. ಬಿ.ಎಫ್.ಸ್ಕಿನ್ನರ್ 2. ಇ.ಎಲ್. ಥಾರನ್ ಡೈಕ್
3. ಐ.ಪಿ. ಪಾವ್‌ಲೋವ್ 4. ಕರ್ಟಲೆವಿನ್

ಉತ್ತರ : 1. ಬಿ.ಎಫ್.ಸ್ಕಿನ್ನರ್

ವಿವರಣೆ : ವರ್ತನೆಗೆ ತಕ್ಕ ಪುನರ್ಬಲನ ನೀಡುವುದರಿಂದ ಕಲಿಕೆ ಹೆಚ್ಚುತ್ತದೆ ಎನ್ನುವುದನ್ನು ಇಲಿ ಹಾಗೂ ಪಾರಿವಾಳಗಳ ಮೇಲಿನ ಪ್ರಯೋಗಗಳಿಂದ ಬಿ ಎಫ್ ಸ್ಕಿನ್ನರ್ 1938ರಲ್ಲಿ ನಿರೂಪಿಸಿದರು.

13. ಈ ವಯಸ್ಸಿನ ಗುಂಪಿನ ಮಕ್ಕಳು ಮಾಡುವ ಅಪರಾಧವನ್ನು ಬಾಲಾಪರಾಧ ಎನ್ನುವರು

1. 8–18 ವರ್ಷ
2. 6–14 ವರ್ಷ
3. 7–15 ವರ್ಷ
4. 9–19 ವರ್ಷ

ಉತ್ತರ : 1. 8–18 ವರ್ಷ

14. ವಿದ್ಯಾರ್ಥಿಯೊಬ್ಬರು ಸಂಖ್ಯೆಗಳನ್ನು ತಪ್ಪಾಗಿ ಓದುತ್ತಿದ್ದರೆ ಅವರು ಈ ಕೆಳಗಿನ ನ್ಯೂನತೆ ಹೊಂದಿರುತ್ತಾರೆ

1. ದೇಹಮಾಂದ್ಯ ದೋಷ
2. ಕಲಿಕಾ ದೋಷ
3. ಅರ್ಜಿರ್ಣ ದೋಷ
4. ಗಣನ ದೋಷ

ಉತ್ತರ :

2. ಕಲಿಕಾ ದೋಷ

15. ಕಾರ್ಯಕ್ರಮಾನ್ವಯ ಬೋಧನೆಯನ್ನು ಪ್ರತಿಪಾದಿಸಿದವರು

1. ಕೊಹ್ಲರ್
2. ವರ್ದಿಮರ್
3. ಕಾಫರ
4. ಸ್ಕಿನ್ನರ್

ಉತ್ತರ : 4. ಸ್ಕಿನ್ನರ್

16. ಭಾರತ ಸಂವಿಧಾನದ ಈ ಅನುಚ್ಛೇದದಲ್ಲಿ 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ಸೇರಿಸಲಾಗಿದೆ –

1. ಅನುಚ್ಛೇದ 46
2. ಅನುಚ್ಛೇದ 16
3. ಅನುಚ್ಛೇದ 45
4. ಅನುಚ್ಛೇದ 21

ಉತ್ತರ : 3. ಅನುಚ್ಛೇದ 45

17. ವರ್ಗರಹಿತ ಸಮಾಜದ ಸೃಷ್ಟಿಯನ್ನು ಪ್ರತಿಪಾದಿಸಿದವರು –

1. ಪ್ಲೇಟೋ
2. ಅಗಸ್ಟ್ ಕಾಮ್ಟ
3. ಮಹಾತ್ಮ ಗಾಂಧಿ
4. ಕಾರ್ಲ್ ಮಾರ್ಕ್ಸ್

ಉತ್ತರ : 4. ಕಾರ್ಲ್ ಮಾರ್ಕ್ಸ್

18. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಪ್ರಾರಂಭವಾದದ್ದು

1. 1990
2. 1994
3. 1998
4.1996

19. SPOT ನ ವಿಸ್ತೃತ ರೂಪ–

1. ವಿಶೇಷ ಶಿಕ್ಷಕರ ಕಾರ್ಯಕ್ರಮ
2. ಶಿಕ್ಷಕರ ವಿಶೇಷ ಪುನಶ್ಚೇತನ ಕಾರ್ಯಕ್ರಮ
3. ಶಿಕ್ಷಕ ವಿಶೇಷ ಕಾರ್ಯಕ್ರಮಗಳು
4. ಪುನಶ್ಚೇತನ ಕಾರ್ಯಕ್ರಮಗಳು ವಿಶೇಷವಾಗಿ ಶಿಕ್ಷಕರಿಗೆ

20. 1986 ರಾಷ್ಟ್ರೀಯ ಶಿಕ್ಷಣ ನೀತಿಯು ಈ ಮೌಲ್ಯ ಮಾಪನವನ್ನು ಒತ್ತಿ ಹೇಳಿದೆ –

1. ರೂಪಣಾತ್ಮಕ ಮೌಲ್ಯಮಾಪನ
2. ನಿರಂತರವಾದ ಮೌಲ್ಯಮಾಪನ
3. ಸಂಕಲನಾತ್ಮಕ ಮೌಲ್ಯಮಾಪನ
4. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

21. ಶಿಕ್ಷಣ ವಲಯದಲ್ಲಿ ಜ್ಞಾನೇಂದ್ರಿಯಗಳ ಪಾತ್ರ – ಕುರಿತ ಸಂಶೋಧನೆ ಮಾಡಿದವರು

1. ಹರ್ಬರ್ಟ್
2. ಕೊಬುನ್
3. ರೈಸ್ ಬರ್ನ್
4. ಅಡ್ವಿನ್

22. ಅಣುಬೋಧನೆಯು ಒಂದು

1. ಬೋಧನಾ ಕೌಶಲಗಳ ತರಬೇತಿ.
2. 5 ವಿದ್ಯಾರ್ಥಿಗಳ ಗುಂಪಿಗೆ ಬೋಧಿಸುವ ತರಬೇತಿ.
3. ಸರಳ ಕೌಶಲಗಳ ಅನುಷ್ಠಾನದ ತರಬೇತಿ.
4. ಬೋಧನಾ ವಿಧಾನಗಳ ತರಬೇತಿ

ಉತ್ತರ : 2. 5 ವಿದ್ಯಾರ್ಥಿಗಳ ಗುಂಪಿಗೆ ಬೋಧಿಸುವ ತರಬೇತಿ.

23. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಎಂದರೆ

1. 19–28 ವರ್ಷದವರಿಗೆ ಉಚಿತ & ಕಡ್ಡಾಯ ಶಿಕ್ಷಣ
2. 6–14 ವರ್ಷದವರಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ
3. 14–26 ಸಂಪೂರ್ಣ ಶಿಕ್ಷಣ
4. ಸರ್ವರಿಗೂ ಶಿಕ್ಷಣ

24. ಬಹುವರ್ಗ ಬೋಧನೆ ಎಂದರೆ

1. ವಿವಿಧ ಹಂತಗಳಲ್ಲಿನ ಮಕ್ಕಳಿಗೆ ಬೋಧಿಸುವುದು
2. ವಿವಿಧ ವಯೋಮಿತಿಯ ಮಕ್ಕಳಿಗೆ ಬೋಧಿಸುವುದು
3. ವಿವಿಧ ವಯಸ್ಸಿನ ಮತ್ತು ವಿವಿಧ ತರಗತಿಯ ಮಕ್ಕಳಲ್ಲಿ ಒಬ್ಬರೇ ಶಿಕ್ಷಕರು ಕಲಿಕಾ ಸಾಮರ್ಥ್ಯಗಳನ್ನು ಬೆಳೆಸುವುದು.
4. ಬೋಧನೆಯ ಹಂತ

ಉತ್ತರ : 3. ವಿವಿಧ ವಯಸ್ಸಿನ ಮತ್ತು ವಿವಿಧ ತರಗತಿಯ ಮಕ್ಕಳಲ್ಲಿ ಒಬ್ಬರೇ ಶಿಕ್ಷಕರು ಕಲಿಕಾ ಸಾಮರ್ಥ್ಯಗಳನ್ನು ಬೆಳೆಸುವುದು.

25. ಮೌಖಿಕ ಪರೀಕ್ಷೆಯ ಒಂದು ಸಾಧನ

1. ಪ್ರಬಂಧ ಮಾದರಿ ಪ್ರಶ್ನೆ ಪತ್ರಿಕೆ
2. ಲಘು ಉತ್ತರ ಪ್ರಶ್ನೆ ಪತ್ರಿಕೆ
3. ವಾಗ್ವಾದ
4. ವ್ಯಕ್ತಿ ನಿಷ್ಠ ಪರೀಕ್ಷೆಗಳು

ಉತ್ತರ : 3. ವಾಗ್ವಾದ

26. O.H.P.ಇದರ ವಿಸ್ತೃತ ರೂಪ

1. Over Head Policy
2. Over Head Projector
3. Open heart planning
4. Operational high project

ಉತ್ತರ : 2. Over Head Projector

27. ಈ ಕೆಳಗಿನ ಯಾವ ತತ್ವ ಬೆಳವಣಿಗೆಯ ತತ್ವ ಅಲ್ಲ?

1. ನಿರಂತರತೆಯ ತತ್ವ
2. ವೈಯುಕ್ತಿಕ ಭಿನ್ನತೆಯ ತತ್ವ
3. ನಿರ್ದಿಷ್ಟತೆಯಿಂದ ಸಾಮಾನ್ಯತೆಗೆ ಸಾಗುವ ತತ್ವ
4. ಏಕೀಕರಣದ ತತ್ವ

28. 'ಅಭ್ಯಾಸ ನಿಯಮ' ಇದು ಇವರ ಕೊಡುಗೆ –

1. ಸ್ಕಿನ್ನರ್ 2. ಎಸ್.ಕೆ.ಮಂಗಲ್
3. ಥಾರನ್ ಡೈಕ್ 4. ಬರ್ಕ್‌ಲೂರಾ

ಉತ್ತರ : 3. ಥಾರನ್ ಡೈಕ್

ವಿವರಣೆ : ಥಾರನ್‌ಡೈಕ್ ತಾನು ಕೈಗೊಂಡ ಪ್ರಯೋಗಗಳ ಆಧಾರದ ಮೇಲೆ ಈ ಮೂರು ಕಲಿಕೆಯ ನಿಯಮಗಳನ್ನು ಪ್ರತಿಪಾದಿಸಿದ – 1) ಸಿದ್ಧತಾ ನಿಯಮ 2) ಅಭ್ಯಾಸ ನಿಯಮ ಮತ್ತು 3) ಪರಿಣಾಮ ನಿಯಮ

29. 'ಸಂವೇಗ' ವೆಂದರೆ ಒಂದು ಜೀವಿಯ ವಿಚಲಿತ ಸ್ಥಿತಿ ಎಂದು ತಿಳಿಸಿದವರು

1. ಪಿ.ಟಿ.ಯೂಂಗ್ 2.ಯಂಗ್ ಇಂಡಿಯಾ
3. ರಾಬರ್ಟ್ ಇಲ್ಲಿಸ್ 4. ರಾಸ್ ಸ್ಟೇಂಟರ್

30. ಇದು ಒಂದು ಪಾಠ ಯೋಜನೆಯ ಹಂತ ಅಲ್ಲ

1.ಪೂರ್ವ ಸಿದ್ಧತಾ ಹಂತ 2.ಬೆಳವಣಿಗೆಯ ಹಂತ
3.ಕಲಿಕಾ ಪೂರಕ ಹಂತ 4.ಬೋಧನೆಯ ಹಂತ

ಉತ್ತರ :

2. ಬೆಳವಣಿಗೆಯ ಹಂತ

ಭಾಗ 2
ಭಾಷೆ – 1
ಕನ್ನಡ

1. ಈ ಪ್ರಶ್ನೆ ಪತ್ರಿಕೆಯು 30 ಬಹು ಅಂಶ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.

ಸೂಚನೆ :

ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆಯ್ದು ಬರೆಯಿರಿ :

ನಾನೊಂದು ಮರವಾಗಿದ್ದರೆ
ಹಕ್ಕಿಗೂಡು ಕಟ್ಟುವ ಮುನ್ನ
ಕೇಳುತ್ತಿರಲಿಲ್ಲ ನೀನು ಯಾವ ಕುಲ
ಬಿಸಿಲು ನನ್ನ ಅಪ್ಪಿಕೊಂಡಾಗ
ನೆರಳಾಗುತ್ತಿರಲಿಲ್ಲ ಮೈಲಿಗೆ
ತಂಬೆಲರ ಕೂಡ ಎಲೆಗಳ ಸ್ನೇಹ
ಮಧುರವಾಗಿರುತ್ತಿತ್ತು
ಮಳೆಹನಿಗಳು ನಾನು ಶ್ವಪಚನೆಂದು
ಹಿಂದೆ ಸರಿಯುತ್ತಿರಲಿಲ್ಲ. ನಾನು
ಬೇರೂರಿ ಕುಡಿಯುಡುತ್ತಿರುವಾಗ ಭೂದೇವಿ
ಮಡಿ ಮಡಿ ಎಂದು ಓಡುತ್ತಿರಲಿಲ್ಲ
ಪವಿತ್ರ ಗೋವು ನನ್ನ ತೊಗಟೆಗೆ ತನ್ನ ಮೈ ಉಜ್ಜಿ
ತುರಿಕೆ ತೀರಿಸಿಕೊಳ್ಳುವಾಗ ಅದರ ಅಂಗಾಂಗಗಳಲ್ಲಿ
ಅಡಗಿಕೊಂಡ ಮುಕ್ಕೋಟಿ ದೇವತೆಗಳು
ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು
ಯಾರಿಗೆ ಗೊತ್ತು
ನನ್ನ ಅಂತ್ಯ ಕಾಲದಲ್ಲಿ
ಕಡಿದು ತುಂಡಾದ ಒಣ ಸೀಳೊಂದು
ಹೋಮಾಗ್ನಿಯಲ್ಲಿ ಬೆಂದು
ಪಾವನವಾಗುತ್ತಿತ್ತೇನೊ
ಅಥವಾ
ಸತ್ಪುರುಷನೊಬ್ಬನ ಹೆಣಕ್ಕೆ ಚಟ್ಟವಾಗಿ
ನಾಲ್ಕು ಜನ ಸಜ್ಜನರ ಹೆಗಲೇರಬಹುದಿತ್ತೇ?

1. ಕವಿ ಮರವಾಗಿದ್ದರೆ ಏನೆಂದು ಪ್ರಶ್ನಿಸುತ್ತಿರಲಿಲ್ಲ?

1. ಯಾವ ಕುಲ ಎಂದು 2. ಯಾವ ದೇವರು ಎಂದು
3. ಯಾವ ಹಕ್ಕಿ ಎಂದು 4. ಯಾವ ಮರ ಎಂದು

2. ಕವಿ ಮರವಾಗಿದ್ದರೆ, ಅದರ ನೆರಳಿಗೆ ಏನಾಗುತ್ತಿರಲಿಲ್ಲ?

1. ಮಲ್ಲಿಗೆ 2. ಮೈಲಿಗೆ
3. ಬಲೆ 4. ಸ್ನೇಹಿತ

3. ಕವಿ ಮರವಾಗಿದ್ದರೆ ಅದನ್ನು ಯಾವುದು ಅಪ್ಪಿಕೊಳ್ಳುತ್ತಿತ್ತು?

1. ಬಿಸಿಲು 2. ಮಳೆ
3. ನೆರಳು 4. ಹನಿ

4. ಕವಿ ಮರವಾಗಿದ್ದರೆ ಭೂದೇವಿ ಏನೆಂದು ಹೇಳುತ್ತಿರಲಿಲ್ಲ?

1. ಓಡು ಓಡು 2. ಬಿಡು ಬಿಡು
3. ಮಡಿ ಮಡಿ 4. ಒಡಿ ಒಡಿ

5. ಕವಿ ಮರವಾಗಿದ್ದರೆ ಅದರ ಒಣ ಸೀಳು ಯಾವುದರಲ್ಲಿ ಬೇಯುತ್ತಿತ್ತು?

1. ಎಣ್ಣೆಯಲ್ಲಿ
2. ಹೋಮಾಗ್ನಿಯಲ್ಲಿ
3. ಬಿಸಿ ನೀರಿನಲ್ಲಿ
4. ಯಾವುದರಲ್ಲೂ ಅಲ್ಲ

6. ಕವಿ ಮರವಾಗಿದ್ದರೆ ಅದರ ಒಣ ಸೀಳು ಬೆಂದು ಏನಾಗುತ್ತಿತ್ತು?

1. ಪಾವನ 2. ದೇವತೆ
3. ಮೈಲಿಗೆ 4. ಶ್ವಪಚ

ಸೂಚನೆ : ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆಯ್ದು ಬರೆಯಿರಿ :

7. ಭಾಷಾ ಕಲಿಕೆಯ ಪಠ್ಯವೊಂದರಲ್ಲಿ ಓದಬೇಕಾದ ಪಠ್ಯದಲ್ಲಿನ ಕೆಲವು ಪದಗಳನ್ನು ಖಾಲಿ ಬಿಟ್ಟು ಅದನ್ನು ಕಲಿಯುವವರು ತುಂಬಿಕೊಂಡು ಓದಬೇಕೆಂದು ನಿರೀಕ್ಷಿಸಲಾಗುತ್ತದೆ. ಈ ಭಾಷಾ ಚಟುವಟಿಕೆಯ ಉದ್ದೇಶ ....?

1. ಹೊಸ ಪದಗಳ ಬಳಕೆಯ ಅಭಿವೃದ್ಧಿ
2. ಸಂಕ್ಷೇಪಿಸುವ ಸಾಮರ್ಥ್ಯದ ಅಭಿವೃದ್ಧಿ

3. ಬರವಣಿಗೆಯ ಸಾಮರ್ಥ್ಯದ ಅಭಿವೃದ್ಧಿ

4. ಗ್ರಹಿಸುವ/ಗ್ರಹಿಕಾ ಸಾಮರ್ಥ್ಯದ ಅಭಿವೃದ್ಧಿ

8. ಕೆಳಗಿನ ಪ್ರಶ್ನೆ/ಹೇಳಿಕೆಗಳಲ್ಲಿ ಗ್ರಹಿಸುವ/ಗ್ರಹಿಕಾ ಸಾಮರ್ಥ್ಯವನ್ನು ಕುರಿತ ಪ್ರಶ್ನೆ/ಹೇಳಿಕೆ ಯಾವುದು?

1. ನೊಬೆಲ್ ಬಹುಮಾನ ಗಳಿಸಿದ ಭಾರತೀಯ ಕವಿಯನ್ನು ಹೆಸರಿಸಿ
2. 'ಕಿರಣ್ ದೇಸಾಯಿ' ಅವರ ಇನ್ಯಾವುದಾದರೂ ಪುಸ್ತಕವನ್ನು ಓದಿದ್ದೀರಾ?
3. 'ಎತ್ತಿಕೊಳ್ಳು' ಎಂಬ ಕ್ರಿಯಾ ರೂಪವನ್ನು ವಾಕ್ಯದಲ್ಲಿ ಬಳಸಿ.
4. 'ಪರ್ಯಾಯ' ಎಂಬ ಪದವನ್ನು ಇನ್ನೊಂದು ರೂಪದಲ್ಲಿ ಬರೆಯಿರಿ.

9. ಮಕ್ಕಳು ಅರ್ಥಪೂರ್ಣವಾಗಿ ಬರೆಯುವುದನ್ನು ಕಲಿಯಲು ತಮ್ಮ ..... ಕೌಶಲ್ಯಗಳಾದ ಚಿತ್ರ ಬರೆಯುವಿಕೆ, ವೃತ್ತ, ಚೌಕ ಮೊದಲಾದ ಮೂಲಭೂತ ಆಕೃತಿಗಳ ರಚನೆಯ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು.

1. ಭಾವನಾತ್ಮಕವಾದ
2. ಉಳುವಿನ
3. ಸಂವೇದನಾ
4. ಚಾಲನ ವಲಯದ

10. ಸ್ನೇಹಯುತ ಪತ್ರ ಬರೆಯುವಾಗ ಕಲಿಯುವವ ಕೆಳಗಿನ ಅಂಶಗಳಿಗೆ ಒತ್ತು ಕೊಡಬೇಕು

1. ಎಲ್ಲರಿಗೂ ಅರ್ಥವಾಗುವ ಶೈಲಿ, ಸಂಕ್ಷಿಪ್ತ ರೂಪಗಳ ಬಳಕೆ, ಸ್ವಚ್ಛವಾದ ಪತ್ರಲೇಖ ರೂಪ
2. ವೈಯಕ್ತಿಕತೆ ಮತ್ತು ಯಾವುದೇ ಚೌಕಟ್ಟಿನ ಅಗತ್ಯ ಇಲ್ಲ.
3. ಒಂದುಬಗೆಯ ಪತ್ರಲೇಖದ ಚೌಕಟ್ಟು, ವೈಯಕ್ತಿಕ ಭಾಷು, ಸಂಕ್ಷಿಪ್ತ ರೂಪಗಳು
4. ಪತ್ರ ಬರವಣಿಗೆಯ ಚೌಕಟ್ಟನ್ನು ಅಚ್ಚುಕಟ್ಟಾಗಿ ಅನುಸರಿಸಿ, ಆ ವೈಯಕ್ತಿಕ ಭಾಷೆಯನ್ನು ಬಳಸಬೇಕು.

11. ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿಗಳು ಕಲಿಯಬೇಕಾದ ಭಾಷೆಯ ಲಿಪಿ ನಿಯಮಗಳ ಕಾರಣ, ಆ ಭಾಷೆಯಲ್ಲಿ ಮಾತನಾಡಲು ಆತ್ಮ ವಿಶ್ವಾಸದ ಕೊರತೆಯಿಂದ ನರಳುತ್ತಾರೆ. ಇದನ್ನು ಕಡೆಗಾಣಿಸಲು ಒಂದು ವಿಧಾನವೆಂದರೆ –

1. ಮಾತುಕತೆಗಳನ್ನು ಒಳಗೊಂಡಂತಹ ಕ್ರೀಡಾರೂಪದ ಚಟುವಟಿಕೆಯನ್ನು ಬೋಧನೆಯಲ್ಲಿ ಅಳವಡಿಸುವುದು
2. ವಿಶೇಷ ನುಡಿ–ಚಿಕಿತ್ಸೆ (ಸ್ಪೀಚ್ ಥೆರಪಿ) ಕೊಡುವುದು
3. ತಪ್ಪುಗಳು ಆಗುತ್ತಿರುವಾಗ ಅವನ್ನು ತಕ್ಷಣವೇ ತಿದ್ದುವುದು
4. ಕಲಿಯುವವರನ್ನು ತರಗತಿಯಲ್ಲಿ ಓದಲು ಬಿಡುವುದು

12. 'ಈ ದಿನದ ಪಾಠಕ್ಕೆ ನಾನು ಹಾಡೊಂದನ್ನು ಆರಿಸಿಕೊಂಡಿದ್ದೇನೆ. ಈ ಹಾಡನ್ನು ಕೇಳಿ ಪಾಠ ಕಲಿಯುವವರು ಖಾಲಿ ಇರುವ ಭಾಗಗಳನ್ನು ತುಂಬಬೇಕು. ಆ ನಂತರ ತುಂಬಿರುವುದು ಸರಿಯೇ ಎಂದು ಗಮನಿಸೋಣ' – ಈ ಹೇಳಿಕೆ 'ಮಾಹಿತಿ .....' ಪರೀಕ್ಷಿಸುವ ಚಟುವಟಿಕೆ

1. ತಿದ್ದುಪಡಿ
2. ಅಂತರ
3. ವರ್ಗಾವಣೆ
4. ವಿನಿಮಯ

13. ಮಕ್ಕಳು ವಯಸ್ಕರಿಗಿಂತಲೂ ಅತಿ ಸುಲಭವಾಗಿ ಅನ್ಯ ಭಾಷೆಯನ್ನು ಕಲಿಯುವ ವಯಸ್ಸು

1. 8 ವರ್ಷಕ್ಕೆ ಮುಂಚೆ
2. 8 ವರ್ಷಗಳ ನಂತರ
3. 10 ವರ್ಷಕ್ಕೆ ಮುಂಚೆ
4. 13 ವರ್ಷಗಳ ನಂತರ

14. 'ಹೇಳಬೇಕಾದ ವಿಷಯಗಳ ತಿರುಳು ಹೆಚ್ಚಾದರೂ ಅದರ ಹೆಚ್ಚಳ ಆರ್ಥಿಕ ಭಾರವನ್ನು ಹೊರಿಸುವುದಿಲ್ಲ. ಅಲ್ಲದೇ ಇನ್ನೂ ಆಳವಾದ ಗ್ರಹಿಕೆಗೆ ಸಹಾಯಕವಾಗುತ್ತದೆ.' ಎಂಬ ಹೇಳಿಕೆ ಯಾವ ಮಾಧ್ಯಮವನ್ನು ಕುರಿತು ಹೇಳಿರುವಂತಹದು?

1. ಇಲೆಕ್ಟ್ರಾನಿಕ್ಸ್
2. ಹಲಗೆ, ಬಳಪ
3. ಓವರ್‌ಹೆಡ್ ಪ್ರೊಜೆಕ್ಟರ್, ಸ್ಲೈಡ್ಸ್
4. ಕಾಗದ.

15. ಬಹು ಭಾಷಿಕರಿಂದ ತುಂಬಿದ ಒಂದು ತರಗತಿಯಲ್ಲಿ ಒಂದು ಭಾಷೆಯನ್ನು ಕಲಿಯುವಾಗ

1. ಒಂದೇ ಭಾಷೆಯನ್ನಾಡುವ ವಿದ್ಯಾರ್ಥಿಗಳನ್ನು ಒಂದೆಡೆ ಕಲೆ ಹಾಕಬೇಕು
2. ಕಲಿಯಬೇಕಾದ ಭಾಷೆಯನ್ನು ಬಿಟ್ಟು ಇನ್ಯಾವ ಭಾಷೆಯನ್ನೂ ಬಳಸಬಾರದು
3. ಭಾಷಾ ಕಲಿಕೆ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುತ್ತದೆ
4. ಬಹುಬಗೆಯ ಉಚ್ಚಾರಣಾ ರೀತಿಯನ್ನು, ವಾಕ್ಯರಚನಾ ಕ್ರಮಗಳನ್ನು ಕಲಿಯುವ ಮತ್ತು ಆ ಮೂಲಕ ಕಲಿಯಬೇಕಾದ ಭಾಷೆಯ ಮೇಲೆ ಪೂರ್ಣ ಪ್ರಭುತ್ವ ಸಾಧಿಸುವ ಅವಕಾಶ ದೊರೆಯುತ್ತದೆ.

16. ದ್ವಿತೀಯ ಭಾಷೆಯನ್ನು ಕಲಿಯುವಾಗ ಆ ಭಾಷೆಯ ಮೇಲಿನ ಅಪೂರ್ಣ ಪ್ರಭುತ್ವ ಮಾಹಿತಿಯ ಭಾಷಿಕ ವರ್ಗಾವಣೆಯನ್ನು ಕುಂಠಿತಗೊಳಿಸಬಹುದು. ಆಗ ಬೋಧಕರು

1. ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾಮೂಹಿಕ ಚಟುವಟಿಕೆಗಳನ್ನು ನೀಡಬೇಕು
2. ನಿಯತವಾಗಿ ಚಿಕಿತ್ಸಾತ್ಮಕ ಪರೀಕ್ಷೆಗಳನ್ನು ವಿದ್ಯಾರ್ಥಿಗಳಿಗೆ ನೀಡಬೇಕು
3. ಸತತವಾಗಿ ವಾಚನ ಚಟುವಟಿಕೆಗಳನ್ನು ಕ್ಲಿಷ್ಟತರ ಪಠ್ಯಗಳೊಂದಿಗೆ ನಡೆಸಬೇಕು
4. ಪ್ರಥಮ ಭಾಷೆ ಮತ್ತು ದ್ವಿತೀಯ ಭಾಷೆ ಎರಡರಲ್ಲೂ ಒಂದೇ ಬಗೆಯ ಭಾಷಿಕ ಚಟುವಟಿಕೆಗಳನ್ನು ಕೊಡುವುದರ ಮೂಲಕ ವಿದ್ಯಾರ್ಥಿಗಳ ಕೌಶಲ್ಯವನ್ನು ಅಭಿವೃದ್ಧಿಪಡಿಸಬೇಕು.

17. ಸಮ್ಮಿಶ್ರ ಮಟ್ಟದ ಕೌಶಲ್ಯಗಳನ್ನು ಹೊಂದಿರುವಂತಹ ತರಗತಿಯಲ್ಲಿ ಬೋಧಕರು

1. ಅವರವರ ಪೋಷಕರನ್ನು ಭೇಟಿ ಮಾಡಿ ಕೊಟ್ಟ ಮನೆಗೆಲಸವನ್ನು ಪೂರ್ತಿಗೊಳಿಸಲು ಸಹಾಯ ಮಾಡಲು ತಿಳಿಸಬೇಕು
2. ಎಲ್ಲರೂ ಸೇರಿ ಸಾಮೂಹಿಕವಾಗಿ ಮಾಡಬೇಕಾದ ಕ್ರಿಯಾ ಚಟುವಟಿಕೆಗಳನ್ನು ರೂಪಿಸಿ ಅವರನ್ನು ಸಾಮಾಜಿಕ ಚಟುವಟಿಕೆಗಳಿಗೆ ತೊಡಗಿಕೊಳ್ಳಲು ಸೂಕ್ತವಾಗುವಂತೆ ರೂಪಿಸಬೇಕು.
3. ವಿದ್ಯಾರ್ಥಿಗಳನ್ನು ಶಾಲೆಯ ನಂತರ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸಬೇಕು.
4. ಮನೋತಜ್ಞರನ್ನು ಕಾಲಕಾಲಕ್ಕೆ ಕರೆಸಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅರಿತುಕೊಳ್ಳಬೇಕು.

18. ಕೆಲವು ಬಾರಿ ಪಠ್ಯ ಪುಸ್ತಕದ ಪ್ರಶ್ನೆಗಳು ನೀರಸವೆನಿಸಬಹುದು. ಆಗ ಬೋಧಕರು–

1. ಪಠ್ಯದ ಪ್ರಶ್ನೆಗಳಿಗೇ ಅಂಟಿಕೊಳ್ಳಬೇಕು

2. ಹೆಚ್ಚುವರಿ ಪಠ್ಯಗಳನ್ನು ಕೊಡಬೇಕು

3. ಸೃಜನಶೀಲ ಮತ್ತು ಸಮಸ್ಯಾ ನಿವಾರಕ ಚಟುವಟಿಕೆಗಳನ್ನು ಕೊಡಬೇಕು

4. ಇನ್ನೊಂದು ಪಠ್ಯವನ್ನು ತಯಾರಿಸಬೇಕು

19. ಇಂಗ್ಲಿಷ್ ತರಹದ ಭಾಷೆಗಳನ್ನು ಕಲಿಯುವಾಗ ಸ್ಪೆಲ್ಲಿಂಗ್ ಕಾರಣದಿಂದ ವಿದ್ಯಾರ್ಥಿಗಳು ಓದುವಾಗ ಸಮಸ್ಯೆಯಲ್ಲಿ ಸಿಲುಕಬಹುದು. ಆಗ ವಿದ್ಯಾರ್ಥಿಗಳು –

1. ಸ್ಪೆಲ್ಲಿಂಗ್ ಮತ್ತು ಉಚ್ಚಾರಣೆಯನ್ನು ಹೊಂದಿಸಿಕೊಳ್ಳುತ್ತಾ ಗಟ್ಟಿಯಾಗಿ ಓದಬೇಕು.

2. ಆ ಪದಗಳನ್ನು ಓದುವಾಗ ಸರಿಯಾದ ಉಚ್ಚಾರಣೆಯನ್ನು ಕೇಳಿಸಿಕೊಂಡು ಅದೇ ತರಹ ಉಚ್ಚರಿಸಬೇಕು.

3. ಬೋಧಕರ ಉಚ್ಚಾರಣೆಯನ್ನು ಅನುಸರಿಸಬೇಕು.

4. ತಮಗೆ ತಾವೇ ಕಷ್ಟವೆನಿಸಿದ ಪದಗಳನ್ನು ಮತ್ತೆ ಮತ್ತೆ ಓದಬೇಕು

20. ಶಾಲಾ ತರಗತಿಯೊಂದರಲ್ಲಿ ವಿಭಿನ್ನ ಸಾಮರ್ಥ್ಯದ (ಸ್ಪೆಷೆಲಿ ಏಬಲ್ಡ್) ವಿದ್ಯಾರ್ಥಿಗಳನ್ನು ಆತ್ಮ ವಿಶ್ವಾಸ ಮತ್ತು ಆತ್ಮ ಸಮ್ಮಾನದೊಂದಿಗೆ ಭಾಗವಹಿಸುವಂತೆ ಮಾಡಲು

1. ಅದಕ್ಕೆಂದೇ ನುರಿತ ಅಧ್ಯಾಪಕರನ್ನು ನೇಮಿಸಬೇಕು

2. ಅಂತಹ ವಿದ್ಯಾರ್ಥಿಗಳನ್ನು ಕಲೆ ಹಾಕಿ ಉಳಿದ ವಿದ್ಯಾರ್ಥಿಗಳಿಂದ ಬೇರ್ಪಡಿಸಬೇಕು.

3. ಅವರಿಗೆ ಪ್ರತ್ಯೇಕ ಪಠ್ಯಗಳನ್ನು ಕೊಡಬೇಕು.

4. ಪರಸ್ಪರ ಚರ್ಚೆ, ವಿನಿಮಯ ಮತ್ತು ಸಹಕಾರಯುಕ್ತ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

21. ಪಾರಂಪರಿಕ ಭಾಷಾ ತರಗತಿಗಳು ಬೋಧಕ ಕೇಂದ್ರೀಕೃತ ಮತ್ತು ಆಧುನಿಕ ಭಾಷಾ ತರಗತಿಗಳು ವಿದ್ಯಾರ್ಥಿ ಕೇಂದ್ರಿತ ಎಂಬ ಹೇಳಿಕೆಯಲ್ಲಿ 'ವಿದ್ಯಾರ್ಥಿ ಕೇಂದ್ರಿತ' ಎಂಬುದರ ಗುಣ ಲಕ್ಷಣಗಳನ್ನು ಗುರುತಿಸಿ –

1. ಬೋಧಕರು ವಿದ್ಯಾರ್ಥಿಗಳಿಗೆ ಉತ್ತೇಜನ, ಪ್ರಚೋದನೆ, ಬೆಂಬಲ ಮತ್ತು ಮಾಹಿತಿಯನ್ನು ನೀಡುತ್ತಾರೆ; ವಿದ್ಯಾರ್ಥಿಗಳು ನಿರ್ದೇಶಿಸಲ್ಪಟ್ಟ ಭಾಷಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

2. ವಿದ್ಯಾರ್ಥಿಗಳು ಬೋಧಕರನ್ನು ಬರವಣಿಗೆ, ಮಾತುಕತೆ ಎಲ್ಲದರಲ್ಲೂ ಅನುಕರಿಸುತ್ತಾರೆ.

3. ಬೋಧಕರು ಎಲ್ಲಾ ಕಲಿಕಾ ಚಟುವಟಿಕೆಗಳ ಉಸ್ತುವಾರಿದಾರರಾಗಿದ್ದು ವಿದ್ಯಾರ್ಥಿಗಳ ಅಗತ್ಯವನ್ನು ನಿರ್ಧರಿಸುತ್ತಾರೆ.

4. ವಿದ್ಯಾರ್ಥಿಗಳು ತರಗತಿಯ ಹೊರಗೆ ಸ್ವಂತವಾಗಿ ಕಲಿತು ನಿಯತವಾಗಿ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಾರೆ.

ಸೂಚನೆ :

ಕೆಳಗೆ ಕೊಟ್ಟಿರುವ ಗದ್ಯವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ ಸೂಕ್ತವಾದ ಆಯ್ಕೆಯನ್ನು ಆರಿಸಿ ಉತ್ತರಿಸಿ :

ನಾನು ಚಿಕ್ಕಂದಿನಲ್ಲಿಯೇ ಗೀಜಗನ ಗೂಡನ್ನು ನೋಡಿದ್ದೆನಾದರೂ ಅದನ್ನು ಸವಿವರವಾಗಿ ಅಭ್ಯಾಸ ಮಾಡಿದ್ದು ಶಿವಮೊಗ್ಗಾದಲ್ಲಿ. ಅನುಕೂಲವಾದ ಪರಿಸರ ಸಿಕ್ಕರೆ ಹಕ್ಕಿಗಳ ಸಂಖ್ಯೆ ಹೇಗೆ ಹೆಚ್ಚುತ್ತದೆ ಎನ್ನುವುದಕ್ಕೆ ಶಿವಮೊಗ್ಗಾ ಜಿಲ್ಲೆ ಒಮದು ಉದಾಹರಣೆ. ಶಿವಮೊಗ್ಗಾ ಜಿಲ್ಲೆಗೆ ಗಾಜನೂರು ಮತ್ತು ಲಕ್ಕವಳ್ಳಿ ನಾಲೆ ನೀರು ಬರಲು ಆರಂಭವಾದೊಡನೆ ಅಲ್ಲಿ ಎಲ್ಲೋ ಅಪರೂಪಕ್ಕೆ ಹೊಳೆ ದಡದಲ್ಲಿ ಕಾಣಬರುತ್ತಿದ್ದ ಗೀಜಗನ ಗೂಡುಗಳು ಈಗ ಎಲ್ಲೆಂದರಲ್ಲಿ ಕಾಣುತ್ತವೆ. ಇದಕ್ಕೆ ಮುಖ್ಯ ಕಾರಣ ಆ ಜಿಲ್ಲೆಯಲ್ಲಿ ನಾಲಾ ನೀರಿನ ಆಧಾರದ ಮೇಲೆ ಭತ್ತ ಬೆಳೆಯುವುದರಿಂದ ಎಲ್ಲಾ ಋತುಮಾನಗಳಲ್ಲೂ ಒಂದಲ್ಲಾ ಒಂದು ಕಡೆ ಕುಯ್ಲಿಗೆ ಬಂದ ಭತ್ತದ ಬೆಳೆ ಇದ್ದೇ ಇರುತ್ತದೆ. ಗೀಜಗನ ಹಕ್ಕಿಗಳಿಗೆ ಇಲ್ಲಿ ವರ್ಷವಿಡೀ ನಿರಂತರವಾಗಿ ಆಹಾರ ಸಿಗುತ್ತದೆ. ರೈತರು ಭತ್ತದ ಜೊತೆ ಕಬ್ಬನ್ನೂ ಬೆಳೆಯುವುದರಿಂದ ಗೀಜಗನ ಹಕ್ಕಿಗಳಿಗೆ ಗೂಡು ಕಟ್ಟಲು ಅಗತ್ಯವಾದ ನಾರು ಸಹ ನಿರಾಯಾಸವಾಗಿ ದೊರೆಯುತ್ತದೆ. ಗೀಜಗನ ಹಕ್ಕಿಗಳು ಈಗ ಹಳ್ಳ ಕೊಳ್ಳ ಗುಂಡಿಗಳತ್ತ ಬಾಗಿರುವ ಪ್ರತಿಯೊಂದು ಕೊಂಬೆಗಳ ಮೇಲೂ ಕಬ್ಬಿನ ಗರಿಗಳನ್ನು ಸೀಳಿ ಸಂಪಾದಿಸಿದ ನಾರಿನಿಂದ ಸಾಲು ಸಾಲು ಗೂಡುಗಳನ್ನು ನಿರ್ಮಿಸುತ್ತವೆ. ಆದರೆ ಗೀಜಗನ ಗೂಡುಗಳಿಂದ ತೊಂದರೆಗೊಳಗಾಗಿರುವವರೆಂದರೆ ಟೆಲಿಫೋನ್ ಮತ್ತು ವಿದ್ಯುಚ್ಛಕ್ತಿ ಇಲಾಖೆಯವರು. ಕಬ್ಬಿನ ಗದ್ದೆಗಳ ಬಳಿ ಎಳೆದಿರುವ ತಂತಿಗಳ ಮೇಲೆ ಸಾಲು ಸಾಲಾಗಿ ಜೋತಾಡುತ್ತಿರುವ ಸಾವಿರಾರು ಗೀಜಗನ ಗೂಡುಗಳನ್ನು ನೋಡಬಹುದು. ವಿದ್ಯುತ್ತಂತಿಗಳಿಗೆ ಕಟ್ಟಿದ ಗೂಡೇನೂ ಬೀಳುವುದಿಲ್ಲ. ಆದರೆ ಕೊಂಬೆಯ ಮೇಲೆ ಗೂಡು ಕಟ್ಟಿದಾಗ ಅತ್ತಿತ್ತ ಜಾರದ ಹಾಗೆ ಬಿಗಿಯುವಂತೆ ತಂತಿಯ ಮೇಲೆ ಕಟ್ಟಿದಾಗ ಸಾಧ್ಯವಾಗುವುದಿಲ್ಲ. ವಿದ್ಯುತ್ತಂತಿಗಳಿಗೆ ಕೊಂಬೆಗಳಂತೆ ಅಡ್ಡ ಕವಲುಗಳು ಇರುವುದಿಲ್ಲ. ಕೆಳಗೆ ಬೀಳದಂತೆ ಭದ್ರವಾಗಿ ಬಿಗಿದರೂ ಅಡ್ಡಡ್ಡಲಾಗಿ ಅವನ್ನು ಸುಲಭವಾಗಿ ಜರುಗಿಸಬಹುದು. ಜೋರಾಗಿ ಗಾಳಿ ಬೀಸಿದಾಗ ಅಷ್ಟೂ ಗೂಡುಗಳೂ ಜಾರಿ ಜರುಗುತ್ತಾ ಕಂಬದ ಇನ್ಸುಲೇಟರ್ ಬಳಿ ಎಲ್ಲ ಪಿಂಡಿ ಕಟ್ಟಿದಂತೆ ಸಿಕ್ಕಿಕೊಂಡು ಮಳೆ ಬಂದ ಕೂಡಲೇ ತೊಯ್ದು ಗೂಡುಗಳಿಂದ ಷಾರ್ಟ್ ಸರ್ಕ್ಯೂಟ್ ಪ್ರಾರಂಭವಾಗುತ್ತದೆ. ಗೀಜಗನ ಹಕ್ಕಿಗಳಿಂದ, ಗೂಡುಗಳಿಂದ ರೈತರಿಗೆ ಹೆಚ್ಚಿನ ತೊಂದರೆ ಇಲ್ಲದಿದ್ದರೂ ಸರ್ಕಾರಿ ಇಲಾಖೆಗಳಿಗೆ ತೊಂದರೆಯಾಗುತ್ತಿರುವುದರ ಅಪರೂಪದ ಉದಾಹರಣೆ ಇದು.

22. ಗೀಜಗನ ಹಕ್ಕಿಗಳಿಗೆ ಶಿವಮೊಗ್ಗಾದಲ್ಲಿ ವರ್ಷವಿಡೀ ಸಿಕ್ಕುವ ಆಹಾರ ಯಾವುದು?

1. ಗೋದಿ 2. ಕಬ್ಬು
3. ಭತ್ತ 4. ರಾಗಿ

23. ಶಿವಮೊಗ್ಗಾ ಜಿಲ್ಲೆಗೆ ಹರಿದು ಬರುವ ನಾಲೆ ನೀರು ಎಲ್ಲಿಂದ ಹರಿದು ಬರುತ್ತದೆ?

1. ಗಾಜನೂರು 2. ಲಕ್ಕವಳ್ಳಿ
3. ಮೇಲಿನ ಎರಡೂ ಅಲ್ಲ 4. ಮೇಲಿನ ಎರಡೂ ಹೌದು

24. ಗೀಜಗನ ಹಕ್ಕಿಗಳಿಗೆ ಗೂಡು ಕಟ್ಟಲು ಅಗತ್ಯವಾದುದು ಏನು?

1. ನಾರು 2. ನೀರು
3. ನಾಲೆ 4. ಮಳೆ

25. ಮೇಲಿನ ಗದ್ಯದಲ್ಲಿ ಹೇಳಿದ ಹಾಗೆ ಗೂಡು ಕಟ್ಟಲು ಅವಶ್ಯವಿರುವ ನಾರು ಗೀಜಗನ ಹಕ್ಕಿಗಳಿಗೆ ಎಲ್ಲಿಂದ ದೊರೆಯುತ್ತದೆ?

1. ಭತ್ತ 2. ಕಬ್ಬು
3. ನಾಲೆ 4. ಮರ

26. ಮೇಲಿನ ಗದ್ಯದ ಲೇಖಕ ಗೀಜಗನ ಹಕ್ಕಿಗಳತ್ತ ಗಮನ ಹರಿಸಿದ್ದು ಯಾವ

ಸ್ಥಳದಲ್ಲಿ?

1. ಗಾಜನೂರು 2. ಲಕ್ಕವಳ್ಳಿ
3. ಚಿಕ್ಕಮಗಳೂರು 4. ಶಿವಮೊಗ್ಗಾ

27. ಶಿವಮೊಗ್ಗದಲ್ಲಿ ಬೆಳೆಯುವ ಪ್ರಮುಖ ಬೆಳೆಗಳು ಯಾವುವು?

1. ಭತ್ತ 2. ಕಬ್ಬು
3. ಎರಡೂ ಅಲ್ಲ 4. ಎರಡೂ ಹೌದು

28. ಶಿವಮೊಗ್ಗ ಜಿಲ್ಲೆಯ ಭತ್ತದ ವ್ಯವಸಾಯಕ್ಕೆ ಮೂಲ ಆಧಾರ ಯಾವುದು?

1. ಮಳೆ 2. ಏತ ನೀರಾವರಿ
3. ನಾಲೆ ನೀರಾವರಿ 4. ಕೆರೆ ನೀರಾವರಿ

29. ಗೀಜಗನ ಗೂಡುಗಳಿಂದ ತೊಂದರೆಗೊಳಗಾದ ಸರ್ಕಾರಿ ಇಲಾಖೆಗಳು ಯಾವುವು?

1. ಟೆಲಿಫೋನ್ 2. ವಿದ್ಯುಚ್ಛಕ್ತಿ
3. ಎರಡೂ ಹೌದು 4. ಯಾವುದೂ ಅಲ್ಲ

30. ಗೀಜಗನ ಹಕ್ಕಿ ವಿದ್ಯುತ್ ತಂತಿಯ ಮೇಲೆ ಗೂಡು ಕಟ್ಟಿದಾಗ ಆಗುವ ಅನಾಹುತ –

1. ಲೋ ವೋಲ್ಟೇಜ್ 2. ಹೈ ವೋಲ್ಟೇಜ್
3. ಷಾರ್ಟ್ ಸರ್ಕ್ಯೂಟ್ 4. ಯಾವುದೂ ಅಲ್ಲ

ಉತ್ತರಗಳು

1-(1)	2-(2)	3-(1)	4-(3)	5-(2)
6-(1)	7-(4)	8-(3)	9-(4)	10-(4)
11-(1)	12-(3)	13-(1)	14-(3)	15-(4)
16-(4)	17-(2)	18-(3)	19-(1)	20-(4)
21-(1)	22-(3)	23-(4)	24-(1)	25-(2)
26-(4)	27-(4)	28-(3)	29-(3)	30-(3)

ಭಾಗ 3

(ಭಾಷೆ–1ನ್ನು ಕನ್ನಡ ಎಂದು ತೆಗೆದುಕೊಂಡವರು ಭಾಷೆ–2ನ್ನಾಗಿ ಕನ್ನಡದ ಬದಲು ಬೇರೆ ಒಂದು ಭಾಷಾ ವಿಷಯ ತೆಗೆದುಕೊಳ್ಳಬೇಕು. ಇಲ್ಲಿ ಭಾಷೆ–2ನ್ನು ಕನ್ನಡ ಎಂದು ತೆಗೆದುಕೊಂಡವರಿಗೆ ಮಾದರಿ ಪ್ರಶ್ನೆ ಪತ್ರಿಕೆಯನ್ನು ಕೊಡಲಾಗಿದೆ. ಇದು ಭಾಷೆ–1ನ್ನಾಗಿ ಕನ್ನಡವನ್ನು ತೆಗೆದುಕೊಂಡವರಿಗೂ ಅಭ್ಯಾಸಕ್ಕಾಗಿ ಅತ್ಯುಪಯುಕ್ತ. ಭಾಷೆ–2ನ್ನು ಇಂಗ್ಲಿಷ್‌ನ್ನಾಗಿ ತೆಗೆದುಕೊಂಡವರಿಗೆ ಇದರ ನಂತರ ಮಾದರಿ ಪ್ರಶ್ನೆ ಪತ್ರಿಕೆಯನ್ನು ಕೊಡಲಾಗಿದೆ.)

ಭಾಷೆ – 2
ಕನ್ನಡ

1. ಈ ಪ್ರಶ್ನೆ ಪತ್ರಿಕೆಯು 30 ಬಹು ಅಂಶ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.

ಸೂಚನೆ :

ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆಯ್ದು ಬರೆಯಿರಿ :

ಈ ಕಾವ್ಯದ ನಾಯಕ ಕುಮಾರ ರಾಮ. ಇವನ ತಂದೆ ಕಂಪಿಲರಾಯ. ಇಬ್ಬರೂ ಕಂಪಿಲಿ ಅರಸು ಮನೆತನದ ಪ್ರಭಾವೀ ನಾಯಕರು. ಕಾಲದ ದೃಷ್ಟಿಯಿಂದ ಈ ಅರಸು ಮನೆತನ ಅಲ್ಪಾವಧಿಯದಾಗಿದ್ದರೆ, ಪ್ರಾದೇಶಿಕ ವ್ಯಾಪ್ತಿಯಲ್ಲಿ ಚಿಕ್ಕದಾಗಿತ್ತು. ಮೂಲತಃ ಬಳ್ಳಾರಿ, ರಾಯಚೂರು, ಧಾರವಾಡ ಜಿಲ್ಲೆಗಳಿಂದ ಕೂಡಿದ್ದು, ಮುಂದೆ ಬೆಳೆದು ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳನ್ನು ಕೂಡಿತೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಕೇವಲ ಅರ್ಧ ಶತಮಾನ ಬಾಳಿ ಆಳಿದ ಸಣ್ಣ ಅರಸು ಮನೆತನವಿದು. ಲಭ್ಯವಿರುವ ಅಲ್ಪ ಆಧಾರಗಳಿಂದ ಪ್ರಸ್ತುತ ಅರಸು ಮನೆತನದ ಸಮಗ್ರ ಇತಿಹಾಸವನ್ನು ರೂಪಿಸುವುದು ಕಷ್ಟ ಎಂಬ ಅಭಿಪ್ರಾಯ ಇತಿಹಾಸಕಾರರದು. ನಂಜುಂಡ ಕವಿ ರಾಮನಾಥ ಚರಿತೆಯನ್ನು ಬರೆಯುವ ಕಾಲಕ್ಕೂ ಕಂಪಿಲರಾಯ, ಕುಮಾರರಾಮರು ರಾಜ್ಯವಾಳಿದ ಕಾಲಕ್ಕೂ ಸುಮಾರು ಎರಡುನೂರು ವರ್ಷಗಳ ಅಂತರವಿದೆ. ಇನ್ನೂರು ವರ್ಷಗಳ ಹಿಂದಿನ ಐತಿಹಾಸಿಕ ಘಟನೆ, ಸನ್ನಿವೇಶಗಳನ್ನು ತನ್ನ ಕಾವ್ಯದ ವಸ್ತುವನ್ನಾಗಿ ಮಾಡಿಕೊಳ್ಳುವ ಸಂದರ್ಭದಲ್ಲಿ ನಂಜುಂಡ ಯಾವ ಮೂಲದಿಂದ ಇತಿಹಾಸವನ್ನು ಪಡೆದುಕೊಂಡ? ಎಂಬುದು ಅತ್ಯಂತ ಕುತೂಹಲದ ಸಂಗತಿ. ಅಲ್ಲದೇ ಪ್ರಾದೇಶಿಕವಾಗಿ ಕವಿ ಪರಿಸರಕ್ಕಿಂತ ಈ ಕಾವ್ಯ ಪರಿಸರ ದೂರವಾಗಿದೆ. ಕಾಲ ಹಾಗೂ ಪ್ರದೇಶಗಳ ಈ ದೀರ್ಘ ಅಂತರವನ್ನು ಕವಿ ತನ್ನದೇ ರೀತಿಯಲ್ಲಿ ಅರಗಿಸಿಕೊಂಡದ್ದು ಗಮನಾರ್ಹ. ಕುಮಾರ ರಾಮನ ಜೀವನ ಅವನು ಬದುಕಿರುವಾಗ ಅಥವಾ ಮರಣಾ ನಂತರ ಐತಿಹ್ಯವಾಗಿ ಜನಮನದಲ್ಲಿ ಹರಡಿಕೊಂಡಿತೆಂಬುದು ಒಪ್ಪಿತ ಅಭಿಪ್ರಾಯ.

1. ನಂಜುಂಡ ಕವಿ ರಾಮನಾಥ ಚರಿತೆಯನ್ನು ಬರೆಯುವ ಕಾಲಕ್ಕೂ ಕಂಪಿಲಿ ರಾಯನ ಕಾಲಕ್ಕೂ ಇರುವ ಅಂತರವೇನು?

1. 200 ವರ್ಷ 2. ಒಂದು ಸಹಸ್ರಮಾನ
3. 500 ವರ್ಷ 4. ಒಂದು ಶತಮಾನ

2. ಕಂಪಲಿ ಅರಸು ಮನೆತನದ ಕಾಲಾವಧಿ?

1. ಮಧ್ಯಮಾವಧಿ 2. ದೀರ್ಘಾವಧಿ
3. ಅಲ್ಪಾವಧಿ 4. ಈ ಯಾವುದೂ ಅಲ್ಲ

3. ಮೇಲೆ ಹೇಳಿದ ಗದ್ಯದಲ್ಲಿನ ಕಾವ್ಯಕ್ಕೆ ನಾಯಕನಾದ ಐತಿಹಾಸಿಕ ವ್ಯಕ್ತಿ ಯಾರು?

1. ಕುಮಾರ ರಾಮ 2. ಕಂಪಿಲ ರಾಯ
3. ನಂಜುಂಡ 4. ಈ ಯಾರೂ ಅಲ್ಲ

4. ಕಂಪಲಿ ಅರಸು ಮನೆತನ ಎಷ್ಟು ಕಾಲ ಬಾಳಿತ್ತು?

1. ಅರ್ಧ ಶತಮಾನ 2. ಅರ್ಧ ಸಹಸ್ರಮಾನ
3. ಶತಮಾನ 4. ಈ ಯಾವುದೂ ಅಲ್ಲ

5. ಕುಮಾರ ರಾಮನ ತಂದೆಯ ಹೆಸರು?

1. ಕಪಿಲ ರಾಯ 2. ನಂಜುಂಡ
3. ಕಂಪಿಲ ರಾಯ 4. ರಾಮರಾಯ

6. ಕುಮಾರರಾಮನನ್ನು ಕುರಿತು ಕಾವ್ಯ ಬರೆದಿರುವವರು ಯಾರು?

1. ನಂಜುಂಡ 2. ಆಂಡಯ್ಯ
3. ಮುದ್ದಣ 4. ಕಂಪಿಲರಾಯ

ಸೂಚನೆ :

ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ :

7. ಈ ಕೆಳಗಿನ ಓದುವಿಕೆಯ ಪ್ರಶ್ನೆಗೆ ಹೇಗೆ ಅಂಕ ನೀಡುವಿರಿ?

ಪ್ರಶ್ನೆ : ಹುಲಿಯು ನಶಿಸಿ ಹೋಗಿರುವ ಪ್ರಾಣಿಯೇ?

ಉತ್ತರ 1) ಇಲ್ಲ, ಅಪರೂಪವಾಗುತ್ತಿರುವ ಪ್ರಾಣಿ.

ಉತ್ತರ 2) ಹುಲಿಯು ನಶಿಸಿ ಹೋಗುತ್ತಿರುವ ಪ್ರಾಣಿ.

1. ಉತ್ತರ (2)ಕ್ಕೆ 1/2 ಅಂಕ, ಉತ್ತರ (1)ಕ್ಕೆ 1 ಅಂಕ
2. ಉತ್ತರ (2)ಕ್ಕೆ 1 ಅಂಕ, ಉತ್ತರ (1)ಕ್ಕೆ 1 ಅಂಕ
3. ಉತ್ತರ (2)ಕ್ಕೆ 1 ಅಂಕ, ಉತ್ತರ (1)ಕ್ಕೆ 0 ಅಂಕ
4. ಉತ್ತರ (1)ಕ್ಕೆ 1/2 ಅಂಕ, ಉತ್ತರ (2)ಕ್ಕೆ 1 ಅಂಕ

8. ಕೊಟ್ಟಿರುವ ಪಠ್ಯ ಉಪಯುಕ್ತವೇ, ಇಲ್ಲವೇ ಎಂದು ಗುರುತಿಸಲು ವಿದ್ಯಾರ್ಥಿಗಳಿಗೆ ಹೇಳಿಕೊಡು ಓದುವಿಕೆ (ರೀಡಿಂಗ್ ಸ್ಟ್ರಾಟೆಜಿ) ತಂತ್ರ –

1. ಊಹಿಸುವಿಕೆ 2. ಸಂಕ್ಷೇಪಿಸುವಿಕೆ
3. ಸ್ಕ್ಯಾನಿಂಗ್ 4. ಸ್ಕಿಮ್ಮಿಂಗ್

9. ವಿದ್ಯಾರ್ಥಿಗಳು 'ಮಹಾಕಾವ್ಯಗಳ ರಹಸ್ಯ' ಎಂಬ ನಾಟಕ ಬರೆಯುತ್ತಾರೆ. ಅದರಲ್ಲಿ ನಾಲ್ಕು ಪಾತ್ರಗಳು ಮತ್ತು ಹತ್ತು ಸಾಲುಗಳಿವೆ. ಪ್ರತೀ ಪಾತ್ರ ಒಂದು ಬಗೆಯ ವಾಕ್ಯರಚನೆಯನ್ನು ಮಾತ್ರ ಬಳಸುತ್ತದೆ. ಈ ಬಗೆಯ ಚಟುವಟಿಕೆ ಕೆಳಗಿನ ಯಾವ ಕೌಶಲ್ಯಕ್ಕೆ ಸಂಬಂಧಿಸಿದ್ದು?

1. ಓದುವಿಕೆಯ ನಂತರದ ಚಟುವಟಿಕೆ
2. ಬರಹಪೂರ್ವ ಚಟುವಟಿಕೆ
3. ವ್ಯಾಕರಣ ಅನ್ವಯ
4. ಪದಕೋಶ ಅಭಿವೃದ್ಧಿ

10. ಮೂರನೇ ತರಗತಿಯ ವಿದ್ಯಾರ್ಥಿಗಳ ಸೃಜನಶೀಲ ಓದುವಿಕೆಗೆ ಬಹಳ ಉಪಯುಕ್ತವಾದ ಪ್ರವೇಶಿಕೆ ಯಾವುದು?

1. ಚಿತ್ರ ಇಲ್ಲವೇ ಭಾವಚಿತ್ರಗಳನ್ನು ಬಳಸಿ ಚರ್ಚಿಸುವುದು
2. ವಿದ್ಯಾರ್ಥಿಗಳನ್ನು ಅವರವರಿಷ್ಟಕ್ಕೆ ತಕ್ಕಂತೆ ಬರೆಯಲು ಹೇಳುವುದು
3. ವಿವರವಾದ ಚರ್ಚೆ
4. ಹಲಗೆಯ ಮೇಲೆ ಸ್ಥೂಲವಾದ ವಿವರಣೆ ಕೊಡುವುದು

11. ನಿಮ್ಮ ತರಗತಿಯಲ್ಲಿ ಕಲಿಯುವವರು ಇಂಗ್ಲಿಷ್‌ನಲ್ಲಿ ಮಾತನಾಡಲು ಹಿಂಜರಿಯುತ್ತಿದ್ದಾರೆ. ಆ ಹಿಂಜರಿಕೆಯನ್ನು ಹೋಗಲಾಡಿಸಲು ನೀವೇನು ಕ್ರಮ ಕೈಗೊಳ್ಳುವಿರಿ?

1. ತರಗತಿಗೆ ಪೂರ್ವಸಿದ್ಧತೆಗಳಿಲ್ಲದೇ ಬಹಳ ಸುಲಭವಾದ ವಿಷಯಗಳನ್ನು ಕೊಡುವುದು
2. ಅಂತಹ ವಿದ್ಯಾರ್ಥಿಗಳನ್ನು ತಮ್ಮ ವಿಷಯ ಮಂಡಿಸಲು ಕೊನೆಯಲ್ಲಿ ಅವಕಾಶ ನೀಡುವುದು
3. ವೈಯಕ್ತಿಕವಾಗಿ ಇಂಗ್ಲಿಷ್ ಪಾಠ ಹೇಳುವುದು
4. ಚಿಕ್ಕ ಗುಂಪುಗಳಲ್ಲಿ ವಿದ್ಯಾರ್ಥಿಗಳನ್ನು ಜೊತೆ ಮಾಡಿ ಸ್ವಂತ ಬರಹಗಳನ್ನು ಹೊರ ತರುವಂತೆ ಮಾಡುವುದು

12. ಶ್ರವಣ ಕೌಶಲ್ಯವನ್ನು ಅಭ್ಯಸಿಸಲು, ಬೋಧಕರು ವಿದ್ಯಾರ್ಥಿಗಳಿಗೆ ರೈಲ್ವೆಯ ಪ್ರಕಟಣೆಗಳನ್ನು ಕೇಳಿ ರೈಲುಗಳು ಬರುವ ಮತ್ತು ಹೊರಡುವ ವೇಳಾಪಟ್ಟಿಯನ್ನು ಸಿದ್ಧಪಡಿಸಲು ಹೇಳಿದ್ದಾರೆ. ಇಲ್ಲಿ ವಿದ್ಯಾರ್ಥಿಗಳು ....

1. ಒಂದು ಪ್ರಕಟಣೆಯನ್ನು ಗಟ್ಟಿಯಾಗಿ ಓದುತ್ತಿದ್ದಾರೆ.
2. ಒಂದು ಸಿದ್ಧ ಪಟ್ಟಿಯನ್ನು ಅರ್ಥೈಸುತ್ತಿದ್ದಾರೆ.
3. ಕಿರು ಚಿತ್ರವೊಂದನ್ನು ನೋಡುತ್ತಿದ್ದಾರೆ.
4. ಶ್ರವ್ಯ ಧ್ವನಿ ಸುರುಳಿಯೊಂದನ್ನು ಕೇಳಿಸಿಕೊಂಡು ವೇಳಾಪಟ್ಟಿಯನ್ನು ಸಿದ್ಧಪಡಿಸುತ್ತಿದ್ದಾರೆ.

13. ಪ್ರೌಢಾವಸ್ಥೆಯ ನಂತರ ಹೊಸ ಭಾಷೆಯೊಂದನ್ನು ಕಲಿಯುವಾಗ ....

1. ಸಾಧಾರಣ ಪ್ರಭುತ್ವ ದೊರಕುತ್ತದೆ.
2. ಭಾಷೆಯ ಗಳಿಕೆ ತುಸು ಕಷ್ಟಕರವಾಗುತ್ತದೆ.
3. ಪ್ರಭುತ್ವ ದಕ್ಕುವುದಿಲ್ಲ.
4. ಅತೀ ಪ್ರಭುತ್ವ ದಕ್ಕುತ್ತದೆ.

14. ಇ–ಕಲಿಕೆಯು (ಇ–ಲರ್ನಿಂಗ್)

1. ದೂರ ಶಿಕ್ಷಣದ ಒಂದು ಬಗೆ
2. ಸಾಕ್ಷ್ಯ ಚಿತ್ರೀಕರಣ
3. ತಾಂತ್ರಿಕತೆಯ ಸಹಾಯದೊಂದಿಗೆ ಕಲಿಯುವುದರ ಸಮ್ಮಿಶ್ರ ವಿಧಾನ
4. ಯಾಂತ್ರಿಕ ಸಲಕರಣೆಗಳ ಸಮ್ಮಿಲನ.

15. ದ್ವಿಭಾಷಿಕ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಕಲಿಯುತ್ತಿರುವ ಭಾಷೆಯಲ್ಲಿ ಬರಹ ಮತ್ತು ಆಡು ಮಾತಿನ ವ್ಯತ್ಯಾಸವನ್ನರಿಯಲು

1. ಕಲಿಯುತ್ತಿರುವ ಭಾಷೆಯಲ್ಲಿ ಹೆಚ್ಚಿನ ಪುಸ್ತಕಗಳನ್ನು ಓದಲು ಪ್ರೋತ್ಸಾಹಿಸಬೇಕು.
2. ಇಂಗ್ಲಿಷ್ ಭಾಷೆಯಲ್ಲಿ ಬರೆಯಲು ಹೇಳಬೇಕು.
3. ಕಲಿಯುತ್ತಿರುವ ಭಾಷೆಯ ದ್ವಿಭಾಷಿಕ ಚಲನಚಿತ್ರಗಳನ್ನು ನೋಡಲು ಹೇಳಬೇಕು.
4. ಕಲಿಯುತ್ತಿರುವ ಭಾಷೆಯಲ್ಲಿ ಮಾತನಾಡಲು ಹೇಳಬೇಕು.

16. ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳ ಕಲಿಕಾ ಮಟ್ಟಕ್ಕಿಂತ ಹಿಂದೆ ಬಿದ್ದಾಗ ಅಂತಹ ವಿದ್ಯಾರ್ಥಿಗಳಿಗೆಂದು ಕೊಡುವ ಬೋಧಕ ವಿಧಾನದ ಹೆಸರು –

1. ಸಾರಾಂಶ ಬೋಧನೆ
2. ಮರು ಬೋಧನೆ
3. ಪರಿಹಾರಾತ್ಮಕ ಬೋಧನೆ ಅಥವಾ ರೆಮೆಡಿಯೇಶನ್ ಟೀಚಿಂಗ್

4. ಪರಿಷ್ಕರಣ ಬೋಧನೆ

17. ಸಮ್ಮಿಶ್ರ ಸಾಮರ್ಥ್ಯದ ವಿದ್ಯಾರ್ಥಿಗಳಿರುವ ತರಗತಿಗೆ ಅಗತ್ಯವಿರುವ ಸೂಕ್ತ ಪಠ್ಯಕ್ರಮ ಯಾವುದು?

1. ಅವರದೇ ತರಹದ ಸಹ ವಿದ್ಯಾರ್ಥಿಗಳಿಗೆ ಜೊತೆಮಾಡಿ ಕೊಡುವುದು
2. ವಿಭಿನ್ನ ಮಟ್ಟದ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳೊಂದಿಗೆ ಪರಸ್ಪರ ವಿಚಾರ ವಿನಿಮಯಕ್ಕೆ ಒತ್ತು ಕೊಟ್ಟು ಪ್ರೋತ್ಸಾಹಿಸುವುದು
3. ಗಣಿತ ಮತ್ತು ಭಾಷೆಗೆ ಹೆಚ್ಚು ಮಹತ್ವ ಕೊಡುವುದು
4. ಕ್ರೀಡೆ ಮತ್ತು ಭಾಷೆಗೆ ಹೆಚ್ಚು ಒತ್ತು ಕೊಡುವುದು.

18. ಇಲ್ಲಿರುವ ತಪ್ಪು ಪರಿಕಲ್ಪನೆಯನ್ನು ಗುರುತಿಸಿ :
ಇಂಗ್ಲಿಷ್ ಕಲಿಯಲೆಂದು ನಿರ್ಮಿತವಾದ ಪಠ್ಯ ಪುಸ್ತಕಗಳು

1. ಬೋಧಕರಿಗೆ ಭಾಷಾ ಬೋಧನೆಯ ವಿಧಾನಗಳನ್ನು ಮತ್ತು ಕ್ರಮಗಳನ್ನು ಮನದಟ್ಟು ಮಾಡಿಕೊಡುವಂತಿರಬೇಕು.
2. ಕಲಿಯಬೇಕಾದ ವಿಷಯಗಳ ಸಮತೋಲನಾಯುಕ್ತ ಮಾಹಿತಿಗಳನ್ನು ನೀಡಬೇಕು.
3. ಭಾಷಾ ಕಲಿಕೆಯ ಅನುಭವದ ಆಧಾರದ ಮೇಲೆ ಕ್ರಮಗೊಳಿಸಿದ ಪಠ್ಯಗಳಾಗಿರಬೇಕು.
4. ಬೋಧಕರ ಅನುಕೂಲಕ್ಕೆ ವಿವರವಾದ ಪಠ್ಯ ಯೋಜನೆಯಾಗಿರಬೇಕು.

19. ಭಾಷಾ ಕಲಿಕೆಯಲ್ಲಿ ಕೆಲ ವಿಧವಾದ ದೋಷಗಳು ಅದರಲ್ಲೂ ವ್ಯಾಕರಣ ದೋಷಗಳು ಸಹಜವಾಗಿ ಬರುತ್ತವೆ. ಆಗ ಬೋಧಕರು

1. ವಿದ್ಯಾರ್ಥಿಗಳು ತಪ್ಪು ಮಾಡಿದಾಗ ಅವರು ಓದುತ್ತಿರುವುದನ್ನು/ಮಾತನಾಡುತ್ತಿರುವುದನ್ನು ಅರ್ಧದಲ್ಲಿ ನಿಲ್ಲಿಸಿ ಅವರ ತಪ್ಪನ್ನು ತಿದ್ದಬೇಕು.
2. ವಿದ್ಯಾರ್ಥಿಗಳು ಓದುತ್ತಿರುವುದನ್ನು/ಮಾತನಾಡುತ್ತಿರುವುದನ್ನು ಪೂರ್ತಿಗೊಳಿಸಿದ ಮೇಲೆ ಆದ ದೋಷವನ್ನು ಗಮನಕ್ಕೆ ತಂದು ಸರಿಯಾದ ರೂಪವನ್ನು ತಿಳಿಸಿ ತಿದ್ದಬೇಕು.
3. ತಪ್ಪು ಮಾಡುವುದು ಸಹಜವೆಂದು ಹಾಗೆಯೇ ಬಿಡಬೇಕು.
4. ಅಂತಹ ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರತ್ಯೇಕಿಸಿ ಅವರಿಗೆ ಪ್ರತ್ಯೇಕ ಪಾಠ ಹೇಳಬೇಕು.

20. ಮಾತೃ ಭಾಷೆಯಲ್ಲದ ಅನ್ಯ ಭಾಷೆಯನ್ನು ಬೋಧಿಸುವಾಗ ಬೋಧಕರು ಬಹು ಬಾರಿ ತರಗತಿಯ ತುಂಬಾ ಆಸಕ್ತಿಯಿಲ್ಲದ ಇಚ್ಛೆ ಇಲ್ಲದ ವಿದ್ಯಾರ್ಥಿಗಳನ್ನು ಎದುರುಗೊಳ್ಳಬೇಕಾಗುತ್ತದೆ. ಆಗ

1. ಶೈಕ್ಷಣಿಕ ಪರಿಣಿತರನ್ನು ಕರೆಸಿಕೊಳ್ಳಬೇಕು.
2. ಆಸಕ್ತಿರಹಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪಾಠ ಹೇಳಬೇಕು.
3. ವಿದ್ಯಾರ್ಥಿಗಳಿಗೆ ಅವರಿಗೆ ಕೊಟ್ಟ ಚಟುವಟಿಕೆಗಳನ್ನು ಪೂರೈಸಲು ಹೆಚ್ಚು ಸಮಯ ಕೊಡಬೇಕು.
4. ವಿದ್ಯಾರ್ಥಿಗಳಿಗೆ ಆಸಕ್ತಿ ಹುಟ್ಟಿಸುವಂಥ ಕಲಿಕಾ ವಿಧಾನಗಳನ್ನು ಬಳಸಿ ಕಲಿಕೆಯನ್ನು ಪರಿಣಾಮಕಾರಿಗೊಳಿಸಬೇಕು.

21. ಭಾಷಾ ಕಲಿಕೆಯ ವಿದ್ಯಾರ್ಥಿಗಳು ಸಕ್ರಿಯ ಅಭ್ಯಾಸ ವಿಧಾನದಲ್ಲಿ ಕಲಿಯಬೇಕು. ಈ ಹೇಳಿಕೆಗೆ ಪೂರಕವಾದ ಚಟುವಟಿಕೆ ಯಾವುದು?

1. ಕಲಿಯಬೇಕಾದ ಭಾಷೆಯ ಪಠ್ಯವನ್ನು ಅರ್ಥ ಮಾಡಿಸಲು ಮಾತೃಭಾಷೆಯ ಬಳಕೆಯನ್ನು ಪ್ರೋತ್ಸಾಹಿಸುವುದು.
2. ಅಮೂರ್ತತೆಯಿಂದ ಮೂರ್ತತೆಯತ್ತ ಸಾಗುವುದು.
3. ಬೋಧಕರ ಬರಹ ಮತ್ತು ಮಾತನಾಡುವ ವಿಧವನ್ನು ಅನುಕರಿಸುವುದು.
4. ಅಭ್ಯಸಿಸಲು ಹೆಚ್ಚು ಅವಕಾಶ ನೀಡುವುದು ಮತ್ತು ಅದರ ಮೂಲಕ ಬಳಕೆಯ ಅಭಿರುಚಿಯನ್ನು ಬೆಳೆಸುವುದು.

ಸೂಚನೆ :

ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆಯ್ದು ಬರೆಯಿರಿ :

ಮಹಾತ್ಮಾ ಗಾಂಧೀಜಿ ಅವರ ತತ್ವ ಮತ್ತು ಕಾರ್ಯಕ್ರಮಗಳ ತಳಹದಿಯ ಮೇಲೆ ಭಾರತ ಸೇವಾ ದಳ ರೂಪುಗೊಂಡಿತು. ತರುಣರಲ್ಲಿ ರಾಷ್ಟ್ರೀಯ ಜಾಗೃತಿಗೆ ಅವಶ್ಯಕವಾದ ದೇಶ ಭಕ್ತಿ, ದೃಢ ನಿರ್ಧಾರ, ಕಷ್ಟ ಸಹಿಷ್ಣುತೆ, ಸೇವಾ ಮನೋಭಾವ, ಸಂಯಮ, ಆತ್ಮ ವಿಶ್ವಾಸ, ತ್ಯಾಗ, ದೈಹಿಕ ಬಲ ಸಂವರ್ಧನೆಯ ಮನೋಭಾವವನ್ನು ಮೂಡಿಸುವುದೇ ಸೇವಾದಳದ ಮುಖ್ಯ ಉದ್ದೇಶವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಸೇವಾ ದಳದಲ್ಲಿ ಶಿಸ್ತೇ ಸರ್ವಸ್ವ. ಜವಾಹರಲಾಲ್ ನೆಹರೂ ಈ ಮಹಾನ್ ಸಂಸ್ಥೆಯ ಆರಂಭಿಕ ಅಧ್ಯಕ್ಷರು. ಕ್ರಿಯಾಶೀಲ ಸಮಾಜದ ಕನಸುಗಾರ ನಾ ಸು ಹರ್ಡೀಕರ್ ಅದರ ಕಾರ್ಯದರ್ಶಿ.

ಸೇವಾದಳ ಸೇರಬಯಸುವ ಯುವ ಪೀಳಿಗೆಗೆ ತರಬೇತಿ ನೀಡಲು ಬಾಗಲಕೋಟೆಯಲ್ಲಿ ತರಬೇತಿ ಕೇಂದ್ರವನ್ನು ತೆರೆದರು. ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುವುದು ಮಾತ್ರವಲ್ಲದೇ ನೆರೆ ಹಾವಳಿ, ರೋಗರುಜಿನುಗಳ ಸಂಕಷ್ಟದಲ್ಲಿರುವವರ ಸಹಾಯಕ್ಕೂ ಸೇವಾದಳ ಸಿದ್ಧವಾಗಬೇಕೆಂದರು. ಇದು ದೇಶದ ಅಗತ್ಯತೆಗೆ ಮಿಡಿಯುವ ಸ್ವಯಂಸೇವಕ ದಳವಾಗಬೇಕೆಂದು ನಿರ್ಧರಿಸಿ 'ಸೇವಾ ದಳ' ಎಂದು ಹೆಸರಿಸಿದರು. ಸಮಾಜ ಸೇವೆಯೇ ಸೇವಾ ದಳದ ಪರಮ ಗುರಿ.

ಮಹಾತ್ಮಾ ಗಾಂಧೀಜಿಯವರು 1924ರ ಬೆಳಗಾವಿಯ ಐತಿಹಾಸಿಕ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು. ಲಕ್ಷಾಂತರ ಜನ ನೆರೆದಿದ್ದರು. ಆ ಸಂದರ್ಭದಲ್ಲಿ ಸೇವಾ ದಳ ಮಾಡಿದ ಸೇವೆ ಗಣನೀಯವಾದುದು. ಸ್ವಯಂ ಸೇವಕರ ವರ್ತನೆ, ಶಿಸ್ತು, ಸಂಯಮ, ಸೇವಾವೃತ್ತಿ ಜನಸಾಮಾನ್ಯರ ಹಾಗೂ ಗಾಂಧೀಜಿಯವರ ಮೆಚ್ಚುಗೆಗೆ ಪಾತ್ರವಾದವು.

ಸೇವಾ ದಳ ಜನಸಾಮಾನ್ಯರ ಪ್ರತ್ಯೇಕಕ ಸಂಸ್ಥೆಯಾಯಿತು. ಅದರ ಧ್ಯೇಯೋದ್ದೇಶಗಳನ್ನು ವಿವರಿಸುವ ಮತ್ತು ಸಂಘಟನೆಯನ್ನು ಬಲಪಡಿಸುವ ಸಲುವಾಗಿ 'ವಾಲೆಂಟರ್' ಪತ್ರಿಕೆಯನ್ನು ಹರ್ಡೀಕರ್ ಆರಂಭಿಸಿದರು. 1950ರಲ್ಲಿ ಹಿಂದೂಸ್ಥಾನೀ ಸೇವಾ ದಳ 'ಭಾರತ್ ಸೇವಾ ದಳ' ಎಂಬ ಮುನರ್‌ನಾಮಕರಣದೊಂದಿಗೆ ಪ್ರಬಲ ಸಂಸ್ಥೆಯಾಗಿ ದೇಶದಲ್ಲೆಲ್ಲಾ ಪಸರಿಸಿತು. ಲಕ್ಷಾಂತರ ಯುವಕರು ಶಿಸ್ತಿನ ಸಿಪಾಯಿಗಳಾಗಿ ತರಬೇತಿ ಪಡೆದರು.

ಸೇವಾ ದಳ ನೇರವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿತು. ಪರದೇಶಿ ವಸ್ತುಗಳ ಬಹಿಷ್ಕಾರ, ಕರ ನಿರಾಕರಣೆ, ಸ್ವದೇಶಿ ಆಂದೋಲನ, ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳವಳಿಯಲ್ಲಿ ಸೇವಾದಲ ಪಡೆ ಭಾಗವಹಿಸಿತು. ಲಕ್ಷಾಂತರ ಯುವಕರು ಆಕರ್ಷಿತರಾದರಲ್ಲದೇ ಭಾರತ ಸೇವಾದಳ ಸೇರಿದರು. ದೇಶದ ದಾಸ್ಯ ವಿಮೋಚನೆಗಾಗಿ ಹೋರಾಟ ನಡೆಸಿದರು. ಸೇವಾ ದಳದ ಇತಿಹಾಸದಲ್ಲಿ ಇದು ಚಿರಸ್ಮರಣೀಯ. ಗಾಂಧೀ ತತ್ವಗಳಿಂದ ವಿಚಲಿತವಾಗದೇ, 'ಅಹಿಂಸಾ ಪರಮೋಧರ್ಮ' ವನ್ನು

ಪಾಲಿಸಿತು. ಕಷ್ಟ ನಿಷ್ಠುರಗಳನ್ನು ಸಹಿಸಿತು. ಧ್ಯೇಯ ನಿಷ್ಠೆಗಳನ್ನು ಮೆರೆಯಿಸಿತು.

ಸೇವಾ ದಳದ ಜನಪ್ರಿಯತೆ ಹೆಚ್ಚಿದಂತೆಲ್ಲ ಬ್ರಿಟಿಷ್ ಸರ್ಕಾರ ಭಯಗೊಂಡಿತು. ಸೇವಾ ದಳ ಸಂಸ್ಥೆಯನ್ನು ಬಹಿಷ್ಕರಿಸಿತು. ದೇಶದ್ರೋಹದ ಆಪಾದನೆ ಮೇಲೆ ಹರ್ಡೀಕರ್‌ರನ್ನು ಬಂಧಿಸಿತು. ಹೀಗೆ ಭಾರತ ಸೇವಾ ದಳದ ಚರಿತ್ರೆ ರೋಚಕವಾಗಿದೆ.

22. ಸೇವಾ ದಳ ಸಂಘಟನೆಯನ್ನು ಬಲಪಡಿಸಲು ಹರ್ಡೀಕರ್ ಏನನ್ನು ಆರಂಭಿಸಿದರು?

1. ಸತ್ಯಾಗ್ರಹ 2. ಆಂದೋಲನ
3. ಕಾರ್ಯಕ್ರಮ 4. ಪತ್ರಿಕೆ

23. ಸೇವಾ ದಳದ ಸರ್ವಸ್ವ ಯಾವುದು?

1. ನಿಷ್ಠೆ 2. ಶಿಸ್ತು
3. ಸಂಯಮ 4. ಧ್ಯೇಯ

24. ಭಾರತ ಸೇವಾ ದಳ ಯಾರ ತತ್ವ ಮತ್ತು ಕಾರ್ಯಕ್ರಮಗಳ ತಳಹದಿಯ ಮೇಲೆ ರೂಪುಗೊಂಡಿತು?

1. ಮಹಾತ್ಮಾ ಗಾಂಧೀಜಿ 2. ಕಾಂಗ್ರೆಸ್
3. ಜವಾಹರಲಾಲ್ ನೆಹರೂ 4. ಹರ್ಡೀಕರ್

25. ಸೇವಾ ದಳ ಸಂಘಟನೆಯನ್ನು ಬಲಪಡಿಸಲು ಹರ್ಡೀಕರ್ ಆರಂಭಿಸಿದ ಪತ್ರಿಕೆಯ ಹೆಸರು?

1. ಸೇವಾ ದಲ 2. ವಾಲೆಂಟರ್
3. ಚಾಲೇಂಜರ್ 4. ಹಿಂದೂಸ್ಥಾನಿ

26. ಸೇವಾ ದಳದ ಪರಮ ಗುರಿ ಏನು?

1. ಸಮಾಜ ಸೇವೆ
2. ಆಂಗ್ಲರ ವಿರುದ್ಧ ಹೋರಾಟ
3. ಚಳವಳಿ
4. ಪತ್ರಿಕೆ ಪ್ರಕಟಣೆ

27. ಹಿಂದೂಸ್ಥಾನೀ ಸೇವಾ ದಳ 'ಭಾರತ ಸೇವಾ ದಳ' ಎಂದು ಹೆಸರು ಬದಲಾಯಿಸಿದ ವರ್ಷ ಯಾವುದು?

1. 1947 2. 1950
3. 1954 4. 1962

28. 1924ರಲ್ಲಿ ಐತಿಹಾಸಿಕ ಮಕಾಂಗ್ರೆಸ್ ಅಧಿವೇಶನ ನಡೆದ ಸ್ಥಳ ಯಾವುದು?

1. ರಾಯಚೂರು 2. ಬಿಜಾಪುರ
3. ಮೈಸೂರು 4. ಬೆಳಗಾವಿ

29. ಸೇವಾ ದಳವನ್ನು ಬಹಿಷ್ಕರಿಸಿದ ಸರ್ಕಾರ –

1. ಇಂದಿರಾ ಕಾಂಗ್ರೆಸ್ 2. ನೆಹರೂ ಕಾಂಗ್ರೆಸ್
3. ಬ್ರಿಟಿಷ್ 4. ಈ ಯಾವುದೂ ಅಲ್ಲ

30. ಸೇವಾ ದಳದ ಮೊದಲ ಅಧ್ಯಕ್ಷರು ಯಾರು?

1. ಜವಾಹರಲಾಲ್ ನೆಹರೂ 2. ಮಹಾತ್ಮಾ ಗಾಂಧಿ
3. ನಾ ಸು ಹರ್ಡೀಕರ್ 4. ವಲ್ಲಭ್‌ಭಾಯಿ ಪಟೇಲ್

ಉತ್ತರಗಳು

1-(1)	2-(3)	3-(1)	4-(1)	5-(3)
6-(1)	7-(1)	8-(3)	9-(1)	10-(1)
11-(4)	12-(4)	13-(2)	14-(1)	15-(1)
16-(3)	17-(2)	18-(4)	19-(2)	20-(4)
21-(2)	22-(4)	23-(2)	24-(1)	25-(2)
26-(1)	27-(2)	28-(4)	29-(3)	30-(1)

ಭಾಗ 3
ಭಾಷೆ – 2
ಇಂಗ್ಲಿಷ್

1. ಈ ಪ್ರಶ್ನೆ ಪತ್ರಿಕೆಯು 30 ಬಹು ಆಂಶ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.

Answer the following questions by choosing one of the alternatives given.

1. Prameela reaches school .... time.(exactly at 10 am.)

a. in b. on
c. at d. within

Answer:

b. on

2. Rakesh .... for two hours daily.

a. reads b. has read
c. read d. red

Answer:

a. reads (Siple Present Tense)

Explanation :

Simple present tense's main use is to express habitual actions : Sun rises. Dog barks.

3. When I reached the railway station the train ....

a. leaves b. has left
c. had left d. is leaving

Answer:

c. had left.

Explanation :

Present perfect tense (here - b. **has** left') is used for the action started in the past and continues in the present time of speaking.

But the Past Perfect tense (here - c. **had** left) is used for an action which began before the time of speaking in the past, and was still continuing at that time or stopped at that time or just before it.

4. If you had studied well............

a. you would pass

b. you will pass

c. you would have passed

d. you could pass

Answer:

c. you would have passed

5. Choose the sentence with appropriate punctuation marks.

a. He said, "I would like some sugar in my coffee."

b. He said, "i would like some sugar in my coffee".

c. He said, "I would like some sugar in my coffee".

d. He said, "I would like some sugar in my coffee."

Answer:

d. He said, "I would like some sugar in my coffee."

6. The team has worked .... for this success.

a. hardly b. hard

c. little d. hardest

Answer:

b. hard

7. Identify the correct expression from the following:

a. You like music, isn't it?

b. You like music, doesn't you?

c. You like music, don't you?

d. You like music, aren't you?

Answer:

c. You like music, don't you?

Explanation :

Question Tags : These are short questions to sentences, asking for confirmation.

*After negative statements we use the ordinary interrogative :

Example : You didn't like the music, **did you**?

* After the affirmative statements we use the negative interrogative.

Example : You like music, ***don't you***?

* Question tag should agree with the main clause :

Examples :

It's cold, ***isn't it?***

It's not cold, is it?

You ***didn't*** speak to her, ***did you***?

Priya (She) ***was*** there, ***wasn't*** she?

Rahul (He) ***doesn't*** smoke, ***does he***?

Sonia (She) ***lives*** here, ***doesn't*** she?

Note : The question tag for *I am* is - Aren't I?

Ex : I'm late, ***aren't I?***

Read the following passage and choose the correct answers :

A student-centred classroom isnt a place where the students decide what they want to learn and what they want to do. Its a place where we consider the needs of the students, as a group and as individuals, and encourage them to participate in the learning process all the time. The teachers role is more that of a facilitator than instructor; the students are active participants in the learning process. The teacher(and the textbook) help to guide the students, manage their activities, and direct their learning. Being a teacher means helping people to learn – and, in a student-centred class, the teacher is a member of the class as a participant in the learning process.

(From The Student-Centered Classroom by Leo Jones, CUP, 2007)

8. According to the writer who takes decisions in a studentcentred classroom?

a. students b. facilitators

c. both d. parents

Answer:

b. facilitators

9. Who is a facilitator?

a. the teacher in the classroom

b. the instructor

c. the one who encourages students to be active learners

d. the one who gives strict instructions to children and

ensures that learning takes place

Answer : c. the one who encourages students to be active learners

10. In a student centred classroom the teacher is also a learner.

a. True

b. False

c. Not clear in the above passage

d. Only a participant

Answer:

a. True

11. Which of the following would be true of a student-centred classroom according to the writer?

a. The teacher gives notes and dictates answers to questions

b. The teacher explains so clearly that students do not have questions at all

c. The teacher encourages students to engage in independent learning

d. The students have a lot of liberty in the classroom.

Answer:

c. The teacher encourages students to engage in independent learning

12. Which is the correct sentence?

a. The two singers from Northern India could not sing in the local language because of which the audience grew restless.

b. The two singers from Northern India could sing in the local language because of which the audience grew restless.

c. The two singers from Northern India could not sing in the local language because the audience grew restless.

d. The two singers from Northern India could sing in the local language because the audience grew restless.

Answer:

a. The two singers from Northern India could not sing in the local language because of which the audience grew restless.

13. Read the following paragraph. Among the choices given, there is one sentence that summarises all that the paragraph says. Identify that sentence.

I took a bus to the theatre. When I reached the theatre, I thought I wont get a ticket. There was a very big queue. I stood in the queue. There were just 20 minutes for the show to commence. The queue was not moving at all. 15 minutes passed by. In between a few people started quarrelling with the guard too. Then came another guard. He announced, "If any one wants tickets, please go to the counter directly. There are plenty available. No one moved. Then I stepped out of the queue. He was right! There was no queue near the ticket counter! The queue was for Adhar Card registration in an office nearby!!

a. I waited for 15 minutes and then got the tickets without any problem because the guard offered me tickets.

b. I stood in a wrong queue and waited for about 15 minutes before realising that it was a wrong queue.

c. I realised that I was in a wrong queue after waiting for 15 minutes, and found that there was no queue at all for the tickets.

d. I realised at the end that I was in a wrong queue just before the movie began and then got the tickets.

Answer: c. I realised that I was in a wrong queue after waiting for 15 minutes, and found that there was no queue at all for the tickets.

14. Identify the appropriate response.

Akash (To Arun) : Arun, this is Nagashree.

Arun: How do you do Ms Nagashree?

Nagashree: ....?

a. Hello, Arun, how are you?

b. How are you, Mr Arun?

c. Nice meeting you, Mr Arun.

d. How do you do, Mr Arun?

Answer:

d. How do you do, Mr Arun?

15. The short form of 'will not' is ....

a. willn't b. won't

c. wont d. 'lln't

Answer:

b. won't

16. The young one of an elephant is called a

a. kid b. calf

c. cow elephant d. juvenile

Answer:

b. calf

17. A teetotaller is a person who

a. always drinks only tea

b. never drinks tea

c. never drinks anything but water

d. abstains completely from alcoholic beverages

Answer:

d. abstains completely from alcoholic beverages

18. You are expected to .... to the rules of the school.

a. confirm b. confrom

c. conform d. come from

Answer:

c. conform

19. The present trend in methods of teaching is to

a. give extensive notes to students to prepare them for examinations

b. practise activity based teaching to promote experiential learning

c. follow what the top officers in the department suggest

d. allow student free to learn whatever they want to learn

Answer : b. practise activity based teaching to promote experiential learning

20. Which of the following is very important for reading aloud?

a. pronunciation

b. giving appropriate pauses

c. use of falling tone at the end of every sentence

d. reading speed

Answer : b. giving appropriate pauses

21. Which of the following is very important for developing writing skills among young learners?

a. good handwriting

b. good sense of spelling

c. good feedback by the teacher

d. fluency in writing

Answer: c. good feedback by the teacher

22. A major hurdle in developing English speaking skills among learners in our society is that

a. the teachers do not know to speak in English

b. there is no scope for using English in the immediate surrounding

c. students prefer learning in their mother tongue

d. parents do not know to speak in English

Answer : b. there is no scope for using English in the immediate surrounding

23. Listening to instructions regularly develops listening skills.

a. False b. True

c. 20% true d. 80% true

Answer : c. 20% true

24. Diagnostic tests are

a. the same as achievement tests administered at the beginning of a course

b. meant for identifying learning problems in a classroom

c. meant for identifying the specific learning problems of each child

d. given only once in the beginning

Answer : c. meant for identifying the specific learning problems of each child.

25. A technique recently suggested for the professional development of teachers is

a. Chaitanya method b. Action research

c. Research d. Training programmes

Answer:

b. Action research

26. Which type of grammar do we need to teach in the classroom?

a. formal grammar b. informal grammar

c. functional grammar d. prescriptive grammar

Answer:

c. functional grammar

27. What is the most important component of an evaluation process?

a. Written tests b. Marks

c. Grades d. Feedback to learners

Answer:

d. Feedback to learners

28. The purpose of feedback is

a. to bring to the notice of the learners all the mistakes they have made
b. to appraise them of their strengths and weaknesses
c. to ensure that they do well in the next test
d. find out their ranking in the class

Answer:

b. to appraise them of their strengths and weaknesses

29. The four step Chaitanya methodology is recommended

a. for classes 1-4　　b. for classes 6-8
c. up to class 3　　d. for classes 4-5

Answer:

b. for classes 6-8

30. From the following lists, identify the group with resources that are likely to be available through out the state

a. television, radio, computer, newspaper
b. computer, internet, radio, television
c. television, radio, newspaper, DVD players
d. television, radio, language laboratory, newspapers

Answer :

c. television, radio, newspaper, DVD players.

ಭಾಗ 4
ಗಣಿತ

1. ಈ ಪ್ರಶ್ನೆ ಪತ್ರಿಕೆಯು 30 ಬಹು ಅಂಶ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.

1. ಕೆಳಗಿನವುಗಳಲ್ಲಿ ಯಾವ ಪ್ರಶ್ನೆ ಮುಕ್ತ ತುದಿ (ಓಪನ್ ಎಂಡೆಡ್) ಪ್ರಶ್ನೆಯಾಗಿದೆ?

1. 2/7ಕ್ಕಿಂತ 7 ಹೆಚ್ಚು ಯಾವುದು?
2. ಈ ಸಂಖ್ಯೆಗಳನ್ನು ಆರೋಹಣ ಕ್ರಮದಲ್ಲಿ ಬರೆಯಿರಿ 25,71, 19, 9, 8, 17, 85.
3. 1/3 ಅಥವಾ 7/5 ಇವುಗಳಲ್ಲಿ ಯಾವುದು ದೊಡ್ಡದು?
4. 2.7ಕ್ಕಿಂತ ದೊಡ್ಡದಾದ ಯಾವುದಾದರೂ ನಾಲ್ಕು ಸಂಖ್ಯೆಗಳನ್ನು ಬರೆಯಿರಿ.

2. ಎರಡನೇ ತರಗತಿಯ ವಿದ್ಯಾರ್ಥಿಗಳಿಗೆ ಸಮತಲಾಕೃತಿಗಳು ಅವುಗಳ ಶೃಂಗ ಹಾಗೂ ತುದಿಗಳನ್ನು ಪ್ರದರ್ಶಿಸುವ ಅತ್ಯಂತ ಪರಿಣಾಮಕಾರಿ ಸಾಧನ ಕೆಳಗಿನವುಗಳಲ್ಲಿ ಯಾವುದು?

1. ಕಪ್ಪು ಹಲಗೆಯ ಮೇಲ್ಮೈ　　2. ಜಿಯೋ ಬೋರ್ಡ್
3. 3–ಡಿ ಘನಾಕೃತಿಗಳ ಜಾಲ　　4. ಘನಗಳು

3. ಐದನೇ ತರಗತಿಯ ಪಠ್ಯ ಪುಸ್ತಕವೊಂದರಲ್ಲಿರುವ ಸಮಸ್ಯೆ ಹೀಗಿದೆ – 'ಕ್ರಮವಾಗಿ 105 ಸೆಂ.ಮೀ, 215 ಸೆಂ.ಮೀ, 150 ಸೆಂ.ಮೀ ಹಾಗೂ 235 ಸೆಂ.ಮೀ ಉದ್ದಗಳ ನಾಲ್ಕು ಕಂಬಗಳಿವೆ. ಒಂದು ವೇಳೆ ಅವುಗಳನ್ನು ನಾಲ್ಕು ಸಮಾನ ಉದ್ದದ ಕಂಬಗಳಾಗಿ ಕತ್ತರಿಸಿದರೆ, ಕಂಬದ ಗರಿಷ್ಠ ಉದ್ದ ಎಷ್ಟಾಗುವುದು?' ಈ ಪ್ರಶ್ನೆಯನ್ನು ಕೇಳಲಾಗಿರುವ ಉದ್ದೇಶ –

1. ಮ.ಸಾ.ಅ ಹಾಗೂ ಲ.ಸಾ.ಅಗಳನ್ನಾಧರಿಸಿದ ಬರಹ ರೂಪದ ಗಣಿತ ಸಮಸ್ಯೆಗಳ ಅಭ್ಯಾಸಕ್ಕಾಗಿ
2. ಅಪವರ್ತನ ಹಾಗು ಗುಣಕಗಳ ಕುರಿತ ಜ್ಞಾನವನ್ನು ಪರೀಕ್ಷಿಸಲು
3. ಮ.ಸಾ.ಅ ಕಂಡುಹಿಡಿಯುವ ಜಾಣ್ಮೆಯನ್ನು ಪರೀಕ್ಷಿಸಲು
4. ಕಲಿತ ಪರಿಕಲ್ಪನೆಗಳನ್ನು ಬಳಸಿ ಗಣಿತ ಸಮಸ್ಯೆಗಳನ್ನು ಬಿಡಿಸುವ ಕೌಶಲ್ಯವನ್ನು ವೃದ್ಧಿಸಲು.

4. ಮೂರನೇ ತರಗತಿಯ ಪಠ್ಯ ಪುಸ್ತಕವೊಂದರಲ್ಲಿರುವ ಸಮಸ್ಯೆ ಹೀಗಿದೆ – 'ಕೆಳಗಿನ ಸಮಸ್ಯೆಯನ್ನು ಬಿಡಿಸಲು ಯಾವ ಗಣಿತೀಯ ಕ್ರಿಯೆಯನ್ನು ಬಳಸುತ್ತೀರಿ – ಒಬ್ಬ ಹಾಲು ಮಾರುವವ 10 ದಿನಗಳಲ್ಲಿ 1410 ಲೀ ಹಾಲನ್ನು ಮಾರುತ್ತಾನೆ. ಒಂದು ದಿನದಲ್ಲಿ ಆತ ಎಷ್ಟು ಹಾಲು ಮಾರುತ್ತಾನೆ?' ಮೇಲಿನ ಪ್ರಶ್ನೆಯಲ್ಲಿ ಬ್ಲೂಮ್‌ನ ಗ್ರಹಣಾ ಕ್ಷೇತ್ರದ ಯಾವ ಸಾಮರ್ಥ್ಯವನ್ನು ಬಳಸಲಾಗಿದೆ?

1. ಸಿಂಥೆಸಿಸ್　　2. ನಾಲೆಡ್ಜ್
3. ಕಾಂಪ್ರಿಹೆನ್ಷನ್　　4. ಅನ್ಯಾಲಿಸಿಸ್

5. ರಷೀದ್‌ನು 5ನೇ ತರಗತಿಯಲ್ಲಿ ಓದುತ್ತಿದ್ದಾನೆ. ಆತ ವಿವಿಧ ವಿವಿಧ ತ್ರಿಭುಜಗಳನ್ನು ಸರಿಯಾಗಿ ವರ್ಗೀಕರಿಸಬಲ್ಲ. ಆದರೆ ತ್ರಿಭುಜವೊಂದರ ಮೂರೂ ಕೋನಗಳ ಮೊತ್ತ ಯಾಗಲೂ 180 ಡಿಗ್ರಿಯಾಗಿರುತ್ತದೆ ಎಂಬ ಸಿದ್ಧ ಪ್ರಮೇಯವನ್ನು ಅರ್ಥ ಮಾಡಿಕೊಳ್ಳುವಲ್ಲಿ ಆತ ಕಠಿಣತೆ ಹೊಂದಿದ್ದಾನೆ. ಪಿಯಾಜೆಯವರ ಸಿದ್ಧಾಂತದ ಪ್ರಕಾರ ರಷೀದನು ಈ ಹಂತದಲ್ಲಿದ್ದಾನೆ –

1. ಕ್ರಿಯಾಪೂರ್ವ ಹಂತ (ಪ್ರಿ ಆಪರೇಷನಲ್ ಸ್ಟೇಜ್)
2. ಮೂರ್ತ ಕ್ರಿಯಾತ್ಮಕ ಹಂತ (ಕಾಂಕ್ರೀಟ್ ಆಪರೇಷನಲ್ ಸ್ಟೇಜ್)
3. ಔಪಚಾರಿಕ ಕ್ರಿಯೆಗಳ ಹಂತ (ಫಾರ್ಮಲ್ ಆಪರೇಷನಲ್ ಸ್ಟೇಜ್)
4. ಸಂವೇದನಾ ಗತಿಯ ಹಂತ (ಸೆನ್ಸರಿಮೋಟಾರ್ ಸ್ಟೇಜ್)

6. 2005ರ ಎನ್‌ಸಿಎಫ್ ಪ್ರಕಾರ 'ಗಣಿತ ಶಿಕ್ಷಣದ ಮುಖ್ಯ ಗುರಿ ಮಕ್ಕಳಲ್ಲಿ ಗಣಿತೀಕರಣ ಸಾಮರ್ಥ್ಯವನ್ನು ಬೆಳೆಸುವುದಾಗಿದೆ. ಶಾಲಾ ಗಣಿತ ಶಿಕ್ಷಣದ ಸಂಕುಚಿತ ಗುರಿ ಮಕ್ಕಳಲ್ಲಿ ಉಪಯುಕ್ತ ಸಾಮರ್ಥ್ಯಗಳನ್ನು ಬೆಳೆಸುವುದಾಗಿದೆ.' ಇಲ್ಲಿ ಮಕ್ಕಳಲ್ಲಿ 'ಗಣಿತೀಕರಣ' ಸಾಮರ್ಥ್ಯವು –

1. ಮಕ್ಕಳು ಗಣಿತೀಯವಾಗಿ ತಾರ್ಕಿಕ ಶಕ್ತಿ ಸಂಪನ್ಮೂಲಗಳನ್ನು ಬೆಳೆಸಿಕೊಳ್ಳುವುದು ಮತ್ತು ಕಲ್ಪನೆಗಳನ್ನು ತಾರ್ಕಿಕ ನಿರ್ಧಾರಗಳಾಗಿ ರೂಪಿಸಿಕೊಳ್ಳುವುದನ್ನು ಹಾಗೂ ಅಮೂರ್ತತೆಯನ್ನು ನಿಭಾಯಿಸಿಕೊಳ್ಳುವುದನ್ನು ಬೆಳೆಸುತ್ತದೆ ಎಂದು ಅರ್ಥ.
2. ವರ್ಗಮೂಲ, ಘನಮೂಲ ಸೇರಿದಂತೆ ಸಂಖ್ಯೆಗಳ ಎಲ್ಲಾ ಕ್ರಿಯೆಗಳನ್ನು

ಸಮರ್ಥವಾಗಿ ಸಾಧಿಸುವುದನ್ನು ಬೆಳೆಸುತ್ತದೆ ಎಂದರ್ಥ.

3. ಜ್ಯಾಮಿತಿಯ ಸಿದ್ಧಾಂತಗಳನ್ನು ರೂಪಿಸುವುದು ಮತ್ತು ಅವುಗಳ ಸಾಧನೆಯನ್ನು ಸ್ವತಂತ್ರವಾಗಿ ನಿರೂಪಿಸುವ ಶಕ್ತಿಯನ್ನು ಬೆಳೆಸುತ್ತದೆ ಎಂದರ್ಥ.

4. ಬರಹ ರೂಪದಲ್ಲಿರುವ ಗಣಿತ ಸಮಸ್ಯೆಗಳನ್ನು ಏಕೀಕರಣ ಸಮೀಕರಣಗಳನ್ನಾಗಿ ರೂಪಾಂತರಿಸುವ ಶಕ್ತಿಯನ್ನು ಬೆಳೆಸುತ್ತದೆ ಎಂದು ಅರ್ಥ.

7. ಒಂದು ಉತ್ತಮ ಪಠ್ಯ ಪುಸ್ತಕದ ಮುಖ್ಯಾಂಶಗಳೆಂದರೆ, ಅದು –

1. ಕಠಿಣ ತಯಾರಿಗಾಗಿ ಬಹಳಷ್ಟು ಸಂಖ್ಯೆಯಲ್ಲಿ 'ಅಭ್ಯಾಸ ಪ್ರಶ್ನೆಗಳನ್ನು' ಹೊಂದಿರಬೇಕು.

2. ನೈಜ ಪರಿಸ್ಥಿತಿಗಳ ಉದಾಹರಣೆಗಳ ಮೂಲಕ ಎಲ್ಲ ಪರಿಕಲ್ಪನೆಗಳನ್ನು ಅದು ಪರಿಚಯಿಸಬೇಕು.

3. ಬಿಡಿಸಿದ ಉದಾಹರಣೆಗಳನ್ನು ಮಾತ್ರ ಹೊಂದಿರಬೇಕು.

4. ಅದು ದಪ್ಪವಾಗಿಯೂ, ಭಾರವಾಗಿಯೂ ಇರಬೇಕು.

ಮೇಲಿನ ಅಂಶಗಳಲ್ಲಿ :

1. 2 ಮತ್ತು 4 ಮಾತ್ರ ಸರಿ
2. 3 ಮತ್ತು 2 ಮಾತ್ರ ಸರಿ
3. 3 ಮತ್ತು 4 ಮಾತ್ರ ಸರಿ
4. 1 ಮತ್ತು 3 ಮಾತ್ರ ಸರಿ.

8. ಎನ್‌ಸಿಎಫ್ 2005 ಕೆಳಗಿನ ಯಾವ ಅಂಶಕ್ಕೆ ಒತ್ತು ಕೊಡುತ್ತದೆ?

1. ಆಯ್ದ ವಿದ್ಯಾರ್ಥಿಗಳಿಗೆ ಗಣಿತವನ್ನು ಬೋಧಿಸಬೇಕು.
2. ಪ್ರತೀ ಮಗುವೂ ಗಣಿತದಲ್ಲಿ ಯಶಸ್ಸು ಕಾಣಬೇಕಾದುದು ಕಡ್ಡಾಯ.
3. ವಿದ್ಯಾರ್ಥಿಗಳನ್ನು ಮೊದಲು ಅವರ ತಾರ್ಕಿಕ ಗಣಿತೀಯ ಸಾಮರ್ಥ್ಯ ಪರೀಕ್ಷೆಗೆ ಒಳಪಡಿಸಬೇಕು.
4. ಮಂದ ಸಾಧಕರಿಗೆ ಗಣಿತ ಪಠ್ಯ ಬೇರೆ ಆಗಿರಬೇಕು.

9. 5, 10 ಹಾಗೂ 35ರ ಅತಿ ಸಣ್ಣ ಸಾಮಾನ್ಯ ಅಪವರ್ತ್ಯ (ಲೋವೆಸ್ಟ್ ಕಾಮನ್ ಮಲ್ಟಿಪಲ್–ಲ.ಸಾ.ಅ) ಹಾಗೂ ಅತಿ ದೊಡ್ಡ ಸಾಮಾನ್ಯ ಅಪವರ್ತನಗಳ (ಹೈಯೆಸ್ಟ್ ಕಾಮನ್ ಫ್ಯಾಕ್ಟರ್–ಮ.ಸಾ.ಅ)ಮಧ್ಯೆ ಇರುವ ವ್ಯತ್ಯಾಸ –

1. 75 2. 30
3. 35 4. 65

10. 105ರ ಅಪವರ್ತನಗಳ (ಫ್ಯಾಕ್ಟರ್ಸ್) ಸಂಖ್ಯೆ –

1. 8 2. 3
3. 4 4. 5

11. ಈಗ ವೇಳೆ 2:17 ಪಿಎಮ್. ಹಾಗಿದ್ದರೆ ಈಗಿನಿಂದ 11 ಗಂಟೆ 59 ನಿಮಿಷಗಳ ನಂತರ ವೇಳೆ ಎಷ್ಟಾಗಿರುತ್ತದೆ?

1. 2:16 ಪಿಎಮ್ 2. 11:57 ಎಎಮ್
3. 9:59 ಎಎಮ್ 4. 2:16 ಎಎಮ್

12. ಮೂರೂವರೆ ಲಂಬಕೋನಗಳಲ್ಲಿರುವ ಕೋನಗಳ ಮೊತ್ತ –

1. 315^0 2. 285^0
3. 295^0 4. 305^0

13. 11 ಬಿಡಿ + 11 ಹತ್ತು + 11 ನೂರು ಗಳು = ?

1. 11111 2. 144
3. 1221 4. 12321

14. ಐದುನೂರಾ ಒಂಭತ್ತು ಹಾಗೂ ಮೂರು ಸಾವಿರದಾ ಇಪ್ಪತ್ತೆಂಟರ ಮೊತ್ತ ಎಷ್ಟು?

1. 387 2. 3537
3. 3087 4. 837

15. ಒಂದು ಚೌಕದ ಸುತ್ತಳತೆ 24 ಸೆಂ.ಮೀ ಹಾಗೂ ಒಂದು ಆಯತದ ಉದ್ದ 8 ಸೆಂ.ಮೀ. ಒಂದು ವೇಳೆ ಈ ಚೌಕ ಹಾಗೂ ಆಯತಗಳ ಸುತ್ತಳತೆಗಳು ಒಂದೇ ಆಗಿದ್ದರೆ, ಆಯತದ ವಿಸ್ತೀರ್ಣ ಎಷ್ಟು ಚದುರ ಸೆಂ.ಮೀ ?

1. 64 2. 16
3. 24 4. 32

16. ಸಂಖ್ಯೆ 12345ರಲ್ಲಿ 3ರ ಸ್ಥಾನ ಬೆಲೆ ಮತ್ತು ಮುಖ ಬೆಲೆಗಳಲ್ಲಿರುವ ವ್ಯತ್ಯಾಸ ಎಷ್ಟು?

1. 305 2. 0
3. 295 4. 297

17. ಕೆಳಗಿನವುಗಳಲ್ಲಿ ಯಾವುದು ತಪ್ಪು?

1. 0.10 ವು 0.1 ಇದ್ದಂತೆಯೇ.
2. 56.7 ಕೆ.ಜಿ = 5670 ಗ್ರಾಂ
3. ಒಂದು ಘನವು ಆರು ಮುಖಗಳನ್ನು ಹೊಂದಿರುತ್ತದೆ.
4. ಒಂದು ಮಿಲಿ ಮೀಟರ್ = 1 ಘನ ಸೆಂ.ಮೀ.

(98 - 2) ÷ 8 = 12

18. ನದಿಯೊಂದರಲ್ಲಿ ಒಂದು ದೋಣಿಯ ವೇಗ ಗಂಟೆಗೆ 20 ಕಿ.ಮೀ ಹಾಗೂ ಇನ್ನೊಂದು ದೋಣಿಯ ವೇಗ ಗಂಟೆಗೆ 23 ಕಿ.ಮೀ. ಎರಡೂ ದೋಣಿಗಳೂ ಒಂದೇ ಸ್ಥಳದಿಂದ, ಒಂದೇ ಸಮಯದಲ್ಲಿ, ಒಂದೇ ದಿಕ್ಕಿನೆಡೆ ಚಲಿಸುತ್ತವೆ. ಮೂರೂವರೆ ಗಂಟೆಗಳ ನಂತರ ಎರಡೂ ದೋಣಿಗಳ ಮಧ್ಯೆ ಇರುವ ದೂರ ಎಷ್ಟು?

(987 - 3) ÷ 8 = 123

(9876 - 4) ÷ 8 = 1234

1. 11.5 ಕಿಲೋ ಮೀಟರ್ 2. 10 ಕಿಲೋ ಮೀಟರ್
3. 10.5 ಕಿಲೋ ಮೀಟರ್ 4. 11 ಕಿಲೋ ಮೀಟರ್

(987654 - 6) ÷ 8

19. 90707 ಅನ್ನು 9ರಿಂದ ಭಾಗಿಸಿದಾಗ ಉಳಿಯುವ ಶೇಷ ಎಷ್ಟು?

1. 7 2. 3
3. 5 4. 6

20. ತಾಜಾ ಮೀನೊಂದು ಒಣಗಿದಾಗ ಅದರ ತೂಕ ಅದು ತಾಜಾ ಇದ್ದಾಗಿನ ತೂಕದ 1/3ರಷ್ಟಾಗುತ್ತದೆ. ಸುನಿತಾ 1500 ಕೆ.ಜಿ ತಾಜಾ ಮೀನುಗಳನ್ನು ಕೆ.ಜಿಗೆ 25 ರೂಗಳಂತೆ ಕೊಂಡುಕೊಂಡು, ಅವು ಒಣಗಿದ ನಂತರ ಕೆ.ಜಿಗೆ 80 ರೂಗಳಂತೆ ಮಾರುತ್ತಾಳೆ. ಹಾಗಿದ್ದರೆ ಆಕೆಯ ಗಳಿಕೆ ಎಷ್ಟು?

1. ರೂ 3,500/– 2. ರೂ 2,500/–
3. ರೂ 2,700/– 4. ರೂ 3000/–

21. ಒಂದು ಸೀಸೆಯಲ್ಲಿ 750 ಮಿ.ಲೀ ಹಣ್ಣಿನ ರಸ ತುಂಬಿ ಇಂಥ ಆರು ಸೀಸೆಗಳನ್ನು ಒಂದು ಪೆಟ್ಟಿಗೆಯಲ್ಲಿ ಭದ್ರ ಪಡಿಸಲಾಗಿದೆ. 450 ಲೀಟರ್ ಹಣ್ಣಿನ ರಸ ಬೇಕೆಂದರೆ ಇಂಥ ಎಷ್ಟು ಪೆಟ್ಟಿಗೆಗಳು ಬೇಕು/

1. 100
2. 75
3. 90
4. 80

22. ಕೆಳಗಿನ ವಿನ್ಯಾಸ ನೋಡಿ :

ಮೇಲಿನ ವಿನ್ಯಾಸದ ಪ್ರಕಾರ :

1. 123467
2. 12345
3. 123456
4. 123465

23. ಆಯತಾಕಾರದ ಪೆಟ್ಟಿಗೆಯೊಂದರ ಆಂತರಿಕ ಉದ್ದ, ಅಗಲ ಹಾಗು ಆಳಗಳು ಕ್ರಮವಾಗಿ 4 ಸೆಂ.ಮೀ, 3 ಸೆಂ.ಮೀ ಹಾಗೂ 2 ಸೆಂ.ಮೀ ಇದ್ದರೆ, 8664 ಘನ ಸೆಂ.ಮೀ ಗಳನ್ನು ಪ್ಯಾಕ್ ಮಾಡಲು ಇಂತಹ ಎಷ್ಟು ಪೆಟ್ಟಿಗೆಗಳು ಬೇಕು?

1. 722
2. 351
3. 361
4. 391

24. '1/3 ಭಿನ್ನರಾಶಿಗೆ ಸಮನಾದ ಬಿನ್ನರಾಶಿಯನ್ನು ಬರೆಯಿರಿ.' – ನಾಲ್ಕನೇ ತರಗತಿಯ ವಿದ್ಯಾರ್ಥಿಗೆ ಕೇಳಲಾದ ಈ ಪ್ರಶ್ನೆಯು ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?

1. ಸಂಬಂಧವಿಲ್ಲದ ಪ್ರಕ್ರಿಯೆಯನ್ನಾಧರಿಸಿರುವುದರಿಂದ ಇದು ಉನ್ನತ ಮಟ್ಟದ ಚಟುವಟಿಕೆಯ ಅಪೇಕ್ಷೆಯಾಗಿದೆ.
2. ಇದು ವಿಧಾನದ ಕೌಶಲ್ಯವನ್ನು ಮಾತ್ರ ಆಧರಿಸಿರುವುದರಿಂದ ಕೆಳಮಟ್ಟದ ಚಟುವಟಿಕೆಯ ಅಪೇಕ್ಷೆಯಾಗಿದೆ.
3. ಇದು ಸ್ಮರಣ ಶಕ್ತಿಯನ್ನು ಮಾತ್ರ ಆಧರಿಸಿರುವುದರಿಂದ ಕೆಳ ಮಟ್ಟದ ಚಟುವಟಿಕೆಯ ಅಪೇಕ್ಷೆ ಇದಾಗಿದೆ.
4. ಸಂಬಂಧಿತ ವಿಧಾನವನ್ನಾಧರಿಸಿರುವುದರಿಂದ ಇದು ಉನ್ನತ ಮಟ್ಟದ ಚಟುವಟಿಕೆಯನ್ನು ಅಪೇಕ್ಷಿಸುತ್ತದೆ.

25. ದಶಮಾಂಶ ಸಂಖ್ಯೆಗಳನ್ನು ಹೋಲಿಸುವಾಗ ವಿದ್ಯಾರ್ಥಿಗಳು ಸಾಮಾನ್ಯವಾಗಿ ತಪ್ಪು ಮಾಡುತ್ತಾರೆ. ಉದಾಹರಣೆಗೆ : 0.50ವು 0.5ಗಿಂತ ದೊಡ್ಡದು. ಈ ದೋಷಕ್ಕೆ ಅತ್ಯಂತ ಸಂಭವನೀಯ ಕಾರಣ –

1. ದಶಾಂಶಗಳ ಕ್ರಮವನ್ನು ನಿರ್ಧರಿಸುವಾಗ ಸೊನ್ನೆಯ ಮಹತ್ವದ ಬಗ್ಗೆ ಇರುವ ತಪ್ಪು ಕಲ್ಪನೆ.
2. ತರಗತಿಯಲ್ಲಿ ಇಂತಹ ಪ್ರಶ್ನೆಗಳ ಕುರಿತ ಅಭ್ಯಾಸದ ಕೊರತೆ.
3. ಸಂಖ್ಯಾ ರೇಖೆಯ ಮೇಲೆ ದಶಾಂಶ ಸಂಖ್ಯೆಗಳನ್ನು ಪ್ರತಿನಿಧಿಸುವಾಗಿನ ದೃಢ ಅನುಭವ ಇಲ್ಲದಿರುವುದು.
4. ವಿದ್ಯಾರ್ಥಿಗಳ ಉಪೇಕ್ಷೆ

26. 'ದೈನಂದಿನ ಜೀವನಕ್ಕೆ ಗಣಿತದ ಅನ್ವಯಿಕೆ' ಎಂಬ ಪರಿಕಲ್ಪನೆಯೊಂದಿಗೆ ಒಬ್ಬ ಶಿಕ್ಷಕ ವಿದ್ಯಾರ್ಥಿಗಳಿಗೆ ಗಣಿತ ಜರ್ನಲ್‌ವೊಂದನ್ನು ಸಿದ್ಧಪಡಿಸಲು ಹೇಳುತ್ತಾರೆ. ಈ ಚಟುವಟಿಕೆಯು –

1. ವಿದ್ಯಾರ್ಥಿಗಳಿಗೆ ಗಣಿತದ ಪರಿಕಲ್ಪನೆಗಳು ಮತ್ತು ಅದರ ಅನ್ವಯಿಕೆಗಳೊಂದಿಗೆ ಹೊಂದಿಕೊಳ್ಳಲು ಮತ್ತು ಅವರ ತಿಳಿವಳಿಕೆ ಹಾಗು ಕಲ್ಪನೆಗಳನ್ನು ಹಂಚಿಕೊಳ್ಳಲು ಸಹಾಯಕವಾಗುತ್ತದೆ.
2. ವಿದ್ಯಾರ್ಥಿಗಳು ಗಣಿತದ ಪರಿಕಲ್ಪನೆಗಳನ್ನು ಎಷ್ಟು ತಿಳಿದುಕೊಂಡಿದ್ದಾರೆಂದು ಪರೀಕ್ಷಿಸಲು ಸಹಾಯಕವಾಗುತ್ತದೆ.
3. ತಮ್ಮ ತಿಳಿವಳಿಕೆ ಮತ್ತು ಕಲ್ಪನೆಗಳನ್ನು ಹಂಚಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುತ್ತದೆ.
4. ಗಣಿತದ ಬಗ್ಗೆ ಸಂವೇದನೆ ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ.

27. ವ್ಯಾನ್ ಹೈಲಿ ಅವರ ಜ್ಯಾಮಿತೀಯ ವಿಚಾರ ಮಟ್ಟದ ಪ್ರಕಾರ ಐದು ಮಟ್ಟಗಳು – ದೃಶ್ಯೀಕರಣ (ವಿಜುವಲೈಜೇಷನ್), ವಿಶ್ಲೇಷಣೆ (ಅನ್ಯಾಲಿಸಿಸ್), ಇನ್‌ಫಾರ್ಮಲ್ ಡಿಡಕ್ಷನ್ ಹಾಗೂ ರಿಗರ್. ಮೂರನೇ ತರಗತಿಯ ಒಂದು ಮಗುವಿಗೆ ಕೆಲವು ಬಹು ಭುಜ ಆಕೃತಿ (ಪಾಲಿಗಾನ್)ಗಳನ್ನು ಕೊಟ್ಟು ಅವುಗಳನ್ನು ಬೇರ್ಪಡಿಸಲು ಹೇಳಲಾಗಿದೆ.

ಭುಜಗಳ ಸಂಖ್ಯೆಗಳನ್ನು ಆಧರಿಸಿ ಆ ಮಗು ಈ ಆಕೃತಿಗಳನ್ನು ಬೇರ್ಪಡಿಸುತ್ತದೆ. ಈ ಮಗು ವ್ಯಾನ್ ಹೈಲಿ ಜ್ಯಾಮಿತೀಯ ವಿಚಾರದ .... ಮಟ್ಟದಲ್ಲಿದೆ.

1. ಫಾರ್ಮಲ್ ಡಿಡಕ್ಷನ್
2. ವಿಜ್ಯುವಲೈಜೇಷನ್
3. ಅನ್ಯಾಲಿಸಿಸ್
4. ಇನ್‌ಫಾರ್ಮಲ್ ಡಿಡಕ್ಷನ್

28. ಸಂಖ್ಯೆಗಳು, ಗಣಿತ ಕ್ರಿಯೆಗಳು, ಚಿಹ್ನೆಗಳು, ಗಡಿಯಾರದ ಎರಡು ಮುಳ್ಳುಗಳು, ವಿವಿಧ ನಾಣ್ಯಗಳು ಇತ್ಯಾದಿಗಳ ಮಧ್ಯೆ ಇರುವ ವ್ಯತ್ಯಾಸವನ್ನು ಗುರುತಿಸಲು ಒಂದು ಮಗುವಿಗೆ ಕಠಿಣತೆ ಇದೆ. ಅಂದರೆ ಈ ಮಗುವಿನ ಕಲಿಕೆಗೆ ಉಂಟಾಗಿರುವ ನಿರ್ದಿಷ್ಟ ತಡೆ –

1. ದುರ್ಬಲವಾದ ಸ್ನಾಯು ಕೌಶಲ್ಯ, ಓದುವ ಹಾಗೂ ಬರೆಯುವ ಕೌಶಲ್ಯ
2. ದುರ್ಬಲವಾದ ಶಾಬ್ದಿಕ, ದೃಶ್ಯಿಕ, ಶ್ರವಣಿಕ ಹಾಗೂ ಕಾರ್ಯ ಸ್ಮೃತಿ.
3. ದುರ್ಬಲವಾದ ದೃಶ್ಯಿಕ ಪ್ರಕ್ರಿಯಾ ಸಾಮರ್ಥ್ಯ, ಅಂದರೆ : ದೃಶ್ಯ ಭಿನ್ನತೆ, ರೂಪಾಂತರ ಅರ್ಥೈಸುವಿಕೆ, ದೃಶ್ಯಿಕ ಸಂಚಾಲನೆ.
4. ದುರ್ಬಲ ಭಾಷಾ ಪ್ರಕ್ರಿಯಾ ಸಾಮರ್ಥ್ಯ , ಅಂದರೆ : ಅಭಿವ್ಯಕ್ತಿ, ಶಬ್ದ ಸಂಗ್ರಹ, ಶ್ರಾವಣಿಕ ಪ್ರಕ್ರಿಯೆ.

29. ಎನ್‌ಸಿಎಫ್ 2005 ಕಲಿಕೆಯ ರಚನಾತ್ಮಕ ನಿಲುವಿಗೆ ಅಂಶಕ್ಕೆ ಒತ್ತು ಕೊಡುವುದರಿಂದ ಕೆಳಗಿನ ಈ ಅಂಶದತ್ತ ಕೇಂದ್ರೀಕರಿಸುತ್ತದೆ –

1. ಶಿಕ್ಷಕರಿಂದ ಪರಿಣಾಮಕಾರಿ ಉಪನ್ಯಾಸ ಮತ್ತು ಸೂಚನೆಗಳು.
2. ವ್ಯಾಖ್ಯೆಗಳ ಹಾಗೂ ಸೂತ್ರಗಳ ಕಂಠಪಾಠ.
3. ನಿತ್ಯದ 'ಹೋಮ್ ವರ್ಕ್' ಸಲ್ಲಿಕೆ.
4. ಆಸಕ್ತಿದಾಯಕ ಚಟುವಟಿಕೆಗಳ ಮೂಲಕ ಕಲಿಯುವವನ ಸಕ್ರಿಯ ಪಾಲ್ಗೊಳ್ಳುವಿಕೆ.

ವಿವರಣೆ : ಕಿವಿ ಹಕ್ಕಿಗೆ ಕೊಕ್ಕೆಯ ತುದಿಯಲ್ಲಿ ಎರಡು ಹೊಳ್ಳೆಗಳಿವೆ, ಮೂಗು ಇಲ್ಲ.

7) ವಸಡಿನಿಂದ ರಕ್ತ ಸ್ರಾವವಾಗುವುದು ಯಾವ ರೋಗದ ಲಕ್ಷಣ ?

ಅ) ಬೆರಿಬೆರಿ ಆ) ಸ್ಕರ್ವಿ

ಇ) ಮಯೋಪಿಯ ಈ) ಇರುಳುಗುರುಡು

ಉತ್ತರ :

ಆ) ಸ್ಕರ್ವಿ

ವಿವರಣೆ : ವಿಟಾಮಿನ್ ಸಿ ಕೊರತೆಯಿಂದ ಸ್ಕರ್ವಿ ರೋಗ ಬರುತ್ತದೆ. ಈ ರೋಗದ ಲಕ್ಷಣಗಳು – ಮೃದು ಹಾಗು ರಕ್ತ ಸುರಿಯುವ ವಸಡುಗಳು ಮತ್ತು ಊದಿದ ಕಾಲುಗಳು.

8) ಅತೀ ವೇಗವಾಗಿ ತಿರುಗುತ್ತಾ ಬೀಸುವ ಗಾಳಿಯನ್ನು ಕೆಳಗಿನ ಯಾವ ಹೆಸರಿನಿಂದ ಕರೆಯಲಾಗುತ್ತದೆ ?

ಅ) ಬಿರುಗಾಳಿ ಆ) ಮಾರುತ

ಇ) ವಾಯುವೇಗ ಈ) ವಾಯುವಿಹಾರ

ಉತ್ತರ :

ಅ) ಬಿರುಗಾಳಿ

ವಿವರಣೆ : ಬಿರುಗಾಳಿಯು ಗಂಟೆಗೆ 63 ಕಿಲೊ ಮೀಟರ್‌ಗಿಂತ ಹೆಚ್ಚಿನ ವೇಗವನ್ನು ಹೊಂದಿರುತ್ತದೆ.

9) ಶಕ್ತಿಯ ಅತಿ ಮುಖ್ಯವಾದ ನೈಸರ್ಗಿಕ ಮೂಲ ಯಾವುದು ?

ಅ) ವಿದ್ಯುತ್ ಶಕ್ತಿ ಆ) ಮಾನವ ಧೈರ್ಯ

ಇ) ಸೂರ್ಯ ಈ) ನೀರು

ಉತ್ತರ :

ಇ) ಸೂರ್ಯ

ವಿವರಣೆ :

ಸೂರ್ಯನ ತಿರುಳಿನಲ್ಲಿರುವ ಉಷ್ಣತೆ 15,000,000 ಕೆಲ್ವಿನ್ ಮತ್ತು ಸೂರ್ಯನ ಮೇಲ್ಮೈ ಉಷ್ಣತೆ 6000 ಕೆಲ್ವಿನ್.

10) "ವಿಶ್ವ ಪರಿಸರ ದಿನ"ವನ್ನು ಪ್ರತಿ ವರ್ಷ .....ರಂದು ಆಚರಿಸಲಾಗುತ್ತದೆ.

ಅ) ಜುಲೈ 8 ಆ) ಜೂನ್ 5

ಇ) ಡಿಸೆಂಬರ್ 28 ಈ) ಫೆಬ್ರವರಿ 6

ಉತ್ತರ :

ಆ) ಜೂನ್ 5

ವಿವರಣೆ : 1972ರಿಂದ ವಿಶ್ವಸಮಸ್ಥೆ ಜೂನ್ 5ನ್ನು ವಿಶ್ವ ಪರಿಸರ ದಿನವನ್ನಾಗಿ ಆಚರಿಸುತ್ತಿದೆ.

11) ಅತ್ಯಂತ ಎತ್ತರವಾದ ಜಲಪಾತ ಯಾವುದು?

ಅ) ಜೋಗ್ ಫಾಲ್ಸ್ ಆ) ನಯಾಗಾರ ಫಾಲ್ಸ್

ಇ) ಏಂಜಲ್ ಫಾಲ್ಸ್ ಈ) ಅಬ್ಬೆ ಫಾಲ್ಸ್

ಉತ್ತರ :

ಇ) ಏಂಜಲ್ ಫಾಲ್ಸ್

ವಿವರಣೆ : ವೆನೆಜುವೆಲಾದಲ್ಲಿರುವ ಈ ಜಲಪಾತದ ಎತ್ತರ 979 ಮೀಟರ್.

12) ರಾಷ್ಟ್ರ ಮುದ್ರೆಯು ಏನನ್ನು ಸೂಚಿಸುತ್ತದೆ ?

ಅ) ಸಹಬಾಳ್ವೆ ಆ) ಶಾಂತಿ

ಇ) ಧೈರ್ಯ ಈ) ಸಮೃದ್ಧಿ

ಉತ್ತರ :

ಇ) ಧೈರ್ಯ

ವಿವರಣೆ : ಅಶೋಕ ಚಕ್ರವರ್ತಿ ನಿರ್ಮಿಸಿದ ಸಾರನಾಥ ಶಿಲಾಸ್ತಂಭದ ಮೇಲಿನ ನಾಲ್ಕು ದಿಕ್ಕುಗಳನ್ನು ಪ್ರತಿನಿಧಿಸುವ ನಾಲ್ಕು ಸಿಂಹಗಳ ಮುದ್ರಿಕೆ ನಮ್ಮ ರಾಷ್ಟ್ರೀಯ ಲಾಂಛನವಾಗಿದೆ. ಇದರ ಮೇಲೆ ಮುಂಡಕೋಪನಿಷತ್ತಿನಿಂದ ಆಯ್ದ 'ಸತ್ಯಮೇವ ಜಯತೇ' ಎಂಬ ವಾಕ್ಯವನ್ನೂ ಕೆತ್ತಲಾಗಿದೆ.

13) ಇವುಗಳು ನಮ್ಮೆಲ್ಲರಿಗೂ ಅಗತ್ಯ

ಅ) ಗಾಳಿ ಮತ್ತು ನೀರು ಆ) ಶಿಕ್ಷಣ ಮತ್ತು ಆರೋಗ್ಯ

ಇ) ಆಹಾರ ಮತ್ತು ವಸತಿ ಈ) ಅರಮನೆ ಮತ್ತು ಕಾರು

ಉತ್ತರ :

ಅ) ಗಾಳಿ ಮತ್ತು ನೀರು

ವಿವರಣೆ : ಜೀವಿಗಳ ಬದುಕಿಗೆ ಗಾಳಿ ಮತ್ತು ನೀರು ಮೂಲ ಆವಶ್ಯಕತೆಗಳು.

14) ದೀಪಾವಳಿಯು ಎಷ್ಟು ದಿನಗಳ ಹಬ್ಬ ?

ಅ) 5 ಆ) 7

ಇ) 9 ಈ) 3

ಉತ್ತರ :

ಈ) 3

ವಿವರಣೆ : ಧನ ತ್ರಯೋದಶಿ (ನೀರು ತುಂಬುವ ಹಬ್ಬ), ನರಕಚತುರ್ದಶಿ (ನರಕಾಸುರ ವಧೆ) ಬಲಿಪಾಡ್ಯ.

15) ಭೂದಿನವನ್ನು ಪ್ರತಿ ವರ್ಷ .... ರಂದು ಆಚರಿಸಲಾಗುತ್ತದೆ.

ಅ) ಫೆಬ್ರವರಿ 28 ಆ) ಏಪ್ರಿಲ್ 22

ಇ) ಜೂನ್ 10 ಈ) ಮೇ 15

ಉತ್ತರ :

ಆ) ಏಪ್ರಿಲ್ 22

ವಿವರಣೆ : 1970 ರ ಏಪ್ರಿಲ್ 22ರಂದು ಯುಎಸ್ ಸೆನೆಟರ್ ಗೆಲಾರ್ಡ್ ನೆಲ್ಸನ್‌ರಿಂದ ಇದು ಆರಂಭವಾಯಿತು. ಈ ದಿನದಂದು ಭೂಮಿಯ ಸ್ವಾಭಾವಿಕ ವಾತಾವರಣದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

16) ದ್ಯುತಿ ಸಂಶ್ಲೇಷಣೆ ಕ್ರಿಯೆ ನಡೆಯುವ ಕಣದಂಗಳ ಯಾವುದು?

ಅ) ಕ್ಲೋರೋಪ್ಲಾಸ್ಟ್ ಆ) ಮೈಟೋಕಾಂಡ್ರಿಯ

ಇ) ಕ್ಲೋರೋಫಿಲ್ ಈ) ಲೈಸೋಸೋಮ

ಉತ್ತರ :

ಅ) ಕ್ಲೋರೋಪ್ಲಾಸ್ಟ್

ವಿವರಣೆ : ದ್ಯುತಿ ಸಂಶ್ಲೇಷಣೆ ಕ್ರಿಯೆಯಲ್ಲಿ ಸೂರ್ಯನಿಂದ ಶಕ್ತಿಯನ್ನು ಹೀರಿಕೊಳ್ಳುವ ಕ್ಲೋರೊಫಿಲ್ (ಪತ್ರ ಹರಿತ್ತು) ಇರುವುದು ಕ್ಲೋರೊಪ್ಲಾಸ್ಟ್‌ಗಳಲ್ಲಿ. 1817ರಲ್ಲಿ ಕ್ಲೋರೊಫಿಲ್ ಅನ್ನು ವಿಜ್ಞಾನಿಗಳು ಸಂಶ್ಲೇಷಿದರೆ, 1865ರಲ್ಲಿ ಈ ಕ್ಲೋರೊಫಿಲ್ ಕ್ಲೋರೊಪ್ಲಾಸ್ಟ್‌ಗಳಲ್ಲಿ ಹರಡಿಕೊಂಡಿರುವುದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದರು. ಕ್ಲೋರೊಪ್ಲಾಸ್ಟ್‌ಗಳು 2–10 ಮೈಕ್ರೋ ಮೀಟರ್ ಉದ್ದವಾಗಿರುತ್ತವೆ.

17) ಗಾಳಿಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಇರುವ ಅನಿಲ ಯಾವುದು?

ಅ) ಆಮ್ಲಜನಕ ಆ) ಇಂಗಾಲದ ಡೈ ಆಕ್ಸೈಡ್

ಇ) ಹೀಲಿಯಂ ಈ) ಸಾರಜನಕ

ಉತ್ತರ :

ಈ) ಸಾರಜನಕ

ವಿವರಣೆ :

ಗಾಳಿಯಲ್ಲಿರುವ ಪ್ರಮುಖ ಅನಿಲಗಳ ಶೇಕಡಾ ವಾರು ಪ್ರಮಾಣ :

ಸಾರಜನಕ	78%
ಆಮ್ಲಜನಕ	21%
ಆರ್ಗಾನ್	0.9%
ಇಂಗಾಲದ ಡೈ ಆಕ್ಸೈಡ್	0.03%

18 ಎಲೆಗಳಿಂದ ಹುಟ್ಟುವ ಸಸಿ ....

ಅ) ಟೈಲೋಫೈಟ್ಸ್ ಆ) ಬ್ರಯೋಫೈಲಮ್

ಇ) ಟೆರಿಡೋಫೈಟಾ ಈ) ಬ್ರಯೋಫೈಟ್ಸ್

ಉತ್ತರ :

ಆ) ಬ್ರಯೋಫೈಲಮ್

ವಿವರಣೆ : ಇವು ಕ್ರಸುಲೇಸಿಯ ಕುಟುಂಬಕ್ಕೆ ಸೇರಿದ ಸಸ್ಯವರ್ಗಗಳು.

19) ಕಾರ್ಬೋಹೈಡ್ರೇಟ್‌ಗಳಿಗಿಂತ ಹೆಚ್ಚು ಶಕ್ತಿಯನ್ನು ಒದಗಿಸುವ ಆಹಾರದ ಘಟಕ ಯಾವುದು?

ಅ) ಲಿಪಿಡ್‌ಗಳು ಆ) ಪ್ರೋಟೀನ್‌ಗಳು

ಇ) ಜೀವಸತ್ವಗಳು ಈ) ಲವಣಾಂಶಗಳು

ಉತ್ತರ :

ಅ) ಲಿಪಿಡ್‌ಗಳು

ವಿವರಣೆ :

ಆಹಾರದ ಶಕ್ತಿಯನ್ನು ಕಿಲೋ ಜೌಲ್‌ಗಳಲ್ಲಿ ಅಳೆಯುತ್ತಾರೆ. ವಿವಿಧ ಆಹಾರ ಘಟಕಗಳು ಒದಗಿಸುವ ಶಕ್ತಿ ಪ್ರಮಾಣ ಹೀಗಿದೆ –

ಲಿಪಿಡ್ (ಕೊಬ್ಬು, ಎಣ್ಣೆ ಇತ್ಯಾದಿ)ಗಳು – 37ಕಿಲೊ ಜೌಲ್/ಗ್ರಾಂ

ಪ್ರೋಟೀನ್‌ಗಳು – 17 ಕಿಲೊ ಜೌಲ್/ಗ್ರಾಂ

ಕಾರ್ಬೋಹೈಡ್ರೇಟ್‌ಗಳು – 16 ಕಿ.ಜೌ/ಗ್ರಾಂ

20) ಪ್ರಚೋದನೆಗೆ ಪ್ರತಿಕ್ರಿಯೆ ನೀಡುವ ಹೂವು ....

ಅ) ಚೆಂಡು ಹೂವು ಆ) ಸೇವಂತಿಗೆ

ಇ) ಮಲ್ಲಿಗೆ ಈ) ಸೂರ್ಯಕಾಂತಿ

ಉತ್ತರ :

ಈ) ಸೂರ್ಯಕಾಂತಿ

ವಿವರಣೆ : ಸೂರ್ಯನ ಕಿರಣಗಳು ಬೀಳುವ ದಿಕ್ಕಿನತ್ತಲೇ ಸೂರ್ಯಕಾಂತಿ ಹೂ ತನ್ನ 'ಮುಖ' ತವಾಲಿಸಿರುತ್ತದೆ. ಇದನ್ನು 'ಹೀಲಿಯೋಟ್ರಾಪಿಸಮ್' ಎನ್ನುತ್ತಾರೆ.

21) "ಭಾರತದ ಹಸಿರು ಕ್ರಾಂತಿಯ ಜನಕ" ಎಂದು ಕರೆಯಲ್ಪಡುವ ಭಾರತೀಯ ಕೃಷಿ ವಿಜ್ಞಾನಿ ಯಾರು?

ಅ) ಬಿ.ಜಿ.ಎಲ್. ಸ್ವಾಮಿ ಆ) ಎಂ.ಎಸ್. ಸ್ವಾಮಿನಾಥನ್

ಇ) ಹರ್ ಗೋವಿಂದ ಖೊರಾನಾ ಈ) ಎಂ. ಮರಿಸ್ವಾಮಿ

ಉತ್ತರ :

ಆ) ಎಂ.ಎಸ್. ಸ್ವಾಮಿನಾಥನ್

ವಿವರಣೆ : ಹೆಚ್ಚು ಇಳುವರಿ ಕೊಡುವ ಬೀಜಗಳು, ಹೆಚ್ಚಿನ ರಸಗೊಬ್ಬರ ಮತ್ತು ನೀರಾವರಿ – ಇವುಗಳ ಸಂಯುಕ್ತ ಪರಿಣಾಮವೇ ಹಸಿರು ಕ್ರಾಂತಿ. ಹೈಬ್ರೀಡ್ ಗೋದಿಯನ್ನು ಡಾ ಬೋರ್ಲಾಗ್ 1963ರಲ್ಲಿ ಪರಿಚಯಿಸಿದರು.

ಡಾ. ಸ್ವಾಮಿನಾಥನ್ ಭಾರತದಲ್ಲಿ ಹಸಿರು ಕ್ರಾಂತಿಯನ್ನು ಒಂದು ಆಂದೋಲನದ ರೂಪದಲ್ಲಿ ಮುನ್ನಡೆಸಿದರು.ಹಸಿರು ಕ್ರಾಂತಿಯ ಮೂಲಕ ಭಾರತ ಹೆಚ್ಚು ಹೆಚ್ಚು ಉತ್ಪನ್ನಗಳನ್ನು ಕಾಣುವಂತಾಯಿತು.

22) ಹಲವಾರು ವರ್ಷಗಳ ಕಾಲ ಬದುಕುವ ಸಸ್ಯಗಳನ್ನು ಗುರ್ತಿಸಿ

ಅ) ವಾರ್ಷಿಕ ಆ) ದ್ವೈವಾರ್ಷಿಕ

ಇ) ಬಹುವಾರ್ಷಿಕ ಈ) ಏಕವಾರ್ಷಿಕ

ಉತ್ತರ :

ಇ) ಬಹುವಾರ್ಷಿಕ

ವಿವರಣೆ : ಜಿಂಜಿಬರೇಸಿ ಕುಟುಂಬಕ್ಕೆ ಸೇರಿದ ಏಕದಳ ಪಂಗಡದ ಏಲಕ್ಕಿ ಬಹುವಾರ್ಷಿಕ ಸಸ್ಯಗಳ ಒಂದು ಉದಾಹರಣೆ.

ಸೂರ್ಯಕಾಂತಿಯು ಅಸ್ಟರೇಸಿ ಕುಟುಂಬಕ್ಕೆ ಸೇರಿದ ಏಕವಾರ್ಷಿಕ ಸಸ್ಯಕ್ಕೆ ಒಂದು ಉದಾಹರಣೆ.

23) ಒಂದೇ ಜಮೀನನಲ್ಲಿ ಒಂದೇ ಋತುವಿನಲ್ಲಿ ಎರಡು ಅಥವಾ ಹೆಚ್ಚು ಬೆಳೆಗಳನ್ನು ಬೆಳೆಯುವುದಕ್ಕೆ .... ಎನ್ನುತ್ತಾರೆ.

ಅ) ಸರದಿ ಬೆಳೆ ಆ) ಜೈವಿಕ ಬೆಳೆ

ಇ) ಸಾವಯವ ಬೆಳೆ ಈ) ಮಿಶ್ರ ಬೆಳೆ

ಉತ್ತರ :

ಈ) ಮಿಶ್ರ ಬೆಳೆ

ವಿವರಣೆ : ಮಿಶ್ರ ಬೆಳೆಯಿಂದ ಭೂಮಿಯ ಫಲವತ್ತತೆ ಹೆಚ್ಚುತ್ತದೆ.

24) ಪ್ರಾಣಿಜನ್ಯ ನಾರನ್ನು ಗುರುತಿಸಿ

ಅ) ರೇಷ್ಮೆ ಆ) ಹತ್ತಿ

ಇ) ಲಿನೆನ್ ಈ) ರೇಯಾನ್

ಉತ್ತರ :

ಅ) ರೇಷ್ಮೆ

ವಿವರಣೆ : ರೇಷ್ಮೆ ಮೂಲತಃ ಹಲವಾರು ಕೀಟಗಳು ಸ್ರವಿಸುವ ಪ್ರೊಟೀನ್. ಆದರೆ ಮಲ್‌ಬೆರಿ ರೇಷ್ಮೆ ಹುಳು ಬಾಂಬಿಕ್ಸ್ ಮೋರಿ ಸ್ರವಿಸುವ ಈ ನಾರು ಹೆಚ್ಚು ಉತ್ತಮವಾಗಿದ್ದು , ಬಟ್ಟೆ ಉದ್ಯಮದಲ್ಲಿ ಅತಿ ಹೆಚ್ಚು ಉಪಯುಕ್ತವಾಗಿದೆ.

25) ಸರ್ಕಾರಿ ಸ್ಟ್ಯಾಂಪ್ ಪೇಪರ್ ಮತ್ತು ನೋಟುಗಳನ್ನು ಮುದ್ರಿಸಲು ಅಗತ್ಯವಿರುವ ರೇಯಾನ್ ತಯಾರಿಸಲು ಯಾವುದನ್ನು ಬಳಸಲಾಗುತ್ತದೆ?

ಅ) ಶ್ರೇಷ್ಠ ಗುಣಮಟ್ಟದ ಹತ್ತಿ ಆ) ಶ್ರೇಷ್ಠ ಗುಣಮಟ್ಟದ ರೇಷ್ಮೆ

ಇ) ಶ್ರೇಷ್ಠ ಗುಣಮಟ್ಟದ ಪಾಲಿಯೆಸ್ಟರ್ ಈ) ಶ್ರೇಷ್ಠ ಗುಣಮಟ್ಟದ ಸೆಣಬು

ಉತ್ತರ :

ಅ) ಶ್ರೇಷ್ಠ ಗುಣಮಟ್ಟದ ಹತ್ತಿ

ವಿವರಣೆ :

ಸೆಲ್ಯುಲೋಸ್‌ನಿಂದ ತಯಾರಿಸಲ್ಪಡುವ ರೇಯಾನ್ ರೇಷ್ಮೆಯಂತಿರುವ ಒಂದು ಕೃತಕ ನಾರು.

26) ಸೂಕ್ಷ್ಮದರ್ಶಕವನ್ನು ಮೊದಲು ರೂಪಿಸಿದ ವಿಜ್ಞಾನಿ ಯಾರು?

ಅ) ರಾಬರ್ಟ ಹುಕ್ ಆ) ಲೀವನ್ ಹಾಕ್

ಇ) ಮೆಂಡಲ್ ಈ) ಕೆರೊಲಸ್ ಲಿನೇಯಿಸ್

ಉತ್ತರ :

ಆ) ಲೀವನ್ ಹಾಕ್

ವಿವರಣೆ : ಲೀವನ್‌ಹಾಕ್(1632–1723) 1674ರಲ್ಲಿ ಸರಳ ಸೂಕ್ಷ್ಮದರ್ಶಕವನ್ನು ರೂಪಿಸಿ ಬ್ಯಾಕ್ಟಿರಿಯ, ರಕ್ತದ ಕಣಗಳಂಥ ಸೂಕ್ಷ್ಮ ಗಳನ್ನು ಮೊದಲಬಾರಿಗೆ ವೀಕ್ಷಿಸಿ, ಜಗತ್ತಿಗೆ ತಿಳಿಸಿದ.

27) ಸಸ್ಯದ ಬೆಳವಣಿಗೆಯನ್ನು ಅಳೆಯುವ ಉಪಕರಣ ಯಾವುದು?

ಅ) ಪಾಲಿಗ್ರಾಫ್ ಆ) ಸಿಸ್ಮೋಗ್ರಾಫ್

ಇ) ಮೋನೋಗ್ರಾಫ್ ಈ) ಕ್ರೆಸ್ಕೋಗ್ರಾಫ್

ಉತ್ತರ :

ಈ) ಕ್ರೆಸ್ಕೋಗ್ರಾಫ್

ವಿವರಣೆ : ಕ್ರೆಸ್ಕೊಗ್ರಾಫ್‌ನ್ನು ಭಾರತದ ಸಸ್ಯವಿಜ್ಞಾನಿ ಜಗದೀಶ್ ಚಂದ್ರ ಬೋಸ್ 20ನೇ ಶತಮಾನದ ಆರಂಭದಲ್ಲಿ ಕಂಡು ಹಿಡಿದು, ಸಂಶೋಧನೆಯಲ್ಲಿ ತೊಡಗಿದರು.

28) ಎರೆಹುಳು .... ಮೂಲಕ ಉಸಿರಾಡುತ್ತದೆ.

ಅ) ಕಿವಿರುಗಳು ಆ) ಶ್ವಾಸಕೋಶಗಳು

ಇ) ಚರ್ಮ ಈ) ಬಾಯಿ ಕುಹರ

ಉತ್ತರ : ಇ) ಚರ್ಮ

ವಿವರಣೆ : ಎರೆಹುಳುಗಳು ಚರ್ಮದ ಮೂಲಕ ನೇರವಾಗಿ ಆಮ್ಲಜನಕವನ್ನು ತೆಗೆದುಕೊಂಡು, ಚರ್ಮದ ಮೂಲಕವೇ ಇಂಗಾಲದ ಡೈ ಆಕ್ಸೈಡ್‌ನ್ನು ಹೊರ ಬಿಡುತ್ತವೆ. ಈ ಪ್ರಕ್ರಿಯೆ 'ವಿಸರಣ' (ಡಿಫ್ಯೂಜನ್)ದ ಮೂಲಕ ನಡೆಯುತ್ತದೆ.

29) ನವೀಕರಿಸಲಾಗದ ಸಂಪನ್ಮೂಲ ....

ಅ) ಕಲ್ಲಿದ್ದಲು ಆ) ಗಾಳಿ

ಇ) ನೀರು ಈ) ಮಣ್ಣು

ಉತ್ತರ :

ಅ) ಕಲ್ಲಿದ್ದಲು

ವಿವರಣೆ :

ಮತ್ತೆ ಉತ್ಪಾದಿಸಲಾಗದಂಥ ಸ್ವಾಭಾವಿಕ ಸಂಪನ್ಮೂಲಗಳು ನವೀಕರಿಸಲಾಗದ ಸಂಪನ್ಮೂಲಗಳು.

30) ಭಾರತದಲ್ಲಿ .... ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ

ಅ) 14 ಆ) 11

ಇ) 15 ಈ) 17

ಉತ್ತರ :

ಈ) 17

ವಿವರಣೆ : ಭಾರತದಲ್ಲಿ ಪ್ರಸಕ್ತ 17 ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಗಳಿವೆ :

1) ಇಂದಿರಾಗಾಂಧಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ನವದೆಹಲಿ

2) ಛತ್ರಪತಿ ಶಿವಾಜಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಮುಂಬೈ

3) ರಾಜೀವ್ ಗಾಂಧಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಹೈದರಾಬಾದ್

4) ಬೆಂಗಳೂರು ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ

5) ಅಣ್ಣಾದುರೈ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಚೆನ್ನೈ

6) ನೇತಾಜಿ ಸುಭಾಸ್‌ಚಂದ್ರ ಬೋಸ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಕೊಲ್ಕತ್ತ

7) ಕೊಚಿನ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಕೇರಳ

8) ಸರ್ದಾರ್ ವಲ್ಲಭ್ ಭಾಯಿ ಪಟೇಲ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಅಹಮದಾಬಾದ್

9) ಗೋವಾ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಪಣಜಿ

10) ತಿರುವನಂತಪುರ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಕೇರಳ

11) ಜೈಪುರ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ರಾಜಸ್ಥಾನ

12) ಶೇಖ್–ಉಲ್–ಆಲಮ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಶ್ರೀನಗರ

13) ಶ್ರೀ ಗುರು ರಾಮದಾಸ್ ಜೀ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಅಮೃತಸರ

14) ಲೋಕಪ್ರಿಯ ಗೋಪಿನಾಥ ಬಾರ್ಡೊಲಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಗೌಹಾತಿ, ಅಸ್ಸಾಂ

15) ಬಾಬಾ ಸಾಹೇಬ್ ಅಂಬೇಡ್ಕರ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ನಾಗ್ಪುರ, ಮಹಾರಾಷ್ಟ್ರ

16) ಕಾಲಿಕಟ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಕೇರಳ

17) ವೀರ ಸಾವರ್ಕರ್ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ, ಪೋರ್ಟ್‌ಬ್ಲೇರ್, ಅಂಡಮಾನ್ ಮತ್ತು ನಿಕೋಬಾರ್.

ಹೆಚ್ಚುವರಿ ಮಾದರಿ ಪ್ರಶ್ನೆ ಪತ್ರಿಕೆಗಳು–1

ವಿಷಯ :

ಪ್ರಥಮ ಭಾಷೆ : ಕನ್ನಡ

ಸೂಚನೆಗಳು:

1. ಈ ಭಾಗ 30 ಬಹು ಅಂಶ ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿದೆ
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ

1) <u>ತಾಯಿಯ</u> ಪ್ರೀತಿಗೆ ಸಮನಾದುದು ಇಲ್ಲ. ಅಡಿಗೆರೆ ಎಳೆದ ಪದದ ಸಮಾನಾರ್ಥಕ ಪದ

ಅ) ಅತ್ತೆ

ಆ) ಸಹೋದರಿ

ಇ) ಜನನಿ

ಈ) ಅಜ್ಜಿ

ಉತ್ತರ :

ಇ) ಜನನಿ

2) 'ರಾಜಧಾನಿ' ಅಕ್ಷರಗಳನ್ನು ಬಿಡಿಸಿ ಬರೆದಾಗ

ಅ) ರ್+ಆ+ಜ್+ಅ+ಧ್+ಆ+ನ್+ಇ

ಆ) ರ್•ಅ•ಜ್•ಅ•ಧ್•ಅ•ನ್•ಈ

ಇ) ರ್•ಅ•ಜ್•ಅ•ಧ್•ಅ•ನ್•ಇ

ಈ) ರ್•ಅ•ಜ್•ಅ•ಧ್•ಅ•ನ್•ಇ

ಉತ್ತರ :

ಅ) ರ್•ಅ•ಜ್•ಅ•ಧ್•ಅ•ನ್•ಇ

3) ಕಿರಿಯರಿಗೆ ಪತ್ರವನ್ನು ಬರೆಯುವಾಗ ಈ ಪದವನ್ನು ಸಂಬೋಧಿಸುತ್ತೇವೆ –

ಅ) ಮಾನ್ಯರಿಗೆ ಆ) ಚಿರಂಜೀವಿಗೆ

ಇ) ಕಿರಿಯರಿಗೆ ಈ) ಆತ್ಮೀಯರಿಗೆ

ಉತ್ತರ :

ಆ) ಚಿರಂಜೀವಿಗೆ

4) 'ಹಾಸಿಗೆ ಇದ್ದಷ್ಟು ಕಾಲು ಚಾಚು' ಈ ಗಾದೆ ಮಾತಿನ ಅರ್ಥ

ಅ) ಹಾಸಿಗೆಯಿಂದ ಆಚೆ ಕಾಲು ಹಾಕದಿರು

ಆ) ಇರುವುದರಲ್ಲೇ ತೃಪ್ತಿಪಡು

ಇ) ಕಾಲನ್ನು ಮಡಚಿ ಮಲಗು

ಈ) ಹಣವನ್ನು ಖರ್ಚು ಮಾಡದಿರು

ಉತ್ತರ :

ಆ) ಇರುವುದರಲ್ಲೇ ತೃಪ್ತಿಪಡು

5) ಸೀತೆ ಏಕೆ ಬಂದೆ – ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ

ಅ) ಪ್ರಶ್ನಾರ್ಥಕ ಆ) ಪೂರ್ಣವಿರಾಮ

ಇ) ಉದ್ಧರಣ ಈ) ಭಾವಸೂಚಕ

ಉತ್ತರ : ಅ) ಪ್ರಶ್ನಾರ್ಥಕ

6) ಷಟ್ಪದಿ – ಈ ಪದ್ಯದಲ್ಲಿರುವ ಸಾಲುಗಳ ಸಂಖ್ಯೆ

ಅ) ಮೂರು ಸಾಲುಗಳು ಆ) ನಾಲ್ಕು ಸಾಲುಗಳು

ಇ) ಐದು ಸಾಲುಗಳು ಈ) ಆರು ಸಾಲುಗಳು

ಉತ್ತರ : ಈ) ಆರು ಸಾಲುಗಳು

7) ದಶರಥನ ಅವಸಾನಕ್ಕೆ ಕಾರಣವಾದ ವಿಷಯ

ಅ) ರಾಮಲಕ್ಷ್ಮಣರ ವನವಾಸ

ಆ) ಪುತ್ರಶೋಕ

ಇ) ಭರತ ಶತ್ರುಘ್ನರು ಮಾವನ ಮನೆಗೆ ಹೋದದ್ದು

ಈ) ಕೈಕೆಯಿಗೆ ವರ ನೀಡಿದ್ದರಿಂದ

ಉತ್ತರ :

ಆ) ಪುತ್ರಶೋಕ

8) ಗಾಂಧೀಜಿಯವರು ಸತ್ಯಾಗ್ರಹದ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು. ಈ ವಾಕ್ಯದಲ್ಲಿರುವ ಕರ್ತೃಪದ ಇದಾಗಿದೆ.

ಅ) ಸತ್ಯ ಆ) ದೇಶ

ಇ) ಸ್ವಾತಂತ್ರ್ಯ ಈ) ಗಾಂಧೀಜಿಯವರು

ಉತ್ತರ :

ಈ) ಗಾಂಧೀಜಿಯವರು

9) ಹೊಯ್ಸಳರ ಅರಸ ವಿಷ್ಣುವರ್ಧನ ಉತ್ತಮ ಕಲೋಪಾಸಕ ಎನಿಸಿದ್ದರು. ಈ ವಾಕ್ಯದಲ್ಲಿರುವ ಕಲೋಪಾಸಕ ಪದವನ್ನು ಬಿಡಿಸಿ ಬರೆದಾಗ ಈ ರೂಪ ಹೊಂದುತ್ತದೆ –

ಅ) ಕಲೋ•ಪಾಸಕ ಆ) ಕಲೋಪಾ•ಸಕ

ಇ) ಕಲಾ•ಉಪಾಸಕ ಈ) ಕಲೋ•ಉಪಾಸಕ

ಉತ್ತರ :

ಇ) ಕಲಾ•ಉಪಾಸಕ

ಇದು ಗುಣ ಸಂಧಿ. ಗುಣಸಂಧಿ ಎಂದರೆ –ಅ,ಆ ಕಾರಗಳ ಮುಂದೆ ಇ,ಈ ಕಾರಗಳು ಏ ಕಾರವೂ, ಉ, ಊ ಕಾರಗಳು ಬಂದರೆ ಓ ಕಾರವೂ, ಋ ಕಾರ ಬಂದರೆ ಅರ್ ಎಂಬುದು ಗುಣವಾಗಿ ಬರುವುದು.

ಕೆಲವು ಉದಾಹರಣೆಗಳು :

ದೇವ + ಇಂದ್ರ = ದೇವೇಂದ್ರ

ಮಹಾ + ಈಶ = ಮಹೇಶ

ಜನ + ಉಪಕಾರಿ = ಜನೋಪಕಾರಿ

ಚಂದ್ರ + ಉದಯ = ಚಂದ್ರೋದಯ

ಸಪ್ತ + ಋಷಿ = ಸಪ್ತರ್ಷಿ

10) ಅಕ್ಷರ–ಅಕ್ಕರ, ವಿದ್ಯಾ – ......

ಮೊದಲೆರಡು ಪದದಗಳಿರುವ ಸಂಭಂದದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಆರಿಸಿ ಬರೆಯಿರಿ

ಅ) ಅಜ್ಜಿ ಆ) ಬಿಜ್ಜೆ

ಇ) ಶೌರ್ಯ ಈ) ಶಾಲೆ

ಉತ್ತರ :

ಆ) ಬಿಜ್ಜೆ

ಇವು ತತ್ಸಮ–ತದ್ಭವಗಳು.

ಇತರ ಕೆಲವು ವಿಶೇಷವಾದಂಥ ಇಂತಹ ತತ್ಸಮ–ತದ್ಭವಗಳ ಉದಾಹರಣೆಗಳನ್ನು ನೋಡಿಕೊಳ್ಳಿ :

ಕುಂಬಳ – ಕೂಷ್ಮಾಂಡ

ಮಹಾ ಸತಿ – ಮಾಸ್ತಿ

11) ಲಲಿತ ಕಲೆಗಳಲ್ಲೆಲ್ಲಾ ಸಂಗೀತ ಅತ್ಯಂತ ಪ್ರಾಚೀನ ಕಲೆಯೆನಿಸಿದೆ. ಈ ವಾಕ್ಯದಲ್ಲಿರುವ 'ಪ್ರಾಚೀನ' ಎಂಬ ಪದಕ್ಕೆ ಇದು ವಿರುದ್ಧವಾದ ಪದವಾಗಿದೆ.

ಅ) ಪುರಾತನ ಆ) ನಯನ

ಇ) ನವೀನ ಈ) ಹಳೆಯ

ಉತ್ತರ :

ಇ) ನವೀನ

12) ನಮ್ಮ <u>ಪರಿಸರವನ್ನು</u> ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ವಾಕ್ಯದಲ್ಲಿರುವ ಗೆರೆ ಎಳೆದ ಪದ ಈ ವಿಭಕ್ತಿಗೆ ಸೇರಿದೆ –

ಅ) ತೃತೀಯ ಆ) ಸಪ್ತಮಿ

ಇ) ದ್ವಿತೀಯ ಈ) ಪಂಚಮಿ

ಉತ್ತರ :

ಇ) ದ್ವಿತೀಯ

ಏಳು ವಿಭಕ್ತಿ ಪ್ರತ್ಯಯಗಳು :

ನಾಮವಾಚಕಗಳಿಗೆ ಲಿಂಗ ಮತ್ತು ವಚನ ಪ್ರತ್ಯಗಳ ಮೇಲೆ ವಿಭಕ್ತಿ ಪ್ರತ್ಯಯಗಳು ಅಂಟಿಕೊಂಡು ನಾಮ ಪದಗಳಾಗುತ್ತವೆ.

1) ಪ್ರಥಮಾ – ಉ

2) ದ್ವಿತೀಯಾ – ಅನ್ನು

3) ತೃತೀಯಾ – ಇಂದ

ಇಲ್ಲಿ 'ಕರಣ' ದ ವಾಕ್ಯ ಸಂಬಂಧ ಇರುತ್ತದೆ. ಉದಾಹರಣೆಗೆ : ಕೋತಿ ಮರದಿಂದ ಜಿಗಿಯಿತು.

4) ಚತುರ್ಥಿ – – ಗೆ, ಇಗೆ, ಕ್ಕೆ, ಅಕ್ಕೆ

5) ಪಂಚಮೀ – ಇಂದ (ದೆಸೆಯಿಂದ)

ಇಲ್ಲಿ 'ಅಪಾದನ' ದ ವಾಕ್ಯ ಸಂಬಂಧ ಇರುತ್ತದೆ. ಉದಾಹರಣೆಗೆ : ಹಣ್ಣು ಮರದಿಂದ (ಮರದ ದೆಸೆಯಿಂದ) ಬಿದ್ದಿತು.

6) ಷಷ್ಠೀ – ಅ

7) ಸಪ್ತಮೀ – ಅಲ್ಲಿ

13) ಅಪ್ಪ ಕೆಲಸ ಮಾಡುತ್ತಾನೆ – ಈ ವಾಕ್ಯದಲ್ಲಿರುವ ಅನ್ಯ ಲಿಂಗ ರೂಪ

ಅ) ಅಮ್ಮ ಕೆಲಸ ಮಾಡುತ್ತಾಳೆ. ಆ) ಅಣ್ಣ ಕೆಲಸ ಮಾಡುತ್ತಾನೆ.

ಇ) ಅಕ್ಕ ಕೆಲಸ ಮಾಡುತ್ತಾಳೆ. ಈ) ತಮ್ಮ ಕೆಲಸ ಮಾಡುತ್ತಾನೆ.

ಉತ್ತರ :

ಅ) ಅಮ್ಮ ಕೆಲಸ ಮಾಡುತ್ತಾಳೆ.

14) ದಿನಾಲೂ ಬೆಳಗ್ಗೆ ಮಖ ತೋಳೀಬೇಕು – ಈ ವಾಕ್ಯದ ಸರಿಯಾದ ಗ್ರಾಂಥಿಕ ರೂಪ

ಅ) ದಿನಾಲೂ ಬೆಳಗ್ಗೆ ಮುಖ ತೊಳೆಯಬೇಕು.

ಆ) ದಿನವೂ ಬೆಳಗ್ಗೆ ಮುಖ ತೊಳೆಯಲೇಬೇಕು.

ಇ) ದಿನವೂ ಬೆಳಗ್ಗೆ ಮುಖ ತೊಳೆಯಬೇಕು.

ಈ) ದಿನವೂ ಬೆಳಗ್ಗೆ ಮುಖ ತೋಳೀಬೇಕು.

ಉತ್ತರ :

ಇ) ದಿನವೂ ಬೆಳಗ್ಗೆ ಮುಖ ತೊಳೆಯಬೇಕು.

15) ಗೌರವಿಸುವವರು, ಗುರುಗಳನ್ನು, ಸಜ್ಜನರು ನಿಜವಾದ – ಈ ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿದಾಗ ಆಗುವ ವಾಕ್ಯ :

ಅ) ಸಜ್ಜನರು ಗೌರವಿಸುವವರು ನಿಜವಾದ ಗುರುಗಳನ್ನು

ಆ) ಗುರುಗಳನ್ನು ನಿಜವಾದ ಸಜ್ಜನರು ಗೌರವಿಸುವವರು

ಇ) ಗುರುಗಳನ್ನು ಗೌರವಿಸುವವರು ನಿಜವಾದ ಸಜ್ಜನರು

ಈ) ಸಜ್ಜನರು ನಿಜವಾದ ಗುರುಗಳನ್ನು ಗೌರವಿಸುವರು

ಉತ್ತರ :

ಆ) ಗುರುಗಳನ್ನು ನಿಜವಾದ ಸಜ್ಜನರು ಗೌರವಿಸುವವರು.

16) ಕಂಪ್ಯೂಟರ್ ಇದು ಒಂದು

ಅ) ನೋಡುವ ಸಾಧನ ಆ) ಕೇಳುವ ಸಾಧನ

ಇ) ಚಲಿಸುವ ಸಾಧನ ಈ) ನೋಡುವ ಮತ್ತು ಕೇಳುವ ಸಾಧನ

ಉತ್ತರ :

ಈ) ನೋಡುವ ಮತ್ತು ಕೇಳುವ ಸಾಧನ.

17) ಅಯ್ಯೋ! ನಿನಗೆ ತಿಳಿದಿಲ್ಲವೆ? ರಾಜು ಮತ್ತು ರಾಧ ಇಬ್ಬರೂ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಈ ವಾಕ್ಯದಲ್ಲಿರುವ ಲೇಖನ ಚಿಹ್ನೆಗಳು (ಕ್ರಮ) –

ಅ) ಭಾವಸೂಚಕ, ಪೂರ್ಣವಿರಾಮ, ಪ್ರಶ್ನಾರ್ಥಕ

ಆ) ಪ್ರಶ್ನಾರ್ಥಕ, ಭಾವಸೂಚಕ, ಪೂರ್ಣವಿರಾಮ

ಇ) ಭಾವಸೂಚಕ, ಪ್ರಶ್ನಾರ್ಥಕ, ಪೂರ್ಣವಿರಾಮ

ಈ) ಭಾವಸೂಚಕ, ಪೂರ್ಣವಿರಾಮ, ಪ್ರಶ್ನಾರ್ಥಕ

ಉತ್ತರ :

ಇ) ಭಾವಸೂಚಕ, ಪ್ರಶ್ನಾರ್ಥಕ, ಪೂರ್ಣವಿರಾಮ

18) 'ಮೊಲವು ಸಭೆಗೆ ಸಿದ್ಧವಾಗಿ ಬಂದಿತ್ತು' ಈ ವಾಕ್ಯದ ವಚನ ಬದಲಿಸಿ ಬರೆಯಿರಿ.

ಅ) ಮೊಲಗಳು ಸಭೆಗೆ ಸಿದ್ಧವಾಗಿ ಬಂದಿತ್ತು.

ಆ) ಮೊಲಗಳು ಸಭೆಗೆ ಸಿದ್ಧವಾಗಿ ಬಂದಿದ್ದವು.

ಇ) ಮೊಲ ಸಭೆಗೆ ಸಿದ್ಧವಾಗಿ ಬಂದಿದ್ದವು.

ಈ) ಮೊಲಗಳು ಸಭೆಗಳಿಗೆ ಸಿದ್ಧವಾಗಿ ಬಂದಿದ್ದವು.

ಉತ್ತರ :

ಆ) ಮೊಲಗಳು ಸಭೆಗೆ ಸಿದ್ಧವಾಗಿ ಬಂದಿದ್ದವು.

19) '<u>ವಿದ್ಯಾಭ್ಯಾಸ</u> ಭವಿಷ್ಯದ ಅಡಿಗಲ್ಲು' – ಈ ವಾಕ್ಯದಲ್ಲಿ ಗೆರೆ ಎಳೆದ ಪದ ಈ ಸಂಧಿಯಾಗಿದೆ–

ಅ) ಗುಣಸಂಧಿ ಆ) ಯಣ್‌ಸಂಧಿ

ಇ) ಜಸ್ತ್ವಸಂಧಿ ಈ) ಸವರ್ಣದೀರ್ಘ ಸಂಧಿ

ಉತ್ತರ :

ಈ) ಸವರ್ಣದೀರ್ಘ ಸಂಧಿ.

ಸವರ್ಣ ಸ್ವರಗಳು (ಅ ಆ, ಇ ಈ, ಉ ಊ) ಒಂದಕ್ಕೊಂದು ಸೇರಿ ಆ ಎರಡೂ ಸ್ವರಗಳಿಗೂ ಒಂದೇ ಒಂದು ದೀರ್ಘವಾದ ಸವರ್ಣ ಬರುವುದು ಸವರ್ಣ ದೀರ್ಘ ಸಂಧಿ.

ಉದಾಹರಣೆಗಳು :

ಶುಭ + ಆಶಯ = ಶುಭಾಶಯ

ಸಮರ + ಅಭ್ಯಾಸ = ಸಮರಾಭ್ಯಾಸ

ವಿದ್ಯಾ + ಅಭ್ಯಾಸ = ವಿದ್ಯಾಭ್ಯಾಸ

ಕವಿ + ಇಂದ್ರ = ಕವೀಂದ್ರ

ಗೌರಿ + ಈಶ = ಗೌರೀಶ

ಗರು + ಉಪದೇಶ = ಗುರೂಪದೇಶ

20) 'ಬಿಳಿಯ ಬಟ್ಟೆ ಶಾಂತಿಯ ಸಂಕೇತವಾಗಿದೆ.' ಈ ವಾಕ್ಯದಲ್ಲಿರುವ ಗುಣವಾಚಕ ಪದವಿದು –

ಅ) ಬಟ್ಟೆ ಆ) ಬಿಳಿಯ

ಇ) ಶಾಂತಿ ಈ) ಸಂಕೇತ

ಉತ್ತರ :

ಆ) ಬಿಳಿಯ.

ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ , ಸಾಮಾನ್ಯವಾಗಿ ವಿಶೇಷಣಗಳಾಗಿ ಬರುವಂಥವು ಗುಣವಾಚಕಗಳು.

ಉದಾಹರಣೆಗೆ : ದೊಡ್ಡ, ಚಿಕ್ಕ, ಒಳ್ಳೆಯ, ಬಿಳಿಯ ಇತ್ಯಾದಿ.

ಗಮನಿಸಿ : 'ಬಿಳಿಯರು' ಎನ್ನುವುದು ನಾಮವಾಚಕ ಪದ.

21) 'ಸಾವಿರಾರು ಜನ ಪ್ರವಾಸಿಗರು ದಿನವೂ ಭಾರತಕ್ಕೆ ಬರುತ್ತಾರೆ.' – ಈ ವಾಕ್ಯದಲ್ಲಿ ಇರುವ ಸಂಖ್ಯಾವಾಚಕ ಪದವಿದು–

ಅ) ಜನ ಆ) ಸಾವಿರಾರು

ಇ) ಪ್ರಾವಾಸಿಗರು ಈ) ಭಾರತ

ಉತ್ತರ :

ಅ) ಸಾವಿರಾರು

22) 'ನನಗೆ ನಾಟಕ ಸಾಹಿತ್ಯದಲ್ಲಿ ತುಂಬಾ ಆಸಕ್ತಿ ಇದೆ.' ಈ ವಾಕ್ಯದಲ್ಲಿರುವ ಸರ್ವನಾಮ ಪದವಿದು–

ಅ) ನಾಟಕ ಆ) ನನಗೆ

ಇ) ಆಸಕ್ತಿ ಈ) ಸಾಹಿತ್ಯ

ಉತ್ತರ :

ಆ) ನನಗೆ.

ನಾಮ ಪದಗಳ ಸ್ಥಾನದಲ್ಲಿ ಅವುಗಳಿಗೆ ಪ್ರತಿನಿಧಿಯಂತೆ ವರ್ತಿಸುವ ಪದಗಳು ಸರ್ವನಾಮಗಳು.

ಇವುಗಳಲ್ಲಿ ಪ್ರಮುಖ ವಿಭಾಗಗಳು –

ಪ್ರಥಮ ಪುರುಷ ಸರ್ವನಾಮಗಳು : ಉದಾ – ಅವನು, ಅವಳು, ಅದು, ಅವರು, ಅವು

ಮಧ್ಯಮ ಪುರುಷ ಸರ್ವನಾಮಗಳು : ಉದಾಹರಣೆಗೆ : ನೀನು, ನೀವು

ಉತ್ತಮ ಪುರುಷ ಸರ್ವನಾಮಗಳು : ಉದಾಹರಣೆಗೆ – ನಾನು, ನಾವು

ಉಪ ವಿಭಾಗಗಳು :

ಪುರುಷ ವಾಚಕ ಸರ್ವನಾಮಗಳು, ಆತ್ಮಾರ್ಥಕ ಸರ್ವನಾಮಗಳು (ಉದಾ : ತಾನು, ತಾವು); ಪ್ರಶ್ನಾರ್ಥಕ ಸರ್ವನಾಮಗಳು (ಉದಾ : ಯಾರು,ಯಾವನು, ಯಾವಳು, ಯಾಯಾವುದು, ಯಾವುವು); ಕಾಲವಾಚಕ ಸರ್ವ ನಾಮಗಳು (ಉದಾ : ಇಂದು, ನಾಳೆ, ಬೆಳಗ್ಗೆ, ರಾತ್ರಿ ಇತ್ಯಾದಿ); ದಿಗ್ವಾಚಕ ಸರ್ವನಾಮಗಳು (ಉದಾ : ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮೇಲೆ, ಕೆಳಗೆ ಇತ್ಯಾದಿ).

23) ಅ,ಕ,ಯ,ಅಂ – ಈ ಅಕ್ಷರಗಳಲ್ಲಿ ಅವರ್ಗೀಯ ವ್ಯಂಜನ –

ಅ) ಅ ಆ) ಅಂ

ಇ) ಕ ಈ) ಯ

ಉತ್ತರ :

ಈ) ಯ

ವಿವರಣೆ : ಒಂದು ಗುಂಪಿಗೆ ಸೇರಲಾರದ, ವಿವಿಧ ಅಕ್ಷರೋತ್ಪತ್ತಿ ಸ್ಥಾನಗಳಲ್ಲಿ ಹುಟ್ಟುವ ಬಿಡಿ ವ್ಯಂಜನಗಳು **ಅವರ್ಗೀಯ** ವ್ಯಂಜನಗಳು. ಇವು –

ಯ, ರ, ಲ, ವ, ಶ, ಷ, ಸ, ಹ, ಳ

24) ಮುಖ್ಯೋಪಾಧ್ಯಾಯರಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

ಅ) ಮಾತೃಶ್ರೀ ಆ) ತೀರ್ಥರೂಪ

ಇ) ಮಾನ್ಯರೇ ಈ) ಚಿರಂಜೀವಿ

ಉತ್ತರ :

ಇ) ಮಾನ್ಯರೇ

25) ಬಡವರಿಗೆ ಸಹಾಯ ಮಾಡಬೇಕು ಎಂಬ ಪರಿಜ್ಞಾನವಿಲ್ಲದೆ ಕೆಲವರು ಕಣ್ಣಿದ್ದೂ <u>ಕುರುಡ</u>ರಂತೆ ವರ್ತಿಸುತ್ತಾರೆ. ಈ ವಾಕ್ಯದಲ್ಲಿ ಗೆರೆ ಎಳೆದ ಪದವು ಈ ನಾಮಪದಕ್ಕೆ ಸೇರಿದೆ –

ಅ) ರೂಢನಾಮ ಆ) ಅಂಕಿತನಾಮ

ಇ) ಅನ್ವರ್ಥನಾಮ ಈ) ಸರ್ವನಾಮ

ಉತ್ತರ :

ಇ) ಅನ್ವರ್ಥನಾಮ

ವಿವರಣೆ :

ಗುಣ ಸ್ವಭಾವ ಇತ್ಯಾದಿ ವಿಶೇಷ ಅರ್ಥಗಳನ್ನು ತಿಳಿಸುವ ಹೆಸರುಗಳು ಅನ್ವರ್ಥ ನಾಮ ಪದಗಳು. ಉದಾಹರಣೆಗೆ ; ಚೆಲುವ, ದಡ್ಡ, ರೋಗಿ, ಒರಟ, ಸುಂದರಿ ಇತ್ಯಾದಿ.

26) ಕುವೆಂಪುರವರು ಕನ್ನಡದ ರಾಷ್ಟ್ರಕವಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ವಾಕ್ಯದಲ್ಲಿರುವ ,ಕವಿ ಎಂಬ ಪದಕ್ಕೆ ಇದು ಸ್ತ್ರೀಲಿಂಗ ರೂಪವಾಗಿದೆ –

ಅ) ಕವಯಿತ್ರಿ ಆ) ಕವಿತ್ರಿ

ಇ) ಕವಿಯತ್ರಿ ಈ) ಕವಿಯಿತ್ರಿ

ಉತ್ತರ : ಅ) ಕವಯಿತ್ರಿ

27) ಮೈಸೂರು ಅರಮನೆ ಜಗತ್ಪ್ರಸಿದ್ಧವಾಗಿದೆ. ಈ ವಾಕ್ಯದಲ್ಲಿರುವ ಸಮಾಸ ಪದವಿದು–

ಅ) ಮೈಸೂರು ಆ) ಅರಮನೆ

ಇ) ಜಗತ್ತು ಈ) ಪ್ರಸಿದ್ಧ

ಉತ್ತರ : ಆ) ಅರಮನೆ.

ವಿವರಣೆ :

ಎರಡು ಅಥವಾ ಹೆಚ್ಚಿನ ಪದಗಳು ಸೇರಿ ಒಂದು ಶಬ್ದವಾಗುವುದು ಸಮಾಸ. ಸಮಾಸದಲ್ಲಿ ಉತ್ತರ ಪದ(ನಂತರದ)ದ ಅರ್ಥ ಪ್ರಧಾನವಾಗಿರುವ ಮುಖ್ಯ ಸಮಾಸಗಳು –

ತತ್ಪುರುಷ ಸಮಾಸ : ಎರಡು ನಾಂ ಪದಗಳು ಸೇರಿ ಸಮಾಸ ಆಗುವಾಗ ಉತ್ತರ ಪದದ ಅರ್ಥ ಪ್ರಧಾನವಾಗುತ್ತದೆ.

ಉದಾಹರಣೆಗೆ :

ಮಲ್ಲಿಗೆಯ ಹೂ = ಮಲ್ಲಿಗೆಹೂ.

ಹರಟೆಯಲ್ಲಿ ಮಲ್ಲ = ಹರಟೆ ಮಲ್ಲ.

ಅರಸನ ಮನೆ = ಅರಮನೆ

ಕರ್ಮಧಾರಯ ಸಮಾಸ : ಒಂದೇ ವಿಭಕ್ತಿಯಲ್ಲಿರುವ ವಿಶೇಷಣ ವಿಶೇಷ್ಯಗಳಿಗೆ ಸಮಾಸವಾಗಿ, ವಿಶೇಷ್ಯದ ಅರ್ಥ ಪ್ರಧಾನವಾಗಿರುತ್ತದೆ.

ಉದಾಹರಣೆಗೆ :

ಹಿರಿದು ದಾರಿ = ಹೆದ್ದಾರಿ

ಚಿಕ್ಕವನು ಮಗ = ಚಿಕ್ಕಮಗ

ಫಲವೇ ಆಹಾರ = ಫಲಾಹಾರ

ದ್ವಿಗು ಸಮಾಸ : ಸಂಖ್ಯಾಚಕವು ಪೂರ್ವ ಪದ ವಾಗಿರುವ ಕರ್ಮಧಾರಯವೇ ದ್ವಿಗು ಸಮಾಸ.

ಉದಾಹರಣೆಗೆ :

ಪಂಚಸಂಖ್ಯೆಯದು ಇಂದ್ರಿಯ = ಪಂಚೇಂದ್ರಿಯ

ಒಂದು ಕಣ್ಣು = ಒಕ್ಕಣ್ಣು

ಎರಡು ಮಡಿ = ಇಮ್ಮಡಿ

ಸಪ್ತಸಂಖ್ಯೆಯದು ಸ್ವರ = ಸಪ್ತಸ್ವರ

ಅಂಶಿ ಸಮಾಸ : ಸಮಾಸದಲ್ಲಿ ಪೂರ್ವ ಪದ (ಮೊದಲಿನ) ಅರ್ಥ ಪ್ರಧಾನವಾಗಿರುವ ಸಮಾಸಗಳಲ್ಲಿ ಮುಖ್ಯವಾದುದು – ಅಂಶಿ ಸಮಾಸ.

ಅಂಶಿ ಸಮಾಸವೆಂದರೆ ಪೂರ್ವ ಪದ ವಸ್ತುವನ್ನು ಉತ್ತರ ಪದ ಅದರ ಅಂಶವನ್ನು ತಿಳಿಸುವ ಸಮಾಸ.

ಉದಾಹರಣೆಗೆ :

ರಾತ್ರಿಯ ಮಧ್ಯ = ಮಧ್ಯ ರಾತ್ರಿ.

ಕೈಯ ಮುಂದು = ಮುಂಗೈ.

ಕಾರ ಹಿಂದು = ಹಿಂಗಾರು

ದ್ವಂದ್ವ ಸಮಾಸ : ಇಲ್ಲಿ ಪೂರ್ವ ಪದ, ಉತ್ತರಪದಗಳೆಲ್ಲವೂ ಪ್ರಧಾನವಾಗಿರುತ್ತವೆ.

ಉದಾಹರಣೆಗೆ :

ನಡೆಯೂ ನುಡಿಯೂ = ನಡೆನುಡಿ

ಕೈಯೂ ಕಾಲೂ = ಕೈಕಾಲು

ಮರವೂ ಗಿಡವೂ ಬಳ್ಳಿಯೂ = ಮರ ಗಿಡ ಬಳ್ಳಿ

ಬಹುವ್ರೀಹಿ ಸಮಾಸ : ಪೂರ್ವ ಮತ್ತು ಉತ್ತರ ಎರಡೂ ಪದಗಳ ಅರ್ಥ ಮುಖ್ಯವಾಗದೇ ಬೇರೆಯದೇ ಅರ್ಥ ಕೊಡುವ ಸಮಾಸ ಬಹುವ್ರೀಹಿ ಸಮಾಸ.

ಉದಾಹರಣೆಗೆ : ಹಣೆಯಲ್ಲಿ ಕಣ್ಣು ಯಾರಿಗುಂಟೊ ಅವನು = ಹಣೆಗಣ್ಣ ; ಚಂದ್ರನಂತೆ ಮುಖವು ಯಾರಿಗಿದೆಯೋ ಅವಳು = ಚಂದ್ರಮುಖಿ

ಕನ್ನಡದಲ್ಲಿರುವ ಇತರ ಕೆಲವು ಸಮಾಸಗಳು –

ಗಮಕ ಸಮಾಸ– ಇಲ್ಲಿ ಪೂರ್ವಪದ ಸರ್ವನಾಮ, ಗುಣವಾಚಕ, ಕೃದಂತಗಳನ್ನು ಹೊಂದಿರುತ್ತದೆ (ಉದಾಹರಣೆಗೆ : ಯಾವುದು ಮರ = ಯಾವ ಮರ, ಬಿಸಿಯಾದುದು ಹಾಲು = ಬಿಸಿಯ ಹಾಲು, ಇಪ್ಪತ್ತರ ಆರು = ಇಪ್ಪತ್ತಾರು ಇತ್ಯಾದಿ);

ಕ್ರಿಯಾ ಸಮಾಸ – ಇಲ್ಲಿ ಪೂರ್ವ ಪದ ನಾಮ ವಾಚಕವಾಗಿದ್ದು, ಉತ್ತರ ಪದ ಕ್ರಿಯಾ ವಾಚಕವಾಗಿರುತ್ತದೆ (ಉದಾಹರಣೆಗೆ – ಕಣ್ಣನ್ನು ತೆರೆ = ಕಣ್ದೆರೆ, ತಲೆಯನ್ನು ಬಾಗು = ತಲೆಬಾಗು ಇತ್ಯಾದಿ).

ಒಂದು ದೊಷಪೂರಿತ ಸಮಾಸ :

ಅರಿ ಸಮಾಸ – ಸಮಾಸಗಳಲ್ಲಿ ದೇಶ್ಯ ಮತ್ತು ತದ್ಭವಗಳೊಂದಿಗೆ ಸಂಸ್ಕೃತ ಶಬ್ದಗಳು ಸೇರಿ ಆಗುವ ಅಹಿತಕರ ಸಮಾಸ ಇದು.

ಉದಾಹರಣೆಗೆ : ಅರಸುಕುಮಾರ, ಕಮಲಗಣ್ಣು, ಮನೆಕಾರ್ಯ

28) 'ಹಿರಿಯರೊಡನೆ ಸೌಜನ್ಯದಿಂದ ವರ್ತಿಸಬೇಕು' – ಈ ವಾಕ್ಯದಲ್ಲಿನ 'ಸೌಜನ್ಯ' ಪದದ ವಿರುದ್ಧ ಪದ :

ಅ) ಅನನ್ಯ ಆ) ನಿರ್ಜನ್ಯ

ಇ) ದೌರ್ಜನ್ಯ ಈ) ವಿರ್ಜನ್ಯ

ಉತ್ತರ :

ಇ) ದೌರ್ಜನ್ಯ

29) ರಾಜು ಚೆನ್ನಾಗಿ ಅಭ್ಯಾಸ <u>ಮಾಡಲಿಲ್ಲ</u> . ಗೆರೆ ಎಳೆದ ಪದ ಸೂಚಿಸುವ ವ್ಯಾಕರಣಾಂಶ –

ಅ) ವಿಧ್ಯರ್ಥಕ ಆ) ಸಂಭವನಾರ್ಥಕ

ಇ) ಸಮಾನಾರ್ಥಕ ಈ) ನಿಷೇಧಾರ್ಥಕ

ಉತ್ತರ :

ಈ) ನಿಷೇಧಾರ್ಥಕ

30) 'ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ' ಎಂಬ ಮಾತಿನಲ್ಲಿರುವ ಮಹತ್ವ

ಅ) ಬಚ್ಚಿಡುವುದು ಆ) ಸಹಾಯದ ಭಾವನೆ

ಇ) ಕೆಟ್ಟ ಭಾವನೆ ಈ) ದುಷ್ಟ ಭಾವನೆ

ಉತ್ತರ :

ಆ) ಸಹಾಯದ ಭಾವನೆ

ಹೆಚ್ಚುವರಿ ಮಾದರಿ ಪ್ರಶ್ನೆ ಪತ್ರಿಕೆ–2
ವಿಷಯ :
ಮಗುವಿನ ಬೆಳವಣಿಗೆ ಮತ್ತು ಬೋಧನಾ ವಿಧಾನ

ಸೂಚನೆಗಳು:

1. ಈ ಪ್ರಶ್ನೆ ಪತ್ರಿಕೆಯು 30 ಬಹು ಅಂಶ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.

1. ಯಾವ ಪಂಥವು ಮನುಷ್ಯನ ವರ್ತನೆಯಲ್ಲಿ 'ನರವ್ಯೂಹ'ವು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಪ್ರತಿಪಾದಿಸಿದೆ?

(1) ವರ್ತನಾವಾದ (2) ಸಂರಚನಾ ವಾದ

(3) ಗೆಸ್ಟಾಲ್ಟ್ ಪಂಥ (4) ಮನೋವಿಶ್ಲೇಷಣಾ ಪಂಥ

2. ಸೋಲ್ (Soul)ಎಂಬ ಪದವು ಗ್ರೀಕನ ಯಾವ ಪದದಿಂದ ವ್ಯುತ್ಪತ್ತಿ ಪಡೆದಿದೆ?

(1) ಸೈಕೆ (2) ಸೋಲಸ್

(3) ಸೊಸೈಟಿಸ್ (4) ಯಾವೂದೂ ಅಲ್ಲ

3. ಈ ಕೆಳಗಿನವರಲ್ಲಿ ಯಾರನ್ನು ಮನೋವಿಜ್ಞಾನದ ಪಿತಾಮಹ ಎಂದು ಭಾವಿಸಲಾಗಿದೆ?

(1) ವಿಲಿಯಂ ವ್ಯೂಂಟ್ (2) ಸಿಗ್ಮಂಡ್ ಫ್ರಾಯ್ಡ್

(3) ಜೆ.ಬಿ. ವ್ಯಾಟ್ಸನ್ (4) ಕಾರ್ಲ್‌ಯಾಂಗ್

4. ಜಾನ ಡ್ಯೂಯಿ ಯಾವ ಪಂಥಕ್ಕೆ ಸೇರಿದ ಮನೋವಿಜ್ಞಾನಿಯಾಗಿದ್ದಾರೆ?

(1) ಗೆಸ್ಟಾಲ್ಟ್ (2) ಕಾರ್ಯಾತ್ಮಕ ಸಿದ್ಧಾಂತ

(3) ವರ್ತನಾವಾದಿ (4) ಸಂರಚನಾವಾದ

5. ಕಲಿಕೆಯ ವಕ್ರರೇಖೆಯಲ್ಲಿ 'ಸಮತಲ ಹಂತ' ಸೂಚಿಸುವುದು

(1) ನಿಧಾನ ಕಲಿಕೆಯನ್ನು (2) ಶೀಘ್ರ ಕಲಿಕೆಯನ್ನು

(3) ಸ್ಥಗಿತ ಕಲಿಕೆಯನ್ನು (4) ಸಾಧಾರಣ ಕಲಿಕೆಯನ್ನು

6. ದಣಿವು ಏನನ್ನು ಸೂಚಿಸುತ್ತದೆಯೆಂದರೆ?

(1) ದೈಹಿಕ ಶಕ್ತಿಯ ಕ್ಷೀಣತೆಯನ್ನು

(2) ಮಾನಸಿಕ ಆಯಾಸವನ್ನು

(3) ಆಸಕ್ತಿ ಕೊರತೆಯನ್ನು

(4) ಅಭಿಪ್ರೇರಣೆಯ ಕೊರತೆಯನ್ನು

7. ಅಂತಿಮ ಪರೀಕ್ಷೆಯ ಅಂಕಗಳು ಯಾವುದನ್ನು ಸೂಚಿಸುತ್ತವೆ?

(1) ಸಾಧನೆ (2) ಸ್ಮರಣ ಸಾಮರ್ಥ್ಯ

(3) ಬುದ್ಧಿವಂತಿಕೆ (4) ಸೃಜನಶೀಲತೆ

8. 'ಹತಾಶೆ' ಗೆ ಕಾರಣ

(1) ನಿರೂಪಿತ ಗುರಿ (2) ಉತ್ತೇಜನಗಳು

(3) ಅಡೆತಡೆಗಳು (4) ಆಕ್ರಮಣಕಾರಿ ಪ್ರವೃತ್ತಿ

9. ಶೈಕ್ಷಣಿಕ ಮನೋವಿಜ್ಞಾನವು ಏನನ್ನು ಅಧ್ಯಯನ ಮಾಡುತ್ತದೆ ಎಂದರೆ–

(1) ಆತ್ಮ (2) ಮನಸ್ಸು
(3) ವರ್ತನೆ (4) ಪ್ರಜ್ಞೆ

10. ಸಾಮಾನ್ಯ ಸಂಭಾವ್ಯ ರೇಖೆ ಇರುವ ಆಕಾರ–
(1) ಶಂಖಾಕಾರ (2) ಗೋಳಾಕಾರ
(3) ಘಂಟಾಕಾರ (4) ಅಂಡಾಕಾರ

11. ಮಗುವಿನ ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುವುದು ಯಾವುದು?
(1) ಉಪದೇಶ ಮತ್ತು ಶಿಸ್ತು
(2) ನಿಂದನೆ ಮತ್ತು ಶಿಕ್ಷೆ
(3) ಅತಿಪ್ರೀತಿ ಮತ್ತು ಮಮತೆ
(4) ಶಿಸ್ತು ಮತ್ತು ಶಿಕ್ಷೆ

12. ಸಾಮಾನ್ಯವಾಗಿ ಗರಿಷ್ಠ ಸಾಧನೆಯಾಗಬೇಕಾದರೆ ಒತ್ತಡ ಮತ್ತು ಆತಂಕವು–
(1) ಅತಿ ಹೆಚ್ಚಿರಬೇಕು
(2) ಶೂನ್ಯವಾಗಿರಬೇಕು
(3) ಸಾಧಾರಣವಾಗಿರಬೇಕು
(4) ಅತಿ ಕಡಿಮೆ ಇರಬೇಕು

13. ಮಾನಸಿಕ ವಯಸ್ಸು 16 ವರ್ಷಗಳಿದ್ದು ಬೌದ್ಧಿಕ ವಯಸ್ಸು 14 ವರ್ಷವಾಗಿರುವ ವಿದ್ಯಾರ್ಥಿಯ ಬುದ್ಧಿಶಕ್ತಿಯ ಗುಣಾಂಕವು (ಐಕ್ಯೂ) ಎಷ್ಟಾಗಿರುತ್ತದೆ?
(1) 88 (2) 114
(3) 224 (4) 200

14. ಬುದ್ಧಿಶಕ್ತಿಯ ಬೆಳವಣಿಗೆಯ ಪ್ರಮಾಣವು ಅತ್ಯಂತ ವೇಗವಾಗಿರುವ ಹಂತ ಯಾವುದು?
(1) ಶೈಶವಾವಸ್ಥೆ (2) ಪ್ರೌಢಾವಸ್ಥೆ
(3) ಕಿಶೋರಾವಸ್ಥೆ (4) ಬಾಲ್ಯಾವಸ್ಥೆ

15. 'ಪಾಪ್ ಲೋಪ್' ನ ಪ್ರಯೋಗದಲ್ಲಿ ಗಂಟೆಯ ಶಬ್ದಕ್ಕೆ ನಾಯಿಯಿಂದ ಬರುವ ಪ್ರತಿಕ್ರಿಯೆಯು–
(1) ಅಂತಃ ಪ್ರೇರಣೆ (2) ಸ್ವಾಭಾವಿಕ
(3) ಅನುಬಂಧಿತ (4) ತತ್‌ಕ್ಷಣ

16. ಒಂದು ಸಮೂಹದ ವ್ಯಕ್ತಿಗಳ ಪರಸ್ಪರ ಸಂಬಂಧವನ್ನು ಅಧ್ಯಯನ ಮಾಡುವ ತಾಂತ್ರಿಕತೆ?
(1) ಮನೋರೋಗಾಧ್ಯಯನ (2) ಸಮಾಜ ಮಿತಿ
(3) ವ್ಯಕ್ತಿ ಅಧ್ಯಯನ (4) ಸಲಹೆ

17. ಯಶಸ್ಸಿಗೆ ಯಶಸ್ಸೆ ಉತ್ತರಾಧಿಕಾರಿ ಈ ಹೇಳಿಕೆಯನ್ನು ವಿವರಿಸುವ ನಿಯಮ ಯಾವುದು?
(1) ಒಂದೇ ಎಂಬ ಭಾವನೆಯ ನಿಯಮ
(2) ಪರಿಣಾಮತತ್ವ ನಿಯಮ
(3) ಸಿದ್ಧತಾ ನಿಯಮ
(4) ಅಭ್ಯಾಸ ನಿಯಮ

18. ಒಂದು ಪಂದ್ಯದಲ್ಲಿ ಗುಂಪು ಒಂದಾಗುವಿಕೆ ಈ ಕೆಳಗಿನ ಯಾವುದಕ್ಕೆ ಸಹಾಯವಾಗುತ್ತದೆ?
(1) ತಂಡದ ಜಯಕ್ಕೆ (2) ಮುಂದಾಳತ್ವಕ್ಕೆ
(3) ಆಕ್ರಮಣ ಮನೋಭಾವಕ್ಕೆ (4) ಉದ್ವೇಗಕ್ಕೆ

19. ಒಂದು ತರಗತಿಯಲ್ಲಿ ವೈವಿಧ್ಯಮಯವಾದ ಉದ್ದೀಪನಗಳು–
(1) ವಿದ್ಯಾರ್ಥಿಗಳನ್ನು ಅಭಿಪ್ರೇರಣೆಗೊಳಿಸುತ್ತದೆ
(2) ಆಸಕ್ತಿಯನ್ನು ಮೂಡಿಸುತ್ತದೆ
(3) ಅವಧಾನವನ್ನು ಗಳಿಸುತ್ತದೆ
(4) ವಿವಿಧ ಅನುಭವಗಳನ್ನು ಒದಗಿಸುತ್ತದೆ

20. ಒಂದು ಕೌಶಲದ ಹೆಚ್ಚು ಉಳಿಕೆಯು ಸಾಧ್ಯವಾಗುವದು, ಕಲಿಕೆಯು
(1) ಸುಲಭವಾದಾಗ
(2) ಕ್ಲಿಷ್ಟವಾದಾಗ
(3) ಅತಿಯಾದ ಕಲಿಕೆಯಾದಾಗ
(4) ಎಣಿಕೆಯಿಂದಾದಾಗ

21. ಯಾವ ಪರೀಕ್ಷೆಯ ನಿರ್ವಹಣೆಯಿಂದ ಒಬ್ಬ ವ್ಯಕ್ತಿಯ ಒಂದು ವೃತ್ತಿಯಲ್ಲಿ ಯಶಸ್ಸಿನ ಸಂಭಾವ್ಯತೆಯನ್ನು ನಿರ್ಧರಿಸಬಹುದು?
(1) ವ್ಯಕ್ತಿತ್ವ ಪರೀಕ್ಷೆ (2) ಸಾಧನಾ ಪರೀಕ್ಷೆ
(3) ಬುದ್ಧಿ ಶಕ್ತಿ ಪರೀಕ್ಷೆ (4) ಅಭಿಕ್ಷಮತೆ ಪರೀಕ್ಷೆ

22. ಈ ಕೆಳಗಿನ ಪರೀಕ್ಷೆಯು ವ್ಯಕ್ತಿತ್ವದ ಹಲವಾರು ಅಭಿರುಚಿಗಳನ್ನು ಮಾಪನ ಮಾಡುತ್ತದೆ.
(1) ಆರ್.ಪಿ.ಎಮ್ (2) ಎಚ್.ಎಸ್.ಪಿ.ಕ್ಯೂ
(3) ಎಸ್.ವಿ.ಐ.ಬಿ. (4) ಡಿ.ಎ.ಟಿ.

23. ಅನುವಂಶೀಯ ಗುಣಲಕ್ಷಣಗಳ ನೈಜ ವಾಹಕಗಳೆಂದರೆ
(1) ವರ್ಣತಂತುಗಳು
(2) ಜೀನುಗಳು
(3) ಜೀವ ಕೋಶಗಳಲ್ಲಿಯ ಕೋಶ ಕೇಂದ್ರ
(4) ಜೀವ ಕೋಶಗಳಲ್ಲಿಯ ಪ್ರೊಟೋಪ್ಲಾಸ್ಮ್

24. ವ್ಯಾಟ್ಸನ್‌ರವರು ಹೇಳುವಂತೆ ಮನೋವಿಜ್ಞಾನವು ಈ ಕೆಳಗಿನದರ ಅಧ್ಯಯನವಾಗಿದೆ–
(1) ಮನಸ್ಸು (2) ಆತ್ಮ
(3) ವರ್ತನೆ (4) ಪ್ರಜ್ಞಾವಸ್ಥೆ

25. ವರ್ಗಾವಣೆಯು ಯಾವಾಗಲೂ ಆ ಅವಕಾಶವನ್ನು ಅವಲಂಬಿಸಿರುತ್ತಾರೆ–
(1) ಬೋಧನೆಯ ಅನುರೂಪ (2) ಕಲಿಕೆಯ ಅನುರೂಪ
(3) ಕಲಿಯುವವರ ಪ್ರೇರಣೆ (4) ವಸ್ತುವಿನ ಸ್ವರೂಪ

26. ಸಾಮಾಜೀಕರಣವು ಸಾಂಸ್ಕೃತಿಕ ವರ್ಗಾವಣೆ ಮತ್ತು ಕೆಳಗಿನ ಯಾವುದನ್ನು ಒಳಗೊಂಡಿರುತ್ತದೆ?
(1) ಬಂಡುಕೋರತನವನ್ನು ಬೆಂಬಲಿಸದಿರುವುದು
(2) ವೈಯಕ್ತಿಕ ವ್ಯಕ್ತಿತ್ವದ ಬೆಳವಣಿಗೆ
(3) ಮಕ್ಕಳನ್ನು ಹೆಸರು ಮಾಡುವುದು
(4) ಭಾವನಾತ್ಮಕ ಬೆಂಬಲದ ಪ್ರೋತ್ಸಾಹ

27. ಕೆಳಗಿನ ಯಾವ ಹೊಂದಾಣಿಕೆ ಸರಿ?
(1) ಭೌತಿಕ ವಿಕಾಸ – ಪರಿಸರ
(2) ಸಂಜ್ಞಾನಾತ್ಮಕ ವಿಕಾಸ – ಪ್ರಬುದ್ಧತೆ
(3) ಸಾಮಾಜಿಕ ವಿಕಾಸ – ಪರಿಸರ
(4) ಭಾವನಾತ್ಮಕ ವಿಕಾಸ – ಪ್ರಬುದ್ಧತೆ

28. ಬ್ಲೂಮ್‌ನ ಟ್ಯಾಕ್ಸಾನಮಿಯು ಕೆಳಗಿನ ಯಾವುದರ ಶ್ರೇಣೀಕೃತ ಸಂಸ್ಥೆ ?
(1) ಗುರಿಗಳ ಸಾಧನೆ

(2) ಪಠ್ಯ ಕ್ರಮದ ಘೋಷಣೆ

(3) ಓದುವ ಕೌಶಲ

(4) ಸಂಜ್ಞಾನಾತ್ಮಕ ಗುರಿಗಳು

29. ಮಕ್ಕಳು ಫ್ಯಾಶನ್ ಷೋಗಳನ್ನು ನೋಡಿ, ರೂಪದರ್ಶಿಗಳನ್ನು ಅನುಕರಣೆ ಮಾಡಲು ಪ್ರಯತಿಸುತ್ತಾರೆ. ಈ ರೀತಿಯ ಅನುಕರಣೆ –

(1) ಪ್ರಾಥಮಿಕ ಪ್ರಚೋದನೆ

(2) ಮಾಧ್ಯಮಿಕ ಪ್ರಚೋದನೆ

(3) ಸಾಮಾಜಿಕ ಕಲಿಕೆ

(4) ಸಾಮಾನ್ಯೀಕರಣ

30. ಕಲಿಕಾ ನ್ಯೂನ್ಯತೆಗಳು ಕೆಳಗಿನ ಯಾವುದನ್ನು ಹೊರತುಪಡಿಸಿ ಉಳಿದವುಗಳಿಂದ ಉಂಟಾಗುಬಹುದು?

(1) ಶಿಕ್ಷಕರ ಬೋಧನಾ ರೀತಿ

(2) ಜನನಕ್ಕೆ ಮೊದಲಿನ ಮದ್ಯ ಬಳಕೆ

(3) ಮಂದಗತಿಯ ಬೌದ್ಧಿಕ ಬೆಳವಣಿಗೆ

(4) ಶಿಶು ಅವಸ್ಥೆಯಲ್ಲಿದ್ದಾಗಿನ ಮ ಎದುಳ್ಪೊರೆಯುರಿತ (ಮೆನಿಂಜೈಟಿಸ್)

ಉತ್ತರಗಳು

1-(2)	2-(1)	3-(1)	4-(2)	5-(3)
6-(2)	7-(1)	8-(1)	9-(3)	10-(3)
11-(2)	12-(3)	13-(2)	14-(4)	15-(4)
16-(2)	17-(2)	18-(1)	19-(3)	20-(3)
21-(4)	22-(4)	23-(2)	24-(3)	25-(2)
26-(2)	27-(3)	28-(4)	29-(3)	30-(1)

ಹೆಚ್ಚುವರಿ ಮಾದರಿ ಪ್ರಶ್ನೆ ಪತ್ರಿಕೆ–3
ವಿಷಯ :
ಮಗುವಿನ ಬೆಳವಣಿಗೆ ಮತ್ತು ಬೋಧನಾ ವಿಧಾನ

ಸೂಚನೆಗಳು:

1. ಈ ಪ್ರಶ್ನೆ ಪತ್ರಿಕೆಯು 30 ಬಹು ಅಂಶ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.

1. ಕಾಲ್ಪನಿಕ ಸಾಧನೆಗಳ ಮೂಲಕ ನಿರಾಶೆಗೊಂಡ ಅಭಿಲಾಷೆಗಳನ್ನು ತೃಪ್ತಿಪಡಿಸುವ ವಿಧಾನಕ್ಕೆ ಹೀಗೆನ್ನುತ್ತಾರೆ–

(1) ವಾಸ್ತವಕತೆಯನ್ನು ಮರೆಮಾಚುವುದು (2) ಭ್ರಮೆ

(3) ಅಭಿನಯಿಸುವುದು (4) ಅಲ್ಲಗಳೆಯುವುದು

2. ವರ್ತನೆಯನ್ನು ಅಧ್ಯಯನ ಮಾಡುವ, ಶೋಧಿಸಿ ಚಿಕಿತ್ಸೆ ಮಾಡುವ ಮನೋವಿಜ್ಞಾನದ ಶಾಖೆಗೆ ಹೀಗೆನ್ನುತ್ತಾರೆ–

(1) ನೈದಾನಿಕ ಮನೋವಿಜ್ಞಾನ

(2) ಬಾಲ ಮನೋವಿಜ್ಞಾನ

(3) ಅಸಾಮಾನ್ಯ ಮನೋವಿಜ್ಞಾನ

(4) ಶೈಕ್ಷಣಿಕ ಮನೋವಿಜ್ಞಾನ

3. ಮಂದಗಾಮಿ ಕಲಿಕಾರ್ಥಿಯು–

(1) ಸಾಮಾನ್ಯ ಬುದ್ಧಿಶಕ್ತಿಯನ್ನು ಹೊಂದಿರುವ ಮಗು

(2) ಸರಾಸರಿ ಬುದ್ಧಿಶಕ್ತಿಗಿಂತ ಕೆಳಮಟ್ಟದಲ್ಲಿರುವ ಮಗು

(3) ಸರಾಸರಿ ಬುದ್ಧಿಶಕ್ತಿಗಿಂತ ಮೇಲ್ಮಟ್ಟದಲ್ಲಿರುವ ಮಗು

(4) ಬುದ್ಧಿ ಶಕ್ತಿಯಲ್ಲಿ ಹಿಂದುಳಿದ ಮಗು

4. ಈ ಕೆಳಗಿನ ಪರೀಕ್ಷಣ /ಮಾಪನ/ತಪಶೀಲನ್ನು ಮೌಲ್ಯಗಳ ಅಧ್ಯಯನಕ್ಕೆ ಉಪಯೋಗಿಸಲಾಗುವುದು

(1) ವಿಭೇದಾತ್ಮಕ ಸಹಜ ಪ್ರವೃತ್ತಿ ಪರೀಕ್ಷಣ

(2) ಪ್ರಸಂಗ ಅನುಬೋಧ ಪರೀಕ್ಷಣ

(3) ಆಲ್ಪೋರ್ಟ್‌ವರ್‌ನಾನ್ ಲಿಂಡ್‌ಜೇ ಮಾಪನ

(4) ಸ್ಟ್ರಾಂಗ್ ಔದ್ಯೋಗಿಕ ಆಸಕ್ತಿ ಪರೀಕ್ಷಣ

5. ಶೈಕ್ಷಣಿಕ ಮನೋವಿಜ್ಞಾನದ ಮೂಲ (ಗುರಿಗಳನ್ನು ಸ್ಪಷ್ಟಪಡಿಸುವುದು) ಉದ್ದೇಶವು ಇದಾಗಿದೆ–

(1) ಶಾಲೆಯು ಸಾಧಿಸಬೇಕಾದ ಗುರಿಗಳನ್ನು ಸ್ಪಷ್ಟಪಡಿಸುವುದು

(2) ಈಡೇರಿಸಬೇಕಾದ ಶೈಕ್ಷಣಿಕ ಉದ್ದೇಶಗಳನ್ನು ನಿಗದಿಪಡಿಸುವುದು

(3) ಶೈಕ್ಷಣಿಕ ಉದ್ದೇಶಗಳನ್ನು ಸರಿಯಾಗಿ ವರ್ಗೀಕರಿಸುವುದು

(4) ಶೈಕ್ಷಣಿಕ ಗುರಿಗಳನ್ನು ಸಾಧಿಸಲು ಸೂಕ್ತವಾದ ಪ್ರಕ್ರಿಯೆಗಳನ್ನು ಯೋಜಿಸುವುದು

6. ಮಗುವಿನ ಮಾನಸಿಕ ಆರೋಗ್ಯದ ಮೇಲೆ ಪ್ರಭಾವ ಬೀರುವ ಏಕೈಕ ಪ್ರಮುಖ ಅಂಶ ಇದಾಗಿದೆ–

(1) ಅವನ ಶಿಕ್ಷಕರ ವೃತ್ತಿ ಸಾಮರ್ಥ್ಯ

(2) ಲಭ್ಯವಿರುವ ಮಾರ್ಗದರ್ಶನ ಸೇವೆ

(3) ಮಗುವಿನ ಆಸಕ್ತಿ ಮತ್ತು ಹೊಣೆಗಾರಿಕೆಗಳು

(4) ಮಗುವಿನ ಆರಂಭ ವರ್ಷಗಳಲ್ಲಿ ದೊರೆತ ಭಾವನಾತ್ಮಕ ಭದ್ರತೆ

7. ಸಾಮಾನ್ಯವಾಗಿ ಮಾಧ್ಯಮಿಕ ಹಂತದಲ್ಲಿ ವ್ಯಕ್ತಿ ವಿಭಿನ್ನತೆಯ ನಿವಾರಣೆ ಇರುವ ಪ್ರಮುಖ ಅವಕಾಶವು ಇದಾಗಿದೆ–

(1) ತ್ವರೆ ಮಾಡುವುದು ಮತ್ತು ವಿಳಂಬ ಮಾಡುವುದು

(2) ವಿಭಿನ್ನ ಪಠ್ಯಕ್ರಮ

(3) ವಿಭಿನ್ನ ದತ್ತ ಕಾರ್ಯಕ್ರಮಗಳು

(4) ಸಾಮರ್ಥ್ಯ ಆಧಾರಿತ ಗುಂಪು

8. ಉದ್ದೀಪನವನ್ನುನಿರಂತರವಾಗಿ ಪ್ರದರ್ಶಿಸುವುದರಿಂದ ಆಗುವ ವರ್ತನೆಯಲ್ಲಿಯ ಬದಲಾವಣೆಯನ್ನು ಈ ಕೆಳಗಿನಂತೆ ಹೆಸರಿಸಲಾಗುತ್ತದೆ.

(1) ಪರಪಕ್ವತೆ (2) ಪ್ರತಿಕ್ರಯಿಸುವುದು

(3) ಅನುಬಂಧನ (4) ಪುನರ್ಬಲನ

9. ಒಂದು ಪ್ರಯೋಗದಲ್ಲಿ ಸಂಶೋಧನಾಕಾರರು ಈ ಕೆಳಗಿನಂತೆ ನಿಯಂತ್ರಿತ ಗುಂಪನ್ನು ಹೊಂದಲು ಪ್ರಯತ್ನಿಸುತ್ತಾರೆ–

(1) ಪ್ರಾಯೋಗಿಕ ಗುಂಪಿನೊಂದಿಗೆ ಎಲ್ಲಾ ಅಂಶಗಳಲ್ಲಿ ತದ್ರೂಪತೆ ಇರುವುದು

(2) ಪ್ರಾಯೋಗಿಕ ಗುಂಪಿನೊಂದಿಗೆ ಎಲ್ಲಾ ಅಂಶಗಳಲ್ಲಿ ವಿಭಿನ್ನತೆ ಇರುವುದು

(3) ಅಧ್ಯಯನದಲ್ಲಿ ಅಡಕವಾಗಿರುವ ಅಂಶವೊಂದನ್ನು ಬಿಟ್ಟು ಪ್ರಾಯೋಗಿಕ ಗುಂಪಿನ ಉಳಿದೆಲ್ಲಾ ಅಂಶಗಳಲ್ಲಿ ವಿರುದ್ಧ ಇರುವುದು

(4) ಅಧ್ಯಯನದಲ್ಲಿ ಅಡಕವಾಗಿರುವ ಅಂಶವೊಂದನ್ನು ಬಿಟ್ಟು ಪ್ರಾಯೋಗಿಕ ಗುಂಪಿನ ಉಳಿದೆಲ್ಲಾ ಅಂಶಗಳಲ್ಲಿ ತದ್ರೂಪತೆ ಇರುವುದು

10. ಯಾವ ವಿಧಾನದಲ್ಲಿ ಹಲವಾರು ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಮತ್ತು ಅದನ್ನು ವಿಶ್ಲೇಷಿಸುವುದರಿಂದ ವ್ಯಕ್ತಿಯ ಸಮಸ್ಯೆಗಳನ್ನು ಕುರಿತು ಅವುಗಳಿಗೆ ಪರಿಹಾರ ಕಂಡು ಹಿಡಿಯಲಾಗುವುದೋ ಅಂತಹ ವಿಧಾನಕ್ಕೆ ಹೀಗೆನ್ನುವರು–

(1) ಅವಲೋಕನ (2) ಪ್ರಾಯೋಗಿಕ ಪದ್ಧತಿ

(3) ವ್ಯಕ್ತಿ ಅಧ್ಯಯನ (4) ಅಂತರಾವಲೋಕನ

11. ಕಲಿಕೆಯಲ್ಲಿ ಸಮತಲವನ್ನು ಈ ರೀತಿಯ ಅವಧಿ ಎಂದು ವ್ಯಾಖ್ಯಾನಿಸಲಾಗುತ್ತದೆ–

(1) ಪ್ರಗತಿ ಇಲ್ಲದಿರುವುದು

(2) ಪ್ರಸ್ತುತ ಪ್ರಗತಿಯಲ್ಲಿರದೇ ಮುಂದಿನ ದಿನಗಳಲ್ಲಿ ಅತೀ ಗರಿಷ್ಠ ಮಟ್ಟದ ಪ್ರಗತಿ ಕಾಣಿಸಿಕೊಳ್ಳುವುದು

(3) ಸಂಕಲನ ಮತ್ತು ಪುನರ್ ಸಂಘಟನೆ

(4) ಪರಿಪಾಕಾವಸ್ಥೆ

12. ಕೆಳಗಿನವುಗಳಲ್ಲಿ ಸ್ಕಿನ್ನರ್ ಅವರು ಅಂಗೀಕರಿಸಿರುವಂತೆ ಕಲಿಕೆಗೆ ಅವಶ್ಯವಾದ ಅಂಶ ಯಾವುದಾಗಿದೆ?

(1) ಕಲಿಕಾಕಾರನು ಏನನ್ನಾದರೂ ಮಾಡಲೇಬೇಕು

(2) ಕಲಿಕಾಕಾರನು ಯಾವುದಾದರೂ ಸಮಸ್ಯೆಯನ್ನು ಪರಿಹರಿಸಲೇಬೇಕು

(3) ಕಲಿಕಾಕಾರನು ಯಾವುದಾದರೂ ಅವಶ್ಯಕತೆಯನ್ನು ಹೊಂದಿರಲೇಬೇಕು

(4) ಕಲಿಕಾಕಾರನು ಏನನ್ನಾದರೂ ಗಮನಿಸಲೇಬೇಕು

13. ಅನುಬಂಧನೆಯು ಕಲಿಕೆಯ ಒಂದು ವಿಧಾನವಾಗಿ ಕೆಳಗಿನ ಕಲಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ–

(1) ಮನೋಭಾವನೆಗಳು (2) ಪರಿಕಲ್ಪನೆಗಳು

(3) ದತ್ತಾಂಶಗಳು (4) ಸಂಬಂಧಗಳು

14. ಸಾಮಾನ್ಯವಾಗಿ ಒಂದು ಮಗುವು ಆಯ್ಕೆ ಮಾಡುವ 'ಮಾದರಿ' ಎಂದರೆ

(1) ಹಿರಿಯ ಸಹೋದರ/ರಿ

(2) ಅವನ ಪಾಲಕರು, ಶಿಕ್ಷಕರು ಅಥವಾ ಅಧಿಕಾರದಲ್ಲಿರುವ ಯಾವುದೇ ವ್ಯಕ್ತಿ

(3) ಗುಣಲಕ್ಷಣಗಳು ಪರಿಪೂರ್ಣ ಹೊಂದಿದ ವ್ಯಕ್ತಿ

(4) ಮಗುವಿನ ಸ್ವಯಂ ಆದರ್ಶಕ್ಕೆ ಸಮೀಪವಿರುವ ವ್ಯಕ್ತಿ

15. ಶಿಕ್ಷಕರಿಗೆ 'ಸಮೂಹಗತಿಶಾಸ್ತ್ರ'ದ ತತ್ವಗಳ ಆಳವಾದ ಜ್ಞಾನ ಅತೀ ಅವಶ್ಯಕವಾಗಿದೆ, ಏಕೆಂದರೆ

(1) ಗುಂಪು ಸಂಬದ್ಧತೆಯು ಅಪಾಯದ ಹಂತ ತಲುಪಿದ್ದನ್ನು ಪತ್ತೆ ಮಾಡಲು ಅವಶ್ಯಕ

(2) ಮಕ್ಕಳಿಗೆ ಸಾಮಾಜಿಕ ಗುಂಪಿನಲ್ಲಿ ಜೀವಿಸಲು ಶಿಕ್ಷಣ ನೀಡಬೇಕಾಗಿರವುದರಿಂದ

(3) ಶೈಕ್ಷಣಿಗ ಗುರಿಗಳ ಈಡೇರಿಕೆಯಲ್ಲಿ ಗುಂಪುಗಳು ಪ್ರಮುಖ ಪ್ರಭಾವ ಬೀರುವುದರಿಂದ

(4) ಆಧುನಿಕ ತರಗತಿಗಳು ಹೆಚ್ಚು ಹೆಚ್ಚು ಗುಂಪು ಸನ್ನಿವೇಶವನ್ನು ಹೊಂದಿರುವುದರಿಂದ

16. ಸಸ್ತನಿ ಎಂಬ ಪರಿಕಲ್ಪನೆಯನ್ನು ಬೋಧಿಸಿದ ನಂತರವೂ ಮಗು ತಿಮಿಂಗಿಲ ಒಂದು ಸಸ್ತನಿ ಎಂಬುದನ್ನು ಗುರುತಿಸಲು ವಿಫಲವಾದರೆ ಆ ಮಗು ...... ಮಾಡುತ್ತಿದೆ

(1) ಅತಿಯಾದ ಸಾಮಾನ್ಯೀಕರಣ

(2) ಅಪೂರ್ಣ ಸಾಮಾನ್ಯೀಕರಣ

(3) ಹೊಂದಿಕೊಳ್ಳುವಲ್ಲಿಯ ವಿಫಲತೆ

(4) ಸಮಗ್ರತೆಯನ್ನು ಗುರುತಿಸುವಲ್ಲಿ ವಿಫಲತೆ

17. ಚಲನಕ್ರಿಯಾ ವಿಕಾಸವು ತನ್ನ ಪ್ರಮುಖವಾದ ಮನೋವೈಜ್ಞಾನಿಕ ಮಹತ್ವವನ್ನು ಈ ಕೆಳಗಿನದರಿಂದ ಪಡೆಯುತ್ತದೆ

(1) ದೈಹಿಕ ಆರೋಗ್ಯ ಹಾಗೂ ಸುರಕ್ಷತೆಯನ್ನು ಒದಗಿಸುವುದರಿಂದ

(2) ಚಲನಕ್ರಿಯೆಯ ಸಮರ್ಥತೆ ಹೆಚ್ಚುವುದರಿಂದ

(3) ಸಮವಯಸ್ಕರಲ್ಲಿ ಸಾಮಾಜಿಕ ಸ್ವೀಕಾರವನನ್ನು ಹೆಚ್ಚಿಸುವುದರಿಂದ

(4) ಆತ್ಮ ಕಲ್ಪನೆಯಲ್ಲಿ ಮೂಡಿಸುವುದರಿಂದ

18. ಭಾವನಾತ್ಮಕ ಪರಿಪಕ್ವತೆಯು ಅತ್ಯಂತ ವಾಸ್ತವಿಕ ಅರ್ಥದಲ್ಲಿ ಈ ಕೆಳಗಿನದಕ್ಕೆ ಸಮಾನವಾಗಿರುತ್ತದೆ–

(1) ಆತ್ಮ ವಾಸ್ತವೀಕರಣ ಕ್ರಿಯೆಗೆ

(2) ಬಲಶಾಲಿ ಭಾವೋದ್ವೇಗಗಳಿಂದ ಬಿಡುಗಡೆಗೆ

(3) ಮಾನವ ಕುಲದ ಪ್ರೀತಿಗೆ

(4) ಭಾವೋದ್ವೇಗಕ್ಕೆ ಒಳಗಾಗುವುದನ್ನು ನಿಯಂತ್ರಿಸುಗವುದಕ್ಕೆ

19. ಈ ಕೆಳಗಿನ ರೀತಿಯ ಮಗು ಪೋಷಣಾ ವಿಧಾನದಿಂದ ಸಾಮಾಜೀಕರಣವನ್ನು ಉನ್ನತವಾಗಿ ಸಾಧಿಸಬಹುದು–

(1) ಬೇಡಿಕೆ–ಆಧಾರಿತ ವಿಧಾನದಿಂದ

(2) ಪ್ರೀತಿ–ಆಧಾರಿತ ವಿಧಾನದಿಂದ

(3) ವಸ್ತು–ಆಧಾರಿತ ವಿಧಾನದಿಂದ

(4) ಪಾಲಕರ – ಆಧಾರಿತ ವಿಧಾನದಿಂದ

20. ಇತ್ತೀಚಿನ ಮನೋವಿಜ್ಞಾನಿಗಳು ನಾಯಕರನ್ನು ಈ ರೀತಿಯಾಗಿ ಪರಿಗಣಿಸುತ್ತಾರೆ–

(1) ನಾಯಕನು ಗುಂಪಿನ ಅವಶ್ಯಕತೆಗಳಿಗೆ ಹೋರಾಡುತ್ತಿರುತ್ತಾನೆ

(2) ನಾಯಕನು ತನ್ನ ಸ್ವಾರ್ಥ ಸಾಧಿಸಲು ಗುಂಪನ್ನು ದುರುಪಯೋಗಪಡಿಸಿಕೊಳ್ಳುತ್ತಾನೆ

(3) ನಾಯಕನು ಗುಂಪಿನ ಸದಸ್ಯರಲ್ಲಿ ಪ್ರಖ್ಯಾತಿಯನ್ನು ಹೊಂದಿರುತ್ತಾನೆ

(4) ನಾಯಕನು ಸಾಮಾಜಿಕ ಸೂಕ್ಷ್ಮತೆಯನ್ನು ಹೊಂದಿರುತ್ತಾನೆ

21. ಗುಂಪು ಕೆಲಸದ ಯಶಸ್ವಿಯನ್ನು ಪ್ರಮುಖವಾಗಿ ನಿರ್ಧರಿಸಬಲ್ಲ ಶಕ್ತಿ ಎಂದರೆ

(1) ನಾಯಕನನ್ನು ಸ್ವೀಕರಿಸುವುದು

(2) ತೃಪ್ತಿಕರವಾದ ಸಂವಹನ

(3) ಮೂಲ ಉದ್ದೇಶ ಹಾಗೂ ಗುರಿಗಳಲ್ಲಿ ಸಮಾನತೆ

(4) ಗುಂಪಿನ ಅನುಭವ

22. ಯಾವುದೇ ಪರಿಪೂರ್ಣವಾದ ಕಲಿಕೆಯ ವ್ಯಾಖ್ಯಾನ ಈ ಕೆಳಗಿನದಕ್ಕೆ ಒತ್ತನ್ನು ಕೊಡುತ್ತದೆ–

(1) ಕಲಿಕೆಯು ಯಾವಾಗಲೂ ವರ್ತನೆಯಲ್ಲಿನ ಬದಲಾವಣೆಯನ್ನು ಒಳಗೊಂಡಿರುತ್ತದೆ.

(2) ಕಲಿಕೆಯು ಯಾವಾಗಲೂ ಮನೋವಪ್ರವೃತ್ತಿ ಜ್ಞಾನ, ಹಾಗೂ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದಾಗಿದೆ

(3) ಕಲಿಕೆಯು ಯಾವಾಗಲೂ ಪರಿಸರಕ್ಕೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದಾಗಿದೆ

(4) ಕಲಿಕೆಯು ಯಾವಾಗಲೂ ಹೊಸ ಅನುಭವಗಳನ್ನು ಪಡೆಯುವುದಾಗಿದೆ

23. ಬೋಧನಾ – ಕಲಿಕೆ ತಂತ್ರದ ಪರಿಣಾಮ ಪ್ರಮುಖವಾಗಿ ಈ ಅಂಶದ ಮೇಲೆ ಅವಲಂಬನೆಯಾಗಿದೆ–

(1) ಕಲಿಯುವವನ ಗುಣಲಕ್ಷಣಗಳ ಮೇಲೆ

(2) ಶಿಕ್ಷಕರ ಹಾಗೂ ಅವನ ತಂತ್ರದ ಮೇಲೆ

(3) ಬೋಧಿಸುವ ವಿಷಯದ ಮೇಲೆ

(4) ವಿವಿಧ ಶೈಕ್ಷಣಿಕ ಗುರಿಗಳಿಗೆ ಕೊಟ್ಟ ಆದ್ಯತೆಯ ಮೇಲೆ

24. ಈ ಕೆಳಗಿನ ಅಂಶವು ಶೈಕ್ಷಣಿಕ ಮಾಹಿತಿಯನ್ನು ಹೆಚ್ಚು ಸ್ಮೃತಿಯಲ್ಲಿರಿಸಲು ಪೂರಕವಾಗಿದೆ–

(1) ಮಾಹಿತಿ ಪಡೆಯುವಲ್ಲಿ ಅನುಸರಿಸಿದ ವಿಧಾನ

(2) ಕಲಿಯುವವನ ಭೌತಿಕ ಮಟ್ಟ

(3) ಪ್ರಭುತ್ವದ ಮಟ್ಟ

(4) ಕಲಿಯುವವನು ಹೊಂದಿರುವ ಪೂರಕ ಮಾಹಿತಿ

25. ಪಿಯಾಜೆಯವರ ಪರಿಕಲ್ಪನೆ ವಿಕಾಸದ ವರ್ಗಾವಣೆಯಲ್ಲಿ ಕೊನೆಯ ಹಂತ ಇದಾಗಿದೆ

(1) ವಾಸ್ತವಿಕೆಯ ಕ್ರಿಯಾ ವಿಚಾರಗಳು (2) ತಾತ್ವಿಕ ವಿಚಾರಗಳು

(3) ಸ್ಥಿರಕ್ರಿಯಾ ಪೂರ್ಣ ವಿಚಾರಗಳು (4) ಅಂತರ್‌ದೃಷ್ಟಿ ವಿಚಾರಗಳು

26. ಭಾಷಾ ಬೆಳವಣಿಗೆಯಲ್ಲಿ ಕೆಳಗಿನ ಯಾವ ವಿಧಾನ ಸರಿ ಅಲ್ಲ?

(1) ಒಂದು ವಿಷಯದ ಮೇಲೆ ಮಗುವು ಅವ್ಯಾಹತವಾಗಿ ಮಾತನಾಡಲು ಬಿಡುವುದು.

(2) ಮಕ್ಕಳ ಸ್ವಂತ ಭಾಷೆಯ ಬಳಕೆಯನ್ನು ಒಪ್ಪದಿರುವುದು.

(3) ಮಕ್ಕಳು ತೆಗೆದುಕೊಳ್ಳುವ ಉಪಕ್ರಮಗಳನ್ನು ಪ್ರೋತ್ಸಾಹಿಸುವುದು

(4) ಭಾಷಾ ಬಳಕೆಗೆ ಅವಕಾಶ ನಿರ್ಮಿಸಿಕೊಡುವುದು

27. 'ಕಲಿಯಲು ಸಿದ್ಧವಾಗಿರುವುದು' – ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?

(1) ಥಾರ್ನ್‌ಡೈಕ್‌ರ ಸಿದ್ಧತಾ ನಿಯಮ

(2) ವಿದ್ಯಾರ್ಥಿಗಳ ಸಾಮಾನ್ಯ ಸಾಮರ್ಥ್ಯ ಮಟ್ಟ

(3) ಕಲಿಕೆಯ ನಿರಂತರ ರೇಖೆಯಲ್ಲಿನ ಮಕ್ಕಳ ಪ್ರಸಕ್ತ ಸಂಜ್ಞಾನಾತ್ಮಕ ಮಟ್ಟ

(4) ಕಲಿಕಾ ಚಟುವಟಿಕೆಯ ತೃಪ್ತಿದಾಯಕ ಸ್ವಭಾವ

28. ಶಿಕ್ಷಕಿಯೊಬ್ಬರ ತರಗತಿಯಲ್ಲಿ ಕೆಲವು ವಿಕಲ ಚೇತನ ವಿದ್ಯಾರ್ಥಿಗಳಿದ್ದಾರೆ. ಆಗ ಆಕೆಯ ಕೆಳಗಿನ ಯಾವ ಹೇಳಿಕೆ ಹೆಚ್ಚು ಸೂಕ್ತವಾದ್ದು?

(1) ಪೋಲಿಯೊದಿಂದ ನರಳುತ್ತಿರುವ ಮಕ್ಕಳು ಈಗ ಒಂದು ಹಾಡನ್ನು ಹೇಳುತ್ತಾರೆ.

(2) ಗಾಲಿ ಕುರ್ಚಿಯಲ್ಲಿರುವ ಮಕ್ಕಳು ತಮ್ಮ ಗೆಳೆಯರ ಸಹಾಯದಿಂದ ಸಭಾಂಗಣಕ್ಕೆ ಹೋಗಬೇಕು.

(3) ಭೌತಿಕವಾಗಿ ಅನನುಕೂಲತೆ ಹೊಂದಿರುವ ಮಕ್ಕಳು ತರಗತಿಯಲ್ಲಿ ಒಂದು ಪರ್ಯಾಯ ಚಟುವಟಿಕೆ ಮಾಡಬಹುದು.

(4) 'ಮೋಹನ್, ಆಟದ ಮೈದಾನಕ್ಕೆ ಹೋಗಲು ನೀನೇಕೆ ನಿನ್ನ ಊರುಗೋಲುಗಳನ್ನು ಬಳಸಬಾರದು?'

29. ಪ್ರತಿಭಾವಂತ ಮಕ್ಕಳು (ಗಿಫ್ಟೆಡ್ ಚಿಲ್ಡ್ರನ್) –

(1) ಕಲಿಕಾ ದೋಷ ಹೊಂದಿರುವುದಿಲ್ಲ.

(2) ಸಾಮಾನ್ಯವಾಗಿ ಶಾಲೆಯಿಂದ ಒದಗಿಸಲಾಗದ ಬೆಂಬಲ ಬಯಸುತ್ತಾರೆ

(3) ಶಿಕ್ಷಕರಿಲ್ಲದೇ ತಮ್ಮ ಅಭ್ಯಾಸ ಮಾಡಿಕೊಳ್ಳುತ್ತಾರೆ.

(4) ಇತರ ಮಕ್ಕಳಿಗೆ ಉತ್ತಮ ಮಾದರಿಯಾಗಬಲ್ಲರು.

30. ಪ್ರತಿಭಾವಂತತನ (ಗಿಫ್ಟೆಡ್‌ನೆಸ್) ಕ್ಕೆ ಕಾರಣ –

(1) ಮನೋವೈಜ್ಞಾನಿಕ ಅಂಶಗಳು

(2) ಅನುವಂಶೀಯ ಕಟ್ಟಳೆ

(3) ಪರಿಸರಾತ್ಮಕ ಅಭಿಪ್ರೇರಣೆ (ಎನ್ವೈರನ್‌ಮೆಂಟಲ್ ಮೋಟಿವೇಶನ್)

(4) 2 ಮತ್ತು 3ರ ಮಿಶ್ರಣ

ಉತ್ತರಗಳು

1-(2)	2-(1)	3-(2)	4-(3)	5-(4)
6-(4)	7-(4)	8-(3)	9-(4)	10-(3)
11-(2)	12-(1)	13-(1)	14-(4)	15-(3)
16-(2)	17-(2)	18-(1)	19-(2)	20-(1)
21-(3)	22-(1)	23-(4)	24-(3)	25-(2)
26-(2)	27-(3)	28-(3)	29-(2)	30-(4)

•••••

ಹೆಚ್ಚುವರಿ ಮಾದರಿ ಪ್ರಶ್ನೆ ಪತ್ರಿಕೆ –4

ವಿಷಯ: ಗಣಿತ

ಸೂಚನೆಗಳು :

1. ಈ ಪ್ರಶ್ನೆ ಪತ್ರಿಕೆಯು 30 ಬಹು ಅಂಶ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
2. ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ.

1) 9,4,6,1,3 ಅಂಕಿಗಳನ್ನು ಪುನಃ ಬಳಸದೇ ಬರೆದ ಐದು ಅಂಕಿಯ ಗರಿಷ್ಠ ಸಂಖ್ಯೆ ....

ಅ) 96,314　　ಆ) 96,413
ಇ) 96,431　　ಈ) 96,361

ಉತ್ತರದ ವಿವರಣೆ :

ಇಂತಹ ಪ್ರಶ್ನೆಗಳು ಸಂಖ್ಯೆಯಲ್ಲಿನ ಅಂಕಿಗಳ ಸ್ಥಾನ ಬೆಲೆಗಳನ್ನು ಆಧರಿಸಿರುತ್ತವೆ. ನಿಮಗೆ ಗೊತ್ತಿರುವಂತೆ 0ಯಿಂದ 9ರವರೆಗೆ ಒಟ್ಟು 10 ಅಂಕಿಗಳಿವೆ.ಇವುಗಳಲ್ಲಿ 9 ಅತಿ ದೊಡ್ಡ ಅಂಕಿ.

ನಮ್ಮ ಬಲದಿಂದ ಎಡಕ್ಕೆ ಆರಂಭವಾಗುತ್ತ – 1ನೇ ಸ್ಥಾನ : 'ಬಿಡಿ' ಸ್ಥಾನವಾಗಿದ್ದು, ಇದು ಅತಿ ಕಡಿಮೆ ಬೆಲೆಯ ಸ್ಥಾನ. ನಂತರ 2ನೇ ಸ್ಥಾನ –'ಹತ್ತು', 3ನೇ ಸ್ಥಾನ – 'ನೂರು', 4ನೇ ಸ್ಥಾನ – 'ಸಾವಿರ', 5ನೇ ಸ್ಥಾನ – 'ಹತ್ತು ಸಾವಿರ', 6ನೇ ಸ್ಥಾನ – 'ಲಕ್ಷ', 7ನೇ ಸ್ಥಾನ 'ಹತ್ತು ಲಕ್ಷ' (ಒಂದು ಮಿಲಿಯನ್), 8ನೇ ಸ್ಥಾನ – 'ಕೋಟಿ', 9ನೇ ಸ್ಥಾನ – ಹತ್ತು ಕೋಟಿ', 10ನೇ ಸ್ಥಾನ – 'ನೂರು ಕೋಟಿ'(ಒಂದು ಬಿಲಿಯನ್) ...... ಹೀಗೆ ಸ್ಥಾನ ಬೆಲೆಗಳು ಹೆಚ್ಚುತ್ತ ಹೋಗುತ್ತವೆ.

ಇಲ್ಲಿ 9,4,6,1,3 – ಈ ಐದು ಅಂಕಿಗಳಿವೆ. ಅಂದರೆ ಐದು ಸ್ಥಾನಗಳಲ್ಲಿ ಇವುಗಳನ್ನು ಪುನಃ ಬಳಸದೇ ಕೂಡಿಸಿ ಅತಿದೊಡ್ಡ ಸಂಖ್ಯೆಯನ್ನು ಪಡೆಯಬೇಕು.

ಅಂದರೆ ಕೊಡಲಾಗಿರುವ ಅಂಕಿಗಳಲ್ಲಿ 5ನೇ ಸ್ಥಾನದಲ್ಲಿ (ಹತ್ತು ಸಾವಿರದ ಸ್ಥಾನ) ಅತಿ ದೊಡ್ಡ ಅಂಕಿ 9ನ್ನು ; 4ನೇ ಸ್ಥಾನದಲ್ಲಿ (ಸಾವಿರದ ಸ್ಥಾನ) ನಂತರದ ಅತಿ ದೊಡ್ಡ ಅಂಕಿ 6ನ್ನು ; 3ನೇ ಸ್ಥಾನದಲ್ಲಿ (ನೂರರ ಸ್ಥಾನ) ನಂತರದ ದೊಡ್ಡ ಅಂಕಿ 4ನ್ನು ; 2ನೇ ಸ್ಥಾನದಲ್ಲಿ (ಹತ್ತರ ಸ್ಥಾನ) ನಂತರದ ದೊಡ್ಡ ಅಂಕಿ 3ನ್ನು ಮತ್ತು 1ನೇ ಸ್ಥಾನದಲ್ಲಿ (ಬಿಡಿ ಸ್ಥಾನ) ಉಳಿದ ಅಂಕಿ 1ನ್ನು ಕೂಡಿಸಿದರೆ – ನಮಗೆ ಈ ಅತಿ ದೊಡ್ಡ ಸಂಖ್ಯೆ ದೊರೆಯುತ್ತದೆ : 96,431.

2) ಆಯತಾಕಾರದ ಕೊಠಡಿಯ ನೆಲದ ಉದ್ದ 6 ಮೀ ಮತ್ತು ಅಗಲ 4 ಮೀ. ಹಾಗಾದರೆ ಅದರ ಸುತ್ತಳತೆ ಎಷ್ಟು ?

ಅ) 10 ಮೀ
ಆ) 20 ಮೀ
ಇ) 5 ಮೀ
ಈ) 24 ಮೀ

ಉತ್ತರದ ವಿವರಣೆ :

ಆಯತದ ನಾಲ್ಕು ಬಾಹುಗಳಲ್ಲಿ ಎದುರು ಬದಿರಿನ ಬಾಹುಗಳು ಸಮವಾಗಿರುತ್ತವೆ. ಇಲ್ಲಿ ಉದ್ದ 6 ಮೀ ಮತ್ತು ಅಗಲ 4 ಮೀಟರ್. ಅಂದರೆ 6 ಮೀಟರ್‌ನ ಎರಡು ಬಾಹುಗಳು, 4 ಮೀಟರ್‌ನ ಎರಡು ಬಾಹುಗಳು ಈ ಆಯತಕ್ಕಿವೆ. ಹೀಗಾಗಿ ಸುತ್ತಳತೆ ಎಂದರೆ ಎಲ್ಲ ಬಾಹುಗಳ ಒಟ್ಟು ಉದ್ದ –

(6 ಮೀ + 6 ಮೀ) + (4 ಮೀ + 4 ಮೀ)

= 12 ಮೀ + 8 ಮೀ = 20 ಮೀಟರ್.

3) ಒಂದು ತ್ರಿಭುಜದ ಪಾದ 10 ಸೆಂ.ಮೀ ಮತ್ತು ಎತ್ತರ 13 ಸೆಂ.ಮೀ ಆದರೆ ವಿಸ್ತೀರ್ಣ ......

ಅ) 60 ಚ.ಸೆಂ.ಮೀ　　ಆ) 130 ಚ.ಸೆಂ.ಮೀ
ಇ) 65 ಚ.ಸೆಂ.ಮೀ　　ಈ) 62 ಚ.ಸೆಂ.ಮೀ

ಉತ್ತರದ ವಿವರಣೆ :

ತ್ರಿಭುಜದ ವಿಸ್ತೀರ್ಣದ ಸೂತ್ರ :

ವಿಸ್ತೀರ್ಣ = (ಪಾದ x ಎತ್ತರ)ದ ಅರ್ಧ

$$= \frac{1}{2}(\text{ಪಾದ} \times \text{ಎತ್ತರ})$$

$$= \frac{1}{2}(10 \times 13)$$

$$= \frac{1}{2} \times 10 \times 13$$

$$= \frac{1}{2} \times 130$$

= 65 ಚದುರ ಸೆಂಟಿ ಮೀಟರ್

4) ಒಂದು ತಡೆ ರಹಿತ ಬಸ್ ಮೈಸೂರನ್ನು ಬೆಳಗ್ಗೆ 7:50 ಗಂಟೆಗೆ ಬಿಟ್ಟು ಬೆಂಗಳೂರನ್ನು ತಲುಪಲು 3 ಗಂಟೆ 20 ನಿಮಿಷಗಳನ್ನು ತೆಗೆದುಕೊಂಡಿದೆ. ಹಾಗಾದರೆ ಬಸ್ಸು ಬೆಂಗಳೂರನ್ನು ತಲುಪಿದಾಗ ......

ಅ) 11:10 a.m　　ಆ) 10:30 a.m
ಇ) 11:07 a.m　　ಈ) 10:03 a.m

ಉತ್ತರದ ವಿವರಣೆ :

7:50 ಕ್ಕೆ ಮೂರು ಗಂಟೆಗಳು ಸೇರಿದರೆ 10:50 ಆಗುತ್ತದೆ. ಇದಕ್ಕೆ ಮತ್ತೆ 20 ನಿಮಿಷ ಸೇರಿಸಬೇಕು. ಅಂದರೆ – 50 ನಿಷಕ್ಕೆ 20 ನಿಮಿಷ ಸೇರಿದರೆ 70 ನಿಮಿಷಗಳಾಗುತ್ತವೆ. 60 ನಿಮಿಷ ಎಂದರೆ 1 ಗಂಟೆ. ಹೀಗಾಗಿ 70 ನಿಮಿಷಗಳೆಂದರೆ 1 ಗಂಟೆ 10 ನಿಮಿಷ.

ಈ 1 ಗಂಟೆ 10 ನಿಮಿಷಗಳನ್ನು 10:00ಕ್ಕೆ ಸೇರಿಸಿದರೆ – 11:10 ನಿಮಿಷವಾಗುತ್ತದೆ. (ರಾತ್ರಿ 12ರ ನಂತರದಿಂದ ಬೆಳಗಿನ 12ರವರೆಗಿನ ಅವಧಿಯನ್ನು a.m ನಿಂದ ಸೂಚಿಸುತ್ತಾರೆ.)

5) ಒಂದು ಟನ್ ಎಂದರೆ ....

ಅ) 100 ಕಿ.ಗ್ರಾಂ.　　ಆ) 10,000 ಕಿ.ಗ್ರಾಂ.
ಇ) 1000 ಕಿ.ಗ್ರಾಂ.　　ಈ) 10 ಕಿ.ಗ್ರಾಂ.

ಉತ್ತರದ ವಿವರಣೆ :

1 ಟನ್ ಎಂದರೆ 1000 ಕಿಲೊ ಗ್ರಾಂ.

100 ಕಿಲೊ ಗ್ರಾಂ ಎಂದರೆ 1 ಕ್ವಿಂಟಾಲ್.

1000 ಗ್ರಾಂ ಎಂದರೆ 1 ಕಿಲೊ ಗ್ರಾಂ.

ಇವೆಲ್ಲ ತೂಕದ ಮಾನಗಳು.

ಕಿಲೊ ಗ್ರಾಂ ಎನ್ನುವುದು ತೂಕದ ಮೂಲ ಮಾನ.

6 ಒಂದು ಮೇಜಿನ ಬೆಲೆ ರೂ. 4,320 ಆದರೆ 16 ಮೇಜುಗಳ ಬೆಲೆ ಎಷ್ಟು ?

ಅ) ರೂ. 70,100　　ಆ) ರೂ. 69,120
ಇ) ರೂ. 60,132　　ಈ) ರೂ. 80,116

7) 25,346ನ್ನು ಸಾವಿರದ ಸಮೀಪಕ್ಕೆ ಅಂದಾಜಿಸಿದಾಗ ...... ಆಗುತ್ತದೆ –

ಅ) 26,300　　ಆ) 25,400
ಇ) 25,000　　ಈ) 26,000

ಉತ್ತರದ ವಿವರಣೆ :

ಇಂತಹ ಸಮಸ್ಯೆಗಳನ್ನು ಬಿಡಿಸುವಾಗ ನೀವು ಯಾವ ಸ್ಥಾನಕ್ಕೆ ಅಂದಾಜಿಸಲು ಕೇಳಿದ್ದಾರೆಂಬುದನ್ನು ಗಮನಿಸಬೇಕು. ಇಲ್ಲಿ ಸಾವಿರದ ಸಮೀಪಕ್ಕೆ ಅಂದಾಜಿಸಲು ಕೇಳಿದ್ದಾರೆ. ಅಂದರೆ–

25,346 ನ್ನು ಸಾವಿರದ ಸ್ಥಾನಕ್ಕೆ ಅಂದಾಜಿಸಿದಾಗ ಅದು–

25,000 ಆಗುತ್ತದೆ.

ಹೇಗೆಂದರೆ –

ಇಲ್ಲಿ ನೂರರ ಸ್ಥಾನದಲ್ಲಿ ಯಾವ ಅಂಕಿ ಇದೆ ಎಂದು ನೋಡಿ. ಅಲ್ಲಿ 3 ಇದೆ. ನೂರರ ಸ್ಥಾನದಲ್ಲಿ 5 ಮತ್ತು 5ರ ಮೇಲಿನ ಅಂಕಿಗಳು ಇದ್ದರೆ ಮಾತ್ರ ಅದನ್ನು 1000ಕ್ಕೆ ಅಂದಾಜಿಸಬಹುದು. ಅಂದರೆ ಇಲ್ಲಿ –

25,346ರ ಬದಲು 25,500 ರಿಂದ 25,599ರವರೆಗಿನ ಎಲ್ಲಾ ಸಂಖ್ಯೆಗಳನ್ನು 26,000ಕ್ಕೆ ಅಂದಾಜಿಸಬಹುದು.

ಹಾಗೆಯೇ 25,001 ರಿಂದ 25,499ರವರೆಗಿನ ಎಲ್ಲಾ ಸಂಖ್ಯೆಗಳನ್ನು 25,000ಕ್ಕೆ ಅಂದಾಜಿಸಬಹುದು.

ಒಂದುವೇಳೆ ಇಲ್ಲಿನ ಸಮಸ್ಯೆಯಲ್ಲಿ 25,346ನ್ನು ನೂರರ ಸಮೀಪಕ್ಕೆ ಅಂದಾಜಿಸಲು ಕೇಳಿದ್ದರೆ, ಮೇಲೆ ವಿವರಿಸಿರುವ ರೀತಿಯಲ್ಲಿ ಇದು 25,300 ಆಗುತ್ತಿತ್ತು.

ಅಂದರೆ ಯಾವ ಸ್ಥಾನಕ್ಕೆ ಅಂದಾಜಿಸಲು ಕೇಳಿರುತ್ತಾರೆಯೋ ಆ ಸ್ಥಾನ ಬೆಲೆ ಅರ್ಧದಷ್ಟನ್ನು ಪರಿಗಣಿಸಿ, ಆಚೆ ಈಚೆ ಅಂದಾಜಿಸಬೇಕು.

8) 84536 ರಲ್ಲಿ 4ರ ಸ್ಥಾನ ಬೆಲೆ ಎಷ್ಟು ?

ಅ) 400 ಆ) 40

ಇ) 4000 ಈ) 4

ಉತ್ತರದ ವಿವರಣೆ :

ಹಿಂದಿನ ಪುಟದಲ್ಲಿ ಪ್ರಶ್ನೆ 1ಕ್ಕೆ ಕೊಡಲಾದ ಉತ್ತರದ ವಿವರಣೆಯನ್ನೂ ನೋಡಿ. ಬಲದಿಂದ ಎಡಕ್ಕೆ ನಾಲ್ಕನೇ ಸ್ಥಾನದ ಬೆಲೆ 1000. ಈ ಸ್ಥಾನದಲ್ಲಿ ಇಲ್ಲಿ 4 ಇರುವುದರಿಂದ ಅದರ ಸ್ಥಾನ ಬೆಲೆ –

$4 \times 1000 = 4000.$

9) 1.42ರ ಭಿನ್ನರಾಶಿ ರೂಪ ......

ಅ) 142/10 ಆ) 142/1000

ಇ) 142/10000 ಈ) 142/100

ಉತ್ತರದ ವಿವರಣೆ :

ದಶಮಾಂಶ ಸ್ಥಾನವನ್ನು '.' ಈ ಬಿಂದುವಿನಿಂದ ಪ್ರತಿನಿಧಿಸುತ್ತೇವೆ. ಇದು ಬಿಡಿ ಸ್ಥಾನವಾದ ನಂತರ ಬಲಕ್ಕೆ ಬರುವ ಸ್ಥಾನ. ಈ ಪಟ್ಟಿ ನೋಡಿ:

1000	100	10	1	.	10ನೇ1	100ನೇ1	1000ದನೇ1

ದಶಮಾಂಶ ಸ್ಥಾನವಾದ '.'ವು 1ಕ್ಕಿಂತ ಕಡಿಮೆ ಇರುವ ಪೂರ್ಣ ಸಂಖ್ಯೆಯ ಭಾಗವನ್ನು ಪ್ರತ್ಯೇಕಿಸುವ ಬಿಂದು ಸೂಚಿಯಾಗಿದೆ. ಅಂದರೆ ಈ ಬಿಂದುವಿನ ನಂತರ ಬಲಕ್ಕೆ ಬರುವ ಸ್ಥಾನಗಳೆಲ್ಲ 1ಕ್ಕಿಂತ ಕಡಿಮೆ ಇದ್ದು ಮೊದಲನೆ ಸ್ಥಾನದ ಬೆಲೆ 1/10 ; ಎರಡನೆ ಸ್ಥಾನದ ಬೆಲೆ 1/100 ; ಮೂರನೇ ಸ್ಥಾನದ ಬೆಲೆ 1/1000 ...ಹೀಗೆ.

ಭಿನ್ನರಾಶಿ ಎಂದರೆ 'ಮುರಿದ ಸಂಖ್ಯೆ'. ಅಂದರೆ ಒಂದು ಪೂರ್ಣ ಭಾಗದಲ್ಲಿ ಒಂದು ಅಥವಾ ಹೆಚ್ಚಿನ 'ಸಮ' ಭಾಗಗಳು.

ಅಂಶ ಮತ್ತು ಛೇದಗಳಿಂದ ಬರೆಯುತ್ತೇವೆ. ಅಂದರೆ ಪೂರ್ಣ ಭಾಗವು ಕೆಳಗೆ ಇರುತ್ತದೆ, ಇದು ಛೇದ ಹಾಗೂ ಈ ಪೂರ್ಣ ಭಾಗದ ಒಂದು ಮುರಿದ 'ಸಮ' ಭಾಗವು ಮೇಲಿರುತ್ತದೆ, ಇದು ಅಂಶ.

ಇಲ್ಲಿ 1.42 ದಶಮಾಂಶ ರೂಪದಲ್ಲಿದೆ. ಇದರ ಭಿನ್ನ ರಾಶಿಯ ರೂಪ :

$$1.42 = \frac{1.42}{1}$$
$$= \frac{1.42}{1.0}$$
$$= \frac{14.2}{10.0}$$
$$= \frac{142}{100}$$

10) 147.25 x 17 ರ ಗುಣಲಬ್ಧ ಎಷ್ಟು ?

ಅ) 2503.25 ಆ) 2423.50

ಇ) 2622.35 ಈ) 2431.50

ಉತ್ತರದ ವಿವರಣೆ :

ದಶಮಾಂಶ ಸ್ಥಾನಗಳನ್ನು ಹೊಂದಿರುವ ಸಂಖ್ಯೆಗಳನ್ನು ಗುಣಿಸುವಾಗ, ಸಾಮಾನ್ಯ ಸಂಖ್ಯೆಯಂತೆಯೇ ಗುಣಿಸಿ, ನಂತರ ಬರುವ ಗುಣಲಬ್ಧದಲ್ಲಿ ಮೊದಲು ಕೊಟ್ಟಿರುವ ಸಂಖ್ಯೆಯಲ್ಲಿ ದಶಮಾಂಶ ಬಿಂದುವಿನ ನಂತರ ಎಷ್ಟು ಸ್ಥಾನಗಳಿವೆಯೋ ಅಷ್ಟು ಎಣಿಸಿ (ಸ್ಥಾನಗಳನ್ನು, ಅಂಕಿಗಳನ್ನಲ್ಲ), ನಿಮ್ಮ ಬಲತುದಿಯಿಂದ ಎಡಕ್ಕೆ ದಶಮಾಂಶ ಸೂಚಿಯಾದ '.' ವನ್ನು (ಬಿಂದುವನ್ನು) ಇಡಬೇಕು.

ಇಲ್ಲಿ –

147.25 ರಲ್ಲಿ ಎರಡು ದಶಮಾಂಶ ಸ್ಥಾನಗಳಿವೆ. ಈ ಸಂಖ್ಯೆಯನ್ನು ಸಾಮಾನ್ಯ ಸಂಖ್ಯೆಯಂತೆಯೇ ಪರಿಗಣಿಸಿ 17ರಿಂದ ಹೀಗೆ ಗುಣಿಸಿ :

$$14725 \times 17$$
$$= 250325$$

ಇಲ್ಲಿ ಎರಡು ದಶಮಾಂಶ ಸ್ಥಾನಗಳಿದ್ದಿದ್ದರಿಂದ ಬಂದಿರುವ ಗುಣಲಬ್ಧದಲ್ಲಿ ನಿಮ್ಮ ಬಲದಿಂದ ಎಡಕ್ಕೆ ಎರಡು ಸ್ಥಾನಗಳನ್ನು ಎಣಿಸಿ '.'ವನ್ನು ಇಡಿ.

ಹೀಗೆ –

2503.25

(ಶಾರ್ಟ್ ಕಟ್ : ಕೊಟ್ಟಿರುವ ಉತ್ತರಗಳ ಆಯ್ಕೆಯಲ್ಲಿ ಕೊನೆಯ ಎರಡು ಅಂಕಿಗಳು 25 ಇರುವ ಉತ್ತರ 'ಅ' ಆಯ್ಕೆಯಲ್ಲಿ ಮಾತ್ರ ಇರುವುದರಿಂದ, ನೀವು ಪೂರ್ತಿ ಗುಣಾಕಾರ ಮಾಡುವ ಅಗತ್ಯ ಇಲ್ಲ. 17ರಿಂದ ಸಂಖ್ಯೆಯ ಬಿಡಿ ಸ್ಥಾನದಲ್ಲಿರು ಅಂಕಿ 5ನ್ನು ಗುಣಿಸಿದಾಗ 85 ಬರುತ್ತದೆ; ಇದರಲ್ಲಿ 5ನ್ನು ಇಟ್ಟುಕೊಂಡು 8ನ್ನು ಕ್ಯಾರಿ ಮಾಡುತ್ತೀರಿ (ಕೈಲಾ); ನಂರ 17ರಿಂದ 2ನ್ನು ಗುಣಿಸಿದಾಗ 34 ಬರುತ್ತದೆ, ಇದನ್ನು ಕ್ಯಾರಿ ಮಾಡಿದ 8ಕ್ಕೆ ಸೇರಿಸಿದಾಗ 42 ಬರುತ್ತದೆ; ಇದರಲ್ಲಿ 2ನ್ನು 5ರ ಹಿಂದೆ ಬರೆದು, 4ನ್ನು ಕ್ಯಾರಿ ಮಾಡುತ್ತೀರಿ; ಆಗ ನಿಮ್ಮ ಗಣಲಬ್ಧಲ್ಲಿ ಹತ್ತು ಮತ್ತು ಬಿಡಿ ಸ್ಥಾನಗಳಲ್ಲಿ 25 ಬಂದಿರುತ್ತದಲ್ಲವೇ? ಈ 25 ಪ್ರಶ್ನೆಯಲ್ಲಿ ಕೊಟ್ಟಿರುವ ನಾಲ್ಕು ಉತ್ತರಗಳ ಆಯ್ಕೆಯಲ್ಲಿ 'ಅ' ಆಯ್ಕೆಯನ್ನು ಬಿಟ್ಟರೆ ಬೇರೆಲ್ಲೂ ಇಲ್ಲ! ಉತ್ತರವನ್ನು ನೀವು ಹೀಗೆ ಈ ಶಾರ್ಟ್ ಕಟ್ ಮೂಲಕ ನೇರವಾಗಿ ಎರಡೇ ಸೆಕೆಂಡ್‌ಗಳಲ್ಲಿ ಆಯ್ಕೆ ಮಾಡಿ ಸಮಯವನ್ನು ಉಳಿಸಿಕೊಳ್ಳಬಹುದು. ಇಂತಹ ತಂತ್ರಗಳನ್ನು ನೀವು ಗಣಿತ ಅಥವಾ ಮೆಂಟಲ್ ಎಬಿಲಿಟಿಯ ಪ್ರಶ್ನೆಗಳಲ್ಲಿ ಆಯಾ ಸಂದರ್ಭಕ್ಕೆ ಅನುಗುಣವಾಗಿ ಬಳಸಬಹುದು.)

11) ಒಂದು ಗಂಟೆಯಲ್ಲಿ ...... ಸೆಕೆಂಡುಗಳಿವೆ

ಅ) 60 ಆ) 120

ಇ) 360 ಈ) 3600

ಉತ್ತರದ ವಿವರಣೆ :

ಒಂದು ಗಂಟೆ ಎಂದರೆ 60 ನಿಮಿಷಗಳು. ಒಂದು ನಿಮಿಷ ಎಂದರೆ 60 ಸೆಕೆಂಡ್‌ಗಳು. ಅಂದರೆ ಒಂದು ಗಂಟೆಯಲ್ಲಿ –

60 x 60 = 3600 ಸೆಕೆಂಡ್‌ಗಳಿರುತ್ತವೆ.

12) 3/7 ರ ಸಮಾನ ಭಿನ್ನರಾಶಿ ......

ಅ) 6/7 ಆ) 3/21

ಇ) 6/14 ಈ) 15/7

ಉತ್ತರದ ವಿವರಣೆ :

ಭಿನ್ನರಾಶಿ ಎಂದರೆ ಒಂದು ಪೂರ್ಣ ಭಾಗದಲ್ಲಿ ಆ ಭಾಗದ ಮುರಿದ ಒಂದು 'ಸಮ ಭಾಗ'. ಒಂದರೆ 100ರಲ್ಲಿ ನಾಲ್ಕು ಸಮಭಾಗಗಳನ್ನು ಮಾಡಿ ಅವುಗಳಲ್ಲಿ ಒಂದು ಭಾಗವನ್ನು ಮಾತ್ರ ಪರಿಗಣಿಸಿದರೆ ಅದು ಭಿನ್ನರಾಶಿ – $\frac{1}{4}$

ಇಂತಹ ಭಾಗಗಳನ್ನು ನಾವು ಎಷ್ಟು ತೆಗೆದುಕೊಳ್ಳುತ್ತ ಹೋಗುತ್ತೇವೆಯೋ ಅವೆಲ್ಲ ಈ ಭಿನ್ನರಾಶಿಗೆ ಸಮಾನ ವಾದ ಭಿನ್ನರಾಶಿಗಳಾಗುತ್ತವೆ. ಅಂದರೆ ಮೇಲಿನ ಭಿನ್ನರಾಶಿಯನ್ನು 2 ಬಾರಿ ತೆಗೆದುಕೊಂಡರೆ,

ಅದು–

$$\frac{1\times2}{4\times2}=\frac{2}{8}$$

ಮೂರು ಬಾರಿ ತೆಗೆದುಕೊಂಡರೆ,

ಅದು –

$$\frac{1\times3}{4\times3}=\frac{3}{12}$$

ಹೀಗೆ 1/4 ರ ಸಮಾನ ಭಿನ್ನರಾಶಿಗಳು

2/8 , 3/12 , 4/16 ......

ಅಂದರೆ, ಒಂದು ಭಿನ್ನರಾಶಿಯ ಅಂಶ ಛೇದಗಳಿಗೆ ಒಂದೇ ಅಂಕಿಯಿಂದ ಗುಣಿಸಿದಾಗ ನಮಗೆ ಆ ಭಿನ್ನರಾಶಿಗೆ ಸಮಾನವಾದ ಭಿನ್ನರಾಶಿಗಳು ದೊರೆಯುತ್ತ ಹೋಗುತ್ತವೆ.

ಇಲ್ಲಿನ ಪ್ರಶ್ನೆಯಲ್ಲಿ ಕೊಡಲಾಗಿರುವ ಭಿನ್ನರಾಶಿ 3/7 ರ ಅಂಶ ಮತ್ತು ಛೇದಗಳಿಗೆ 2, 3, 4...ರಿಂದ ಕ್ರಮಾಗಿ ಗುಣಿಸಿದಾಗ ನಮಗೆ ದೊರೆಯುವ ಸಮಾನ ಭಿನ್ನರಾಶಿಗಳ ಪಟ್ಟಿ –

6/14 , 9/21 , 12/28 .....

ಹೀಗಾಗಿ ಈ ಪ್ರಶ್ನೆಯ ಉತ್ತರ –

6/14

13) ಚೌಕಾಕಾರದ ಒಂದು ಟೇಬಲ್ ಟೆನ್ನಿಸ್ ಆಟದ ಕೊಠಡಿಯ ಉದ್ದ 9 ಮೀ ಇದೆ. ಈ ಕೊಠಡಿಗೆ 3ಮೀ. x 1 ಮೀ. ಅಳತೆಯ ಹಾಸುಗಲ್ಲುಗಳನ್ನು ಹಾಸಬೇಕಿದೆ. ಹಾಗಾದರೆ ಬೇಕಾಗುವ ಹಾಸುಗಲ್ಲುಗಳ ಸಂಖ್ಯೆ ......

ಅ) 6 ಆ) 3

ಇ) 12 ಈ) 27

ಉತ್ತರದ ವಿವರಣೆ :

ಚೌಕಾಕಾರ ಎಂದರೆ ಇಲ್ಲಿ ನಾಲ್ಕೂ ಬಾಹುಗಳೂ ಸಮವಾಗಿರುತ್ತವೆ. ಅಂದರೆ ಇಲ್ಲಿ ಪ್ರತಿ ಬಾಹುವಿನ ಉದ್ದ 9 ಮೀ.

ಚೌಕದ ವಿಸ್ತೀರ್ಣ = ಬಾಹು^{2}

= ಬಾಹು x ಬಾಹು

= 9 x 9

= 81 ಚದುರ ಮೀಟರ್.

(ಅಂದರೆ ಈ ಚೌಕಾಕಾರದ ಕೊಠಡಿಯ ನೆಲದ ಉದ್ದ 81 ಮೀಟರ್ ಮತ್ತು ಅಗಲವೂ 81 ಮೀಟರ್.)

ಕೊಠಡಿಯ ಈ 81 ಚ.ಮೀ ನೆಲದ ವಿಸ್ತೀರ್ಣದ ಮೇಲೆ (3 x 1) ಚದುರ ಮೀಟರ್ ವಿಸ್ತೀರ್ಣದ ಹಾಸುಗಲ್ಲುಗಳನ್ನು ಕೂಡಿಸಬೇಕು.

ಅಂದರೆ ಇಲ್ಲಿ 81ನ್ನು 3 ರಿಂದ ಭಾಗಿಸಿದಾಗ ಎಷ್ಟು ಹಾಸುಗಲ್ಲುಗಳು ಬೇಕೆಂದು ಗೊತ್ತಾಗುತ್ತದೆ.

ಹೀಗೆ –

$$\frac{81}{3}=27$$

14. 90° ಗಿಂತ ಹೆಚ್ಚು ಆದರೆ 180° ಗಿಂತ ಕಡಿಮೆಯಾಗಿರುವ ಕೋನವನ್ನು ..... ಎಂದು ಕರೆಯುತ್ತಾರೆ .

ಅ) ಲಂಬ ಕೋನ ಆ) ಲಘು ಕೋನ

ಇ) ವಿಶಾಲ ಕೋನ ಈ) ಸರಳ ಕೋನ

ಉತ್ತರದ ವಿವರಣೆ :

ಲಂಬ ಕೋನ = 90°

ಲಘು ಕೋನ = 90° ಗಿಂತ ಕಡಿಮೆ

ವಿಶಾಲ ಕೋನ = 90° ಗಿಂತ ಹೆಚ್ಚು 180° ಗಿಂತ ಕಡಿಮೆ.

ಸರಳ ಕೋನ = 180°

ಸರಳಾಧಿಕ ಕೋನ = 180° ಗಿಂತ ಹೆಚ್ಚು 360° ಕ್ಕಿಂತ ಕಡಿಮೆ.

ಪೂರ್ಣ ಕೋನ = 360°

15. 0.5 + 0.5 +0.5 +0.5 = ...

ಅ) 3 ಆ) 2

ಇ) 1 ಈ) 4.5

ಉತ್ತರದ ವಿವರಣೆ :

5ನ್ನು ನಾಲ್ಕು ಬಾರಿ ಕೂಡಿಸಿದಾಗ 20 ಬರುತ್ತದೆ. ಇಲ್ಲಿ 0.5ನ್ನು ಕೂಡಿಸುತ್ತಿರುವುದರಿಂದ 0ಯ ಎಡಕ್ಕೆ ಬಿಂದುವನ್ನು ಇಡಬೇಕು. ಆಗ ಅದು 2.0. ಅಂದರೆ 2 ಆಗುತ್ತದೆ.

16) 25 + 1/10 ರ ದಶಮಾಂಶ ರೂಪ ......

ಅ) 2.11 ಆ) 2.5

ಇ) 25.1 ಈ) 25.01

ಉತ್ತರದ ವಿವರಣೆ :

25ರ ದಶಮಾಂಶ ರೂಪ – 25.0

1/10 ರ ದಶಮಾಂಶ ರೂಪ –

$$\frac{1}{10}=\frac{0.1}{1.0}=0.1$$

ಈಗ ನಮಗೆ ಬೇಕಾದ ಉತ್ತರ : 25.0 + 0.1 = 25.1

17. 15 – (13–1) = ...

ಅ) 15–13–1　　ಆ) 15+13–1

ಇ) 15–13+1　　ಈ) 15+13+1

ಉತ್ತರದ ವಿವರಣೆ :

ಒಂದು ಅಂಕಿಯ ಹಿಂದೆ ಯಾವ ಚಿಹ್ನೆಯೂ ಇಲ್ಲದಿದ್ದಾಗ ಅದು '+' ಚಿಹ್ನೆ ಹೊಂದಿರುತ್ತದೆ. ಗಣಾಕಾರದಲ್ಲಿ ನಾವು ಅಂಕಿಗಳನ್ನಷ್ಟೇ ಅಲ್ಲ, ಅವುಗಳ ಹಿಂದೆ ಇರುವ ಚಿಹ್ನೆಗಳನ್ನೂ ಗುಣಿಸಬೇಕಾಗುತ್ತದೆ. ಎರಡೂ '+' ಚಿಹ್ನೆಗಳಿದ್ದರೆ ತೊಂದರೆ ಏನಿಲ್ಲ. ಆದರೆ ಎರಡೂ ಬೇರೆ ಬೇರೆ ಚಿಹ್ನೆಗಳಿದ್ದಾಗ, ಅಂದರೆ ಒಂದು ಅಂಕಿ '+'ನ್ನೂ, ಇನ್ನೊಂದು ಅಂಕಿ '–'ನ್ನು ಹೊಂದಿದ್ದಾಗ ಏನಾಗುತ್ತದೆ?

ಗಣಿತ ಕ್ರಿಯೆಯ ಮೂಲ ಚಿಹ್ನೆಗಳಾದ + ಹಾಗೂ – ಗಳನ್ನು ಗುಣಿಸಿದಾಗ ಹೀಗಾಗುತ್ತದೆ :

$$(+)\times(+)=+$$
$$(+)\times(_)=_$$
$$(_)\times(+)=_$$
$$(_)\times(_)=+$$

ಇಲ್ಲಿ, ಕೊಟ್ಟಿರುವ ಪ್ರಶ್ನೆಯಲ್ಲಿ

15–(13–1) ಕ್ಕೆ ಮೇಲಿನ ಚಿಹ್ನೆಗಳ ಗುಣಾಕಾರ ನಿಯಮವನ್ನು ಅಳವಡಿಸಿದಾಗ, ಹೀಗಾಗುತ್ತದೆ :

15–13+1 = 2+1 = 3.

(ಮೊದಲು ಕಂಸದಲ್ಲಿರುವ 13–1ನ್ನು ಪರಿಗಣಿಸಿದಾಗ ಅದು 12 ಆಗುತ್ತದೆ. ನಂತರ 15–12 = 3 ದೊರಕುತ್ತದೆ. ಸರಳ. ಆದರೆ ನಿಮಗೆ ಚಿಹ್ನೆಗಳ ಗುಣಾಕಾರ ನಿಯಮ ನೆನಪಿರಲಿ ಎಂದು ಮೇಲೆ ಅವುಗಳನ್ನು ಕೊಡಲಾಗಿದೆ. ಈ ನಿಯಮದ ವಿವರಣೆ ಈ ಪ್ರಶ್ನೆಗಿಂತ ಭಿನ್ನವಾದ ಬೇರೆ ಲೆಕ್ಕಗಳಲ್ಲಿ ಹೆಚ್ಚು ಸಹಾಯಕ್ಕೆ ಬರುತ್ತದೆ.)

18. $\frac{3}{2}\times\frac{3}{2}-2\times\frac{3}{2}\times\frac{1}{2}+(\frac{1}{2}\times\frac{1}{2})=?$

ಅ) 27/4　　ಆ) 1

ಇ) 3　　ಈ) 9/4

ಉತ್ತರದ ವಿವರಣೆ :

ಈ ರೀತಿ ಭಾಗಾಕಾರ, ಗುಣಾಕಾರ, ಸಂಕಲನ, ವ್ಯವಕಲನ, ಕಂಸಗಳು ಇತ್ಯಾದಿಗಳು ಮಿಶ್ರವಾಗಿ ಬಂದಾಗ ಮೊದಲು ಯಾವುದನ್ನು ಮಾಡಬೇಕು, ನಂತರ ಯಾವುದು, ನಂತರ ಯಾವುದು – ಎಂಬ ಗೊಂದಲವನ್ನು ಪರಿಹರಿಸಿಕೊಳ್ಳಲು–

ಕಂಭಾಗುಸಂಕ

ಎಂಬ ನೆನಪಿನ ಸೂತ್ರವನ್ನು ನೆನಪಿಟ್ಟುಕೊಳ್ಳಿ.

ಅಂದರೆ ಇಲ್ಲಿ –

ಕಂ ಎಂದರೆ – ಕಂಸ

ಭಾ ಎಂದರೆ – ಭಾಗಾಕಾರ

ಗು ಎಂದರೆ – ಗುಣಾಕಾರ

ಸಂ ಎಂದರೆ – ಸಂಕಲನ (ಕೂಡಿಸುವುದು)

ಕ ಎಂದರೆ – ಕಳೆಯುವುದು (ವ್ಯವಕಲನ)

(ಇಂಗ್ಲಿಷ್‌ನಲ್ಲಿ ಇದು ಬೊಡ್ಮಾಸ್– BoDMAS.

B - Brackets; O- of ; D-Division; M-Multiplication; A-Addition; S-Sbtraction.

ಇಂಗ್ಲಿಷ್‌ನಲ್ಲಿನ O- of ಎಂದರೆ ಕನ್ನಡದಲ್ಲಿ 'ರ', 'ನೇ' ಇತ್ಯಾದಿ ಅಕ್ಷರಗಳನ್ನು ಲೆಕ್ಕದಲ್ಲಿ ಬಳಸಿದಂತೆ. ಅವು ಗುಣಾಕಾರ ಇದ್ದಂತೆಯೇ. ಅವುಗಳನ್ನು ಕಂಸದ ನಂತರ ಗುಣಾಕಾರ ಕ್ಕೆ ಮೊದಲು ಮಾಡಬೇಕು.)

ಈಗ ಈ ಸೂತ್ರವನ್ನು ನಾವು ಕೊಟ್ಟಿರುವ ಪ್ರಶ್ನೆಯಲ್ಲಿನ ಲೆಕ್ಕವನ್ನು ಮಾಡಲು ಬಳಸೋಣ :

$$\frac{3}{2}\times\frac{3}{2}-2\times\frac{3}{2}\times\frac{1}{2}+(\frac{1}{2}\times\frac{1}{2})=?$$

ಮೊದಲು ಕಂಸದಲ್ಲಿರುವ ಭಾಗ :

$$\frac{3}{2}\times\frac{3}{2}-2\times\frac{3}{2}\times\frac{1}{2}+\frac{1}{4}$$

ನಂತರ ಗುಣಾಕಾರ ಇರುವ ಭಾಗ :

$$\frac{9}{4}-2\times\frac{3}{4}+\frac{1}{4}$$
$$=\frac{9}{4}-\frac{3}{2}+\frac{1}{4}$$

ನಂತರ ಸಂಕಲನ (ಕೂಡಿಸುವುದು)ದ ಭಾಗ (ಗಮನಿಸಿ : ಇಲ್ಲಿ + ಚಿಹ್ನೆ ಹೊಂದಿರುವ ಭಿನ್ನರಾಶಿಗಳನ್ನು ಪರಿಗಣಿಸಬೇಕು) :

$$\frac{9}{4}-\frac{3}{2}+\frac{1}{4}$$
$$=\frac{9}{4}+\frac{1}{4}-\frac{3}{2}$$
$$=\frac{9\times1+1\times1}{4}-\frac{3}{2}$$
$$=\frac{9+1}{4}-\frac{3}{2}$$
$$=\frac{10}{4}-\frac{3}{2}$$

ಕೊನೆಯಲ್ಲಿ ಕಳೆಯುವ (ವ್ಯವಕಲನದ) ಭಾಗ :

$$\frac{10}{4}-\frac{3}{2}$$
$$=\frac{10\times1-3\times2}{4}$$
$$=\frac{10-6}{4}$$
$$=\frac{4}{4}$$
$$=1$$

19) ವೃತ್ತದ ಪರಿಧಿಯ ಸೂತ್ರ = ...

ಅ) πr

ಆ) πr^2

ಇ) $\frac{\pi}{r}$

ಈ) $2\pi r$

ಉತ್ತರದ ವಿವರಣೆ :

ವೃತ್ತದ ತ್ರಿಜ್ಯ = r

ವೃತ್ತದ ವಿಸ್ತೀರ್ಣ = πr^2

ವೃತ್ತದ ಪರಿಧಿ = $2\pi r$

20) 52 ಮೀ. ಬಟ್ಟೆಯ ಬೆಲೆ ರೂ 780 ಆದರೆ, 11 ಮೀ. ಬಟ್ಟೆಯ ಬೆಲೆ ಎಷ್ಟು ?

ಅ) $\frac{780\times 52}{11}$ರೂ

ಆ) $\frac{52\times 11}{780}$ರೂ

ಇ) $\frac{780\times 11}{52}$ರೂ

ಈ) $\frac{780}{11}$ರೂ

ಉತ್ತರದ ವಿವರಣೆ :

52 ಮೀಟರ್ ಬಟ್ಟೆಯ ಬೆಲೆ 780 ರೂ. ಹೀಗಾಗಿ 1 ಮೀಟರ್ ಬಟ್ಟೆಯ ಬೆಲೆ 780ನ್ನು 52ರಿಂದ ಭಾಗಿಸಿದಾಗ ದೊರೆಯುತ್ತದೆ.

ಅಂದರೆ :

1 ಮೀಟರ್ ಬಟ್ಟೆಯ ಬೆಲೆ = $\frac{780}{52}$ರೂ

ಈ ಬೆಲೆಯನ್ನು 11 ಮೀಟರ್ ಗೆ ಗುಣಿಸಿದಾಗ 11 ಮೀಟರ್ ಬಟ್ಟೆಯ ಬೆಲೆ ದೊರೆಯುತ್ತದೆ :

$$\frac{780}{52}\times 11\text{ರೂ}$$

21) 0.000125 .... ಕ್ಕೆ ಸಮ

ಅ) 1/80

ಆ) 1/300

ಇ) 1/8000

ಈ) 1/125

ಉತ್ತರದ ವಿವರಣೆ :

ಈ ಲೆಕ್ಕವನ್ನು ಹೀಗೆ ಹಂತ ಹಂತವಾಗಿ ಬಿಡಿಸುತ್ತ ಹೋದಾಗ ಉತ್ತರ ದೊರೆಯುತ್ತದೆ ನೋಡಿ :

$$0.000125 = \frac{0.000125}{1} = \frac{0.00125}{100} = \frac{0.0125}{1000} = \frac{0.125}{10000} = \frac{1.25}{100000} = \frac{125}{1000000} = \frac{1250}{10000000} = \frac{5}{40000} = \frac{1}{8000}$$

22) 5 ಸೆಂ.ಮೀ ತ್ರಿಜ್ಯದ ಒಂದು ವೃತ್ತದಲ್ಲಿ ಎಳೆಯ ಬಹುದಾದ ಅತ್ಯಂತ ದೊಡ್ಡ ಜ್ಯಾದ ಉದ್ದ ಎಷ್ಟು ?

ಅ) 10 ಸೆಂ.ಮೀ ಆ) 2.5 ಸೆಂ.ಮೀ

ಇ) 15 ಸೆಂ.ಮೀ ಈ) 20 ಸೆಂ.ಮೀ

ಉತ್ತರದ ವಿವರಣೆ :

ವ್ಯಾಸವು ವೃತ್ತವೊಂದರ ಅತಿ ದೊಡ್ಡ ಜ್ಯಾ ಆಗಿದೆ.

ವ್ಯಾಸವು ತ್ರಿಜ್ಯದ ಎರಡು ಪಟ್ಟು ಇರುತ್ತದೆ.

ಇಲ್ಲಿ ವೃತ್ತದ ತ್ರಿಜ್ಯ 5 ಸೆಂಟಿ ಮೀಟರ್ ಆಗಿರುವುದರಿಂದ ವ್ಯಾಸವು

5 x 2 = 10 ಸೆಂ. ಮೀ.

ಹೀಗಾಗಿ, ವ್ಯಾಸವು ವೃತ್ತದ ಅತಿ ದೊಡ್ಡ ಜ್ಯಾ ಆಗಿರುವುದರಿಂದ ಇಲ್ಲಿ ಉತ್ತರ 10 ಸೆಂ.ಮೀ.

23) 40° ಯ ಪೂರಕ ಕೋನ = ...

ಅ) 140° ಆ) 50°

ಇ) 240° ಈ) 114°

ಉತ್ತರದ ವಿವರಣೆ :

ಲಂಬ ಕೋನವನ್ನು (ಅಂದರೆ 90°) ಉಂಟು ಮಾಡುವ ಕೋನಗಳು ಪೂರಕ ಕೋನಗಳಾಗಿವೆ. ಇಲ್ಲಿ 40° ಯ ಪೂರಕ ಕೋನ ಎಂದರೆ – $90^\circ - 40^\circ = 50^\circ$.

24) 125ರ ಘಾತ ರೂಪ = ...

ಅ) 5^2 ಆ) 5^3

ಇ) 125^2 ಈ) 25^3

ಉತ್ತರದ ವಿವರಣೆ :

5ನ್ನು ಮೂರು ಬಾರಿ ಗುಣಿಸಿದಾಗ 125 ಬರುತ್ತದೆ.

5 x 5 x 5 = 125.

$\therefore \quad 5^3 = 125$

25) 3.9 , 4.8 ಮತ್ತು 4.5 ಗಳ ಸರಾಸರಿ ಎಷ್ಟು ?

ಅ) 4.2 ಆ) 11.2

ಇ) 3.4 ಈ) 4.4

ಉತ್ತರದ ವಿವರಣೆ :

$$\text{ಸರಾಸರಿ} = \frac{\text{ಸಂಖ್ಯೆಗಳ ಒಟ್ಟು ಮೊತ್ತ}}{\text{ಒಟ್ಟು ಸಂಖ್ಯೆಗಳು}}$$

$$= \frac{3.9 + 4.8 + 4.5}{3}$$

$$= \frac{13.2}{3}$$

$$= 4.4$$

26) ಒಂದು ಸಂಖ್ಯೆಯ 50% 10 ಆದರೆ ಆ ಸಂಖ್ಯೆ ಯಾವುದು ?

ಅ) 20 ಆ) 25

ಇ) 15 ಈ) 30

ಉತ್ತರದ ವಿವರಣೆ :

$$\% = \frac{1}{100}.$$

ಒಂದು ಸಂಖ್ಯೆಯ 50% $= \frac{50}{100} = \frac{1}{2}$

ಅಂದರೆ ಅರ್ಧ.

ಇಲ್ಲಿ ಒಂದು ಸಂಖ್ಯೆಯ ಅರ್ಧ 10 ಇದೆ.

ಅಂದರೆ ಆ ಸಂಖ್ಯೆ 20.

27) 0.9% ಅನ್ನು ಈ ರೀತಿ ಬರೆಯಬಹುದು

ಅ) 0.0009 ಆ) 0.009

ಇ) 0.09 ಈ) 0.9

ಉತ್ತರದ ವಿವರಣೆ :

ಮೇಲಿನ ಪ್ರಶ್ನೆಯ ಉತ್ತರದ ವಿವರಣೆಯನ್ನು ನೋಡಿ –

ಶೇಕಡ (%) = 1/100.

ಅಂದರೆ ಇಲ್ಲಿ 0.9% ಎಂದರೆ – $0.9\% = \frac{0.9}{100}$

$$= \frac{0.09}{10.0}$$

$$= \frac{0.009}{1.00}$$

$$= 0.009$$

28) $\frac{8.64}{0.24} = ?$

ಅ) 3.6 ಆ) 3.06

ಇ) 36 ಈ) 0.36

ಉತ್ತರದ ವಿವರಣೆ : $\frac{8.64}{0.24} = \frac{864}{24} = \frac{108}{3} = 36$

29) $a^\circ+b^\circ+c^\circ$ ನ ಸಂಖ್ಯಾ ಬೆಲೆ ಎಷ್ಟು ?

ಅ) 0 ಆ) 2

ಇ) 3 ಈ) 1

ಉತ್ತರದ ವಿವರಣೆ :

ಘಾತಾಂಕಗಳ ನಿಯಮಗಳ ಪ್ರಕಾರ ಯಾವುದೇ ಸಂಖ್ಯೆಯ ಘಾತಾಂಕ ಸೊನ್ನೆ ಆಗಿದ್ದರೆ ಅದರ ಸಂಖ್ಯಾ ಬೆಲೆ 1.

ಇಲ್ಲಿ ಇಂತಹ ಮೂರು ಸಂಖ್ಯೆಗಳಿವೆ –

$a^\circ = 1 \qquad b^\circ = 1 \qquad c^\circ = 1$

ಆದ್ದರಿಂದ :

$a^\circ+b^\circ+c^\circ = 1 + 1 + 1 = 3.$

30. ಒಂದು ವರ್ಗದ ಬಾಹುವಿನ ಉದ್ದ 8 ಸೆಂ.ಮೀ. ಇದೆ . ಇದನ್ನು 3 ರಷ್ಟು ಹೆಚ್ಚಿಸಿದರೆ ಅದರ ವಿಸ್ತೀರ್ಣ ಎಷ್ಟು ?

ಅ) 121 ಚ.ಸೆಂ.ಮೀ. ಆ) 1024 ಚ.ಸೆಂ.ಮೀ.

ಇ) 576 ಚ.ಸೆಂ.ಮೀ. ಈ) 1032 ಚ.ಸೆಂ.ಮೀ.

ಉತ್ತರದ ವಿವರಣೆ :

ಒಂದು ವರ್ಗದ ಬಾಹುವಿನ ಉದ್ದ = 8 ಸೆಂ.ಮೀ

ಇದನ್ನು ಮೂರರಷ್ಟು ಹೆಚ್ಚಿಸಿದರೆ, ಬಾಹುವಿನ ಉದ್ದ

= 8 x 3

= 24 ಸೆಂಮೀ.

ವರ್ಗದ ವಿಸ್ತೀರ್ಣ = ಬಾಹುವಿನ ವರ್ಗ

= 24 x 24

= 24^2

= 576 ಚದುರ ಸೆಂಟಿ ಮಿಟರ್.

ಉತ್ತರಗಳು

1 ಇ	2 ಆ
3 ಇ	4 ಅ
5 ಇ	6 ಆ
7 ಇ	8 ಇ
9 ಈ	10 ಅ
11 ಈ	12 ಇ
13 ಈ	14 ಇ
15 ಆ	16 ಇ
17 ಇ	18 ಆ
19 ಈ	20 ಇ
21 ಇ	22 ಅ
23 ಆ	24 ಆ
25 ಈ	26 ಅ
27 ಆ	28 ಇ
29 ಇ	30 ಇ